MYSORE EXCISE BILL, 1962.

Motion to Consider

Sri M. V. RAMA RAO (Minister for Law).—Sir, I beg to move :

"That the Mysore Excise Bill, 1962 be taken into consideration."

Mr. SPEAKER.—Motion moved :

"That the Mysore Excise Bill, 1962 be taken into consideration".

† Sri M. V. RAMA RAO.—Sir, this is one of the Bills seeking to bring about uniformity in the application of excise laws throughout the reorganised State of Mysore. The measure envisages the repeal of the Hyderabad Abkari Act and the Madras Abkari Act as well as the old Mysore Excise Act of 1901 and replaces these three enactments by an integrated and uniformly applicable law relating to the matters of excise. The Excise Bill deals in particular with the law relating to the production, manufacture, possession, import, export, transport, purchase and sale of intoxicating liquor and intoxicating drugs in the State of Mysore and with certain othe matters incidental thereto. The main functions of the Excise Law will be to regulate the licensing and autherising of the manufacture, possession, sale, etc. of intoxicating drugs and liquors and on the other hand to regulate the levy of excise duty on the manufacture and sale of intoxicating drugs and liquors. The law seeks to provide for the regulation of both these aspects of excise administration and the provisions in the Bill have been designed with a view to eliminate all that is found inconvenient and repugnant in the existing enactments and to retain and incoporate in the present Bill the salient features which have been found desirable. I commend this Bill for the acceptance of the House.

† ಶ್ರೀ ಎ. ಕೃಷ್ಣ ಶೆಟ್ಟಿ (ಮಂಗಳೂರು-2).—ಸ್ವಾಮಿ, ನಮ್ಮ ಮುಂದಿಟ್ಟಿರುವ ಈ ಅಬ್ಕಾರಿ ವಿಧೇಯಕವನ್ನು ನಾನು ವಿರೋಧಿಸುತ್ತೇನೆ. ಏಕೆಂದರೆ ಇತ್ತೀಚೆಗೆ ನಮ್ಮ ದೇಶದಲ್ಲಿ ನಡೆದ ಘಟನೆಗಳು, ಕೆಲವು ಸಂದರ್ಭದಲ್ಲಾದ ಬದಲಾವಣೆಗಳು ಮೊದಲಾದುವನ್ನೆಲ್ಲಾ ನೋಡುವಾಗ ಮದ್ಯಪಾನ ನಿರೋಧ ಕಾನೂನಿನಲ್ಲಿ ವ್ಯತ್ಯಾಸಗಳು ಬರಲಿಕ್ಕೆ ಅವಕಾಶ ಇದೆ ಎಂಬುದು ಎದ್ದುಕಾಣುತ್ತದೆ. ಎಲ್ಲಾ ಪ್ರಾಂತಗಳಲ್ಲೂ ಇರುವ ಕಾನೂನುಗಳನ್ನೆಲ್ಲಾ ಒಟ್ಟುಗೂಡಿಸಿ ಏಕೆ ಇದನ್ನು ತರಬೇಕೋ ನನಗೆ ಅರ್ಥವಾಗಲಿಲ್ಲ. ಈಗ ನಮ್ಮ ಪ್ರಾಂತಗಳಲ್ಲಿ ಕೆಲವು ಪ್ರಕಾರ ಮದ್ಯಪಾನ ನಿರೋಧ ಕಾನೂನಿದೆ; ಕೆಲವು ಕಡೆ ಇಲ್ಲ. ಇದ್ದೆಡೆಯಲ್ಲಿ ಅದನ್ನು ಮುರಿಯುವುದಕ್ಕೆ ಜನರು ಪ್ರಯತ್ನ ಪಡುತ್ತಾರೆ. ಅದು ಮಾತ್ರವಲ್ಲ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈ ಸಂಬಂಧವಾದ ಕಾನೂನಿದೆ. ಅಲ್ಲಿ ನನಗೆ ತಿಳಿದಂತೆ ಬೆಂಗಳೂರಿಗಿಂತ ಕುಡಿಯುವವರ ಸಂಖ್ಯೆ ಹೆಚ್ಚಾಗಿದೆ, ಈಗ ನಮ್ಮ ದೇಶದಲ್ಲಿ ಒಂದು ಕಡೆ ನಿರೋಧವುಂಟು, ಒಂದು ಕಡೆ ಇಲ್ಲ. ಬೆಂಗಳೂರಿನಲ್ಲಿ ಬೇಕಾದಷ್ಟು ಕುಡಿಯಬಹುದು; ಯಾವ ತೊಂದರೆಯೂ ಇಲ್ಲ. ಅದೇ ಮಂಗಳೂರಿನಲ್ಲಿ ಕುಡಿಯಬಾರದು, ನಿರೋಧ ಮಾಡಲಾಗಿದೆ. ಹೀಗಿರುವಾಗ ನಿರೋಧವನ್ನು ಮುಂದುವರಿಸುವ ಅಭಿಪ್ರಾಯವಿಲ್ಲ. ಒಂದುವೇಳೆ ಸಂಪೂರ್ಣವಾಗಿ ನಿರೋಧ ಮಾಡಿದರೆ ಪರಿಸ್ಥಿತಿ ಏನಾಗುತ್ತದೋ ತಿಳಿಯದು. ಹಾಗಿರುವಾಗ ಕೇಂದ್ರದ ಒಂದು ಕಾನೂನು ವಿಶೇಷ ಮಾರ್ಪಾಟಾಗುವ ಸಂಭವವಿರುವಾಗ ಇದನ್ನೇಕೆ ತರಬೇಕು?

ಶ್ರೀ ಎಂ. ವಿ. ರಾಮರಾವ್.—ಕೇಂದ್ರದ ಕಾನೂನು ಎಂದು ಹೇಳಿದ್ದು ಯಾವ ವಿಷಯದಲ್ಲಿ ಎಂಬುದು ಗೊತ್ತಾಗಲಿಲ್ಲ.

ಶ್ರೀ ಎ. ಕೃಷ್ಣ ಶೆಟ್ಟಿ.—ಪಾನನಿರೋಧದ ವಿಷಯದಲ್ಲಿ. ಪ್ರಜಾಪ್ರಭುತ್ವದಲ್ಲಿ ಜನರಿಗೆ ಹೆಚ್ಚು ಅಧಿಕಾರವಿರುವಾಗ ನಾವು ಕಾನೂನುಗಳನ್ನು ಹೆಚ್ಚಿಸಬೇಕೇ ಅಥವಾ ಕಡಮೆ ಮಾಡಬೇಕೆ ಎಂಬು

ದನ್ನು ಗಮನಿಸಬೇಕು. ಜನರಿಗೆ ಸ್ವಾತಂತ್ರ್ಯ ಹೆಚ್ಚುವಂತೆ ಅನುಕೂಲವಾಗುವಂತ ಕಾನೂನು ಮಾಡಬೇಕಾದ್ದು ಅಗತ್ಯ. ಕಾನೂನುಗಳನ್ನು ಹೆಚ್ಚಿಸಿದರೆ ಜನರು ಸ್ವತಂತ್ರವಾಗಿ ಜೀವನ ಮಾಡುವುದು ಕಷ್ಟವಾಗುತ್ತದೆ. ಈಗ ಸಮಗ್ರ ಕಾನೂನು ಮಾಡಬೇಕೆಂದಿದ್ದಾರೆ, ಸಂತೋಷ. ಆದರೆ ಈ ಅಬ್ಕಾರಿ ಕಾನೂನು ಯಾರಿಗೆ ತೊಂದರೆ ಮಾಡುತ್ತದೆ ಎಂದರೆ ಬಡವರಿಗೆ ಎಂದು ಹೇಳಬೇಕಾಗಿದೆ. ಇದರಿಂದ ಶ್ರೀಮಂತರಿಗೆ ತೊಂದರೆ ಬರುವುದಿಲ್ಲ. ನಮ್ಮಲ್ಲಿ ಅಸೆಂಬ್ಲಿ ಮತ್ತು ಕೌನ್ಸಿಲ್ಲಿನಲ್ಲಿ 268 ಜನ ಸದಸ್ಯರಿದ್ದಾರೆ; ಅದರಲ್ಲಿ 200 ಜನ ಕುಡಿಯುತ್ತಾರೆಂಬ ಸಂಶಯವಿದೆ.

Mr. SPEAKER.—I object to that statement.

ಶ್ರೀ ಎ. ಕೃಷ್ಣಶೆಟ್ಟಿ.—ಯಾವ ಕಾನೂನೇ ಮಾಡಿದರೂ ಅದನ್ನು ಮುರಿಯಲು ಶ್ರೀಮಂತರಿಗೆ ಸುಲಭ, ಬಡವರಿಗೆ ಕಷ್ಟ. ಈ ರೀತಿ ಇರುವಾಗ, ಪಾನನಿರೋಧ ಕಾನೂನು ವಿಫಲವಾಗಿರುವಾಗ, ಯಶಸ್ವಿಯಾಗಿ ಜಾರಿಗೆ ತರಲು ಸಾಧ್ಯವಾಗಿಲ್ಲದಿರುವಾಗ ಒಂದು ಹೊಸ ಕಾನೂನನ್ನು ಈ ರೀತಿ ತಂದರೆ, ಸರ್ಕಾರ ಹೆಚ್ಚು ಅಧಿಕಾರ ಪಡೆದರೆ, ಲಂಚರುಷುವತ್ತು, ಭ್ರಷ್ಟಾಚಾರ ತುಂಬಿತುಳುಕುತ್ತಿರುವುದು ತಾಂಡವಾಡುತ್ತಿರುವುದು ಇನ್ನೂ ಹೆಚ್ಚಿನ ಅಧಿಕಾರಿಗಳ ಜೀವನಕ್ಕೆ ಅನುಕೂಲವಾಗುತ್ತದೆ. ಆದುದರಿಂದ ಈ ಕಾನೂನನ್ನು ಈಗ ತರದೆ ಸ್ವಲ್ಪ ಹಿಂದಕ್ಕೆ ಹಾಕಬೇಕೆಂದು ಹೇಳುತ್ತೇನೆ.

ಇನ್ನು ನಮ್ಮ ಜಿಲ್ಲೆಯ ಮಟ್ಟಿಗೆ ಹೇಳುವುದಾದರೆ ಡೆಫೆನಿಷನ್ ಪ್ರಕಾರ ಡೆಪ್ಯುಟಿ ಕಮಿಷನರಿಗೆ ಬಹಳ ಅಧಿಕಾರ ಬರುತ್ತದೆ. ಅವರಿಗೆ ಇರುವ ಅಧಿಕಾರದ ಜೊತೆಗೆ ಇದೂ ಸೇರಿದರೆ ಬಹಳವಾಗುತ್ತದೆ. ಇದು ಸರಿಯೇ? ಇದನ್ನು ನೋಡಿದರೆ ಇಲ್ಲಿ ಮುಖ್ಯ ಮಂತ್ರಿಗಳಾಗುವುದಕ್ಕೆ ಬದಲು ಒಬ್ಬ ಡೆಪ್ಯುಟಿ ಕಮಿಷನರಾಗುವುದು ಒಳ್ಳೆಯದೆಂದು ತೋರುತ್ತದೆ. ಹೀಗೆ ಒಬ್ಬರಲ್ಲೇ ಎಲ್ಲಾ ಅಧಿಕಾರಗಳೂ ಕೇಂದ್ರೀಕೃತವಾಗುವುದನ್ನು ನೋಡಿದರೆ ನನಗೆ ಆ ಅಭಿಪ್ರಾಯ ಬರುತ್ತದೆ. ಹೆಂಡ ಕೂಡ ವಿವರಣೆಯಲ್ಲಿ ಸೇರುತ್ತದೆ. ಅದೂ ಕೂಡ ಮದ್ಯಪಾನದ ವಸ್ತು. ಅದನ್ನು ಮದ್ಯಪಾನದ ಪಟ್ಟಿಯಲ್ಲಿ ಸೇರಿಸಬಾರದು. ಬಡವರ ಒಂದು ಪಾನೀಯ ಅದು. ಅದನ್ನು ಪ್ರತ್ಯೇಕ ಇಡಬೇಕು. ನಮ್ಮ ಜಿಲ್ಲೆಯಲ್ಲಿ ನೀರ ತಯಾರಿಸುತ್ತಿದ್ದರು. ತಯಾರಿಸಿ ಸ್ವಲ್ಪ ಹೊತ್ತಾದರೆ ಅದು ಕಳ್ಳು ಆಗುತ್ತದೆ. ಕೆಲವು ಸಲ ನೀರ ಎಂದು ಲೇಪನ ಹಾಕಿದ್ದರೂ ಅದು ಕಳ್ಳಾಗಿರುತ್ತದೆ. ಯಾವ ಯಂತ್ರದ ಮೂಲಕ ಅದನ್ನು ನೀರ ಅಥವ ಕಳ್ಳು ಎಂದು ಅಂದಾಜು ಮಾಡುವುದು? ಹಾಗೆ ಮಾಡುವುದು ಅಷ್ಟು ಸುಲಭವಲ್ಲ. ಎರಡನೆಯದಾಗಿ ಹಳ್ಳಿಗಳಲ್ಲಿ ಜನರು ಕಷ್ಟಪಟ್ಟಿರುವಾಗ ಅದರ ಪರಿಹಾರಕ್ಕಾಗಿ ಕಳ್ಳು ಸೇವಿಸುತ್ತಾರೆ, ಅಮಲು ಪಡೆಯುವುದಕ್ಕಲ್ಲ. ಮಾರನೆಯ ದಿನ ತೊಂದರೆಯಿಲ್ಲದೆ ಕೆಲಸ ಮಾಡಲು ಅನುಕೂಲವಾಗಲೆಂದು ಕಷ್ಟಪಟ್ಟು ಕೆಲಸ ಮಾಡಿದವರು ಕಳ್ಳು ಕುಡಿಯುವುದುಂಟು. ಈಗ ಅದು ದೊಡ್ಡ ಮದ್ಯಪಾನ ಆಗಿದೆ. ಸಾಹುಕಾರರ ವಿಚಾರ ನಾನು ಹೇಳುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಕಳ್ಳನ್ನು ಅಮಲು ಪದಾರ್ಥವೆಂದು ಪರಿಗಣಿಸಿದರೆ ನಿಜವಾಗಿಯೂ ಪಾನನಿರೋಧದ ಕಾನೂನನ್ನು ಮುರಿಯಲು ಅನುಕೂಲ ಹೆಚ್ಚಾಗಿರುತ್ತದೆ. ಕಳ್ಳು ಕುಡಿಯುವವರು ಅದನ್ನು ಬಿಟ್ಟು ಹೆಚ್ಚಾಗಿ ಸಾರಾಯಿ ಕುಡಿಯುವುದಿಲ್ಲ; ಕಳ್ಳಬಟ್ಟಿ ಕುಡಿಯುವುದಿಲ್ಲ. ಕಳ್ಳು ಕುಡಿದರೆ ಅವರ ಆರೋಗ್ಯ ಸುಧಾರಿಸಬಹುದು; ಇಲ್ಲದಿದ್ದರೆ ಆರೋಗ್ಯ ಕೆಡುತ್ತದೆ. ಸಿಕ್ಕಿದ್ದನ್ನು ಕುಡಿಯುವುದರಿಂದ ಶರೀರ ಹಾಳಾಗಿ ಹೋಗುತ್ತದೆ. ಈ ವಿಧೇಯಕದಿಂದ ಅನುಕೂಲವಾಗುವುದಕ್ಕೆ ಬದಲು ಅನಾನುಕೂಲವಾಗುತ್ತದೆ. ಆದುದರಿಂದ ಈ ಕಾನೂನನ್ನು ಸ್ವಲ್ಪ ಸಡಿಲ ಮಾಡಿ ಕಳ್ಳನ್ನು ಅಮಲು ಪದಾರ್ಥಗಳ ಜೊತೆಗೆ ಸೇರಿಸಬಾರದೆಂದು ಕೇಳಿಕೊಳ್ಳುತ್ತೇನೆ.

ಈ ಮಸೂದೆಯಲ್ಲಿ ದಂಡವನ್ನು ವಸೂಲು ಮಾಡುವ ಬಗ್ಗೆ ಇರುವಂಥಾ ಸೆಕ್ಷನನ್ನು ನೋಡಿದರೆ ಇದು ಒಂದು ಪ್ಯೂನಿಟೀವ್ ಟ್ಯಾಕ್ಸ್ ಆಗುತ್ತದೆ. ಕೆಲವರ ಮನೆಯಲ್ಲಿ ಮತ್ತು ಕೆಲವರ ಭೂಮಿಯಲ್ಲಿ ಕೆಲವರು ಕಳ್ಳಬಟ್ಟಿ ಸಾರಾಯನ್ನು ತಯಾರು ಮಾಡುತ್ತಾರೆ. ಆದರೆ ಅದರ ಹೊಣೆಗಾರಿಕೆ, ಆ ತಪ್ಪು ಯಾರ ಮೇಲೋ ಬೀಳುತ್ತದೆ. ಹೀಗೆಲ್ಲಾ ಇರುವಾಗ ಈ ಒಂದು ವಿಷಯದಲ್ಲಿ ಈ ರೀತಿ ದಂಡವನ್ನು ವಸೂಲು ಮಾಡುವ ಕ್ರಮವನ್ನು ಇಟ್ಟುಕೊಂಡಿರುವುದು ಸರಿಯಲ್ಲ ಎಂದು ಕಾಣುತ್ತದೆ. ದಂಡವನ್ನು ವಸೂಲು ಮಾಡುವುದು ಮತ್ತು ಫೈನನ್ನು ವಸೂಲು ಮಾಡುವುದು ನಿಜವಾಗಿಯೂ ಯಾರು ತಪ್ಪಿತಸ್ಥನಾಗಿರುತ್ತಾನೆಯೋ, ಅವನಿಂದ ಅದನ್ನು ವಸೂಲು ಮಾಡುವುದಕ್ಕೆ ಸಾಧ್ಯವಿಲ್ಲ. ನ್ಯಾಯವಾದ ರೀತಿಯಲ್ಲಿ ಕಾನೂನು ಪ್ರಕಾರ ತಪ್ಪು ಮಾಡಿದ್ದು ರುಜುವಾತು ಆದರೆ ಆಗ ತಪ್ಪು ಸಿಕ್ಕುತ್ತದೆ. ಆ ರೀತಿ ಮಾಡಿ ಅವನು ಶಿಕ್ಷಾರ್ಹ ಎಂದು ಹೇಳಿ, ತಪ್ಪು ಮಾಡಿದವನಿಂದ ದಂಡವನ್ನು ವಸೂಲು ಮಾಡುವುದಕ್ಕೆ ಈ ಸರ್ಕಾರಕ್ಕೆ ಸಾಧ್ಯವಿಲ್ಲ. ಆದರೆ ಈ ಒಂದು ರೀತಿಯ ಕಾನೂನನ್ನು ತರುವುದಕ್ಕೆ ಸರ್ಕಾರ ಬಂದದ್ದು ಸರಿಯಲ್ಲ. ಸೆಕ್ಷನ್ 20ರಲ್ಲಿ ಇದಕ್ಕೆಲ್ಲಾ ಸೇರಿದಂತೆ ಬೇರೆ ಕಾನೂನುಗಳು ಇದೆ. ಪೋಲೀಸ್ ಆಕ್ಟಿನಲ್ಲಿ ಕೆಲವಾರು ತಪ್ಪುಗಳಿಗೆ ಶಿಕ್ಷೆಯನ್ನು ತರಬಹುದು ಮತ್ತು ಬೇರೆ ಕಾನೂನುಗಳಲ್ಲಿ ಕೂಡ ತಪ್ಪುಗಳಿಗೆ ಶಿಕ್ಷೆಯನ್ನ ತರಬಹುದು. ಹೀಗೆಲ್ಲಾ ಇದೆ.

(ಶ್ರೀ ಎ. ಕೃಷ್ಣಶೆಟ್ಟಿ)

ಆಮೇಲೆ Prohibition of employment of Children and Women—

ಇದರ ಬಗ್ಗೆ ಹೇಳುವುದಾದರೆ ಮಾನ್ಯ ಮಂತ್ರಿಗಳು ಗುಪ್ತಚಾರರಾಗಿ ಸ್ವಲ್ಪ ವೇಷವನ್ನು ಬದಲಾಯಿಸಿಕೊಂಡು ಹೋಗಿ ನಮ್ಮ ಜಿಲ್ಲೆಯಲ್ಲಿ ಕೆಲವು ಪ್ರದೇಶಗಳನ್ನು ನೋಡಬೇಕು. ಆಗ ಅಲ್ಲಿ ಏನೇನು ನಡೆಯುತ್ತದೆ ಎಂಬುದು ಗೊತ್ತಾಗುತ್ತದೆ. ಅಲ್ಲಿ ಏನೇನು ನಡೆಯುತ್ತದೆ ಎನ್ನುವುದನ್ನು ಕಣ್ಣಾರೆ ನೋಡಿ ಕಿವಿಯಾರೆ ಕೇಳಬೇಕು. ಆಗ ಅಲ್ಲಿನ ವಿಷಯಗಳು ಮಾನ್ಯ ಮಂತ್ರಿಗಳಿಗೆ ಗೊತ್ತಾಗುತ್ತದೆ. ಸಾಧಾರಣವಾದ ಮಕ್ಕಳು ಮತ್ತು ಹೆಂಗಸರೂ ಕೂಡ ಈ ಮದ್ಯಪಾನ ನಿರೋಧದ ಕಾನೂನನ್ನು ಮುರಿಯುವುದಕ್ಕೆ ತೊಡಗಿದ್ದಾರೆ. ಅದನ್ನೆಲ್ಲಾ ಪತ್ತೆ ಹಚ್ಚುವುದು ಕಷ್ಟ ಇದೆ. ಅವರಿಗೆ ಬಡತನದ ಕಷ್ಟ ಇದೆ. ಮತ್ತೆ ಇತರೇ ಕಷ್ಟಗಳಿವೆ. ಇಂಥಾ ಕಷ್ಟಗಳಿಂದ ಅವರು ಪಾರಾಗಬೇಕಾದರೆ ಸುಲಭವಾಗಿ ಸಂಪಾದನೆಯಾಗತಕ್ಕಂಥ ಇಂಥಾ ಕೆಲಸಗಳನ್ನು ಅವರು ಕೈಗೊಳ್ಳುತ್ತಾರೆ. ನಿರುದ್ಯೋಗ ಇರುವಾಗ ಅವರು ಮಾಡತಕ್ಕ ಕೆಲಸ ತಪ್ಪು ಎಂದು ನಾನು ಹೇಳುವುದಿಲ್ಲ. ಮಕ್ಕಳ ಮಧ್ಯೆ ಹೆಂಗಸರ ಮಧ್ಯೆ ಈ ರೀತಿ ಕಾನೂನನ್ನು ಮುರಿಯುವ ಕೆಲಸಗಳು ನಡೆಯುತ್ತಿರುವಾಗ ಅವರನ್ನು ಶಿಕ್ಷಿಸುವ ರೀತಿಯಲ್ಲಿ ಮಾಡಬಾರದು. ಅದನ್ನು ಯಾವ ರೀತಿ ತಪ್ಪಿಸಬೇಕೋ ಆ ರೀತಿ ತಪ್ಪಿಸಬೇಕು. ಅವರು ಬೇರೆ ಕಾರ್ಯಗಳನ್ನು, ಕೆಲಸಗಳನ್ನು ಮಾಡುವಂತಾ ಹೊಸ ಜಾಗೃತಿಯನ್ನು ಹುಟ್ಟಿಸುವಂತಹ ಪ್ರಯತ್ನವನ್ನು ಮಾಡಬೇಕು. ಮಕ್ಕಳು, ಹೆಂಗಸರು ಇಂಥಾ ಕಾನೂನು ಮುರಿಯುವಂಥಾ ಕೆಲಸಗಳನ್ನು ಮಾಡುತ್ತಾರೆ. ಅವರು ಮಾಡತಕ್ಕ ಕೆಲಸಗಳಿಗೆ, ತಪ್ಪುಗಳಿಗೆ ಯಮದಂಡ ಶಿಕ್ಷೆಯನ್ನು ಮಾಡಬೇಕು ಎನ್ನುವಂಥಾ ಉದ್ದೇಶದಿಂದ ಕಾನೂನುಗಳನ್ನು ಮಾಡಬಾರದು. ಪ್ರಜಾಪ್ರಭುತ್ವದಲ್ಲಿ ಪ್ರಜೆಗಳ ಪ್ರತಿನಿಧಿಗಳಾಗಿ ಬಂದು ಪ್ರಜೆಗಳಿಗೆ ಅನುಕೂಲವಾಗುವಂತಹ ಒಂದು ಒಳ್ಳೆಯ ಕೆಲಸವನ್ನು ಮಾಡುವ ರೀತಿಯಲ್ಲಿ ಇದನ್ನು ಮಾಡಬೇಕೆಂದು ನಾನು ಸರ್ಕಾರಕ್ಕೆ ವಿನಂತಿ ಮಾಡಿಕೊಳುತ್ತೇನೆ. ಈ ಕಾನೂನನ್ನು ಎಲ್ಲರೂ ಕುಡಿಯುವ ಹಾಗೆ ತಂದಿದ್ದಾರೆಂದು ನಾನು ಹೇಳುತ್ತೇನೆ. ಒಳ್ಳೆಯ ಅಮಲು ಇರುವ ಪದಾರ್ಥಗಳನ್ನು ಪರದೇಶದಿಂದ ತರಿಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದಾರೆ. ಬ್ರಾಂದಿ, ವಿಸ್ಕಿ, ಜಿನ್, ವೈನು ಮುಂತಾದ ಪಾನೀಯಗಳನ್ನು ಪರದೇಶಗಳಿಂದ ತರಿಸಿ ಅವುಗಳನ್ನು ಅನೇಕರು ಕುಡಿಯುತ್ತಾರೆ. ಆದರೆ ಬಡವ ಹಣವನ್ನು ಸಂಪಾದನೆ ಮಾಡುವುದಕ್ಕೆ ಕಷ್ಟಪಟ್ಟು ಕೆಲಸ ಮಾಡಿರುತ್ತಾನೆ. ಏನೋ ಸ್ವಲ್ಪ ಆಯಾಸವನ್ನು ನೀಗುವುದಕ್ಕೆ ಸ್ವಲ್ಪ ಕುಡಿಯುತ್ತಾನೆ. ಅದಕ್ಕೋಸ್ಕರ ಒಂದು ಯಮದಂಡವನ್ನು ವಿಧಿಸುವಂಥಾ ಒಂದು ಕಾನೂನನ್ನು ತಂದಿದ್ದೀರಿ! ಹೀಗಿರುವಾಗ ಇಡೀ ರಾಜ್ಯದಲ್ಲೆಲ್ಲಾ ಪ್ರೊಹಿಬಿಷನ್ ಕಾನೂನು ಜಾರಿಗೆ ಬಾರದೆ ಇರುವ ಹೊತ್ತಿಗೆ, ಈ ಕಾನೂನನ್ನು ಕೂಡ ಸ್ವಲ್ಪ ತಡಮಾಡಿ ತಂದರೆ ಒಳ್ಳೆಯದು. ಈಗ ಇದನ್ನು ತರುವುದು ಬೇಡ ಎಂದು ಹೇಳಿ ಈ ಮಸೂದೆಯನ್ನು ನಾನು ವಿರೋಧಿಸುತ್ತೇನೆ. ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಗೋಪಾಲಸಾಲೆನ್ನ (ಮೂಡಬಿದರೆ).—ಸನ್ಮಾನ್ಯ ಅಧ್ಯಕ್ಷರೇ ಈ ಎಕ್ಸೈಜ್ ಮಸೂದೆಯನ್ನು ಸರ್ಕಾರದವರು ಈ ಸಭೆಯ ಮುಂದೆ ತರುವಾಗ ಒಂದು ಸರಿಸಮನಾದ ಯೂನಿಫಾರಂ ಕಾನೂನನ್ನು ತರಬೇಕು. ಈಗ ರಾಜ್ಯದಲ್ಲಿ ಒಂದೊಂದು ಭಾಗದಲ್ಲಿ ಒಂದೊಂದು ರೀತಿಯ ಕಾನೂನು ಇದೆ. ಆದ್ದರಿಂದ ಏಕರೂಪತೆಯ ಕಾನೂನನ್ನು ತಂದು ರಾಜ್ಯದ ಆಡಳಿತಕ್ಕೆ ಸಹಾಯ ಮಾಡಬೇಕು ಎಂದು ಹೇಳುತ್ತಿದ್ದಾರೆ. ಆದರೆ ಏಕರೂಪತೆಯ ಕಾನೂನು ಎಂಬುದರ ಅರ್ಥವಾದರೂ ಏನು ಎಂಬುದನ್ನು ತಿಳಿದುಕೊಳ್ಳುವುದಕ್ಕೆ ನನಗೆ ಕಷ್ಟವಾಗಿದೆ. ಯಾಕೆಂದರೆ ಒಂದು ಕಡೆಯಲ್ಲಿ ಸಾರಾಯಿ ಷರಾಬು ಇವುಗಳನ್ನು ಕುಡಿಯುತ್ತಿದ್ದಾರೆ. ಇನ್ನೊಂದು ಕಡೆಯಲ್ಲಿ ಅಂಥಾ ಅಮಲು ಪದಾರ್ಥಗಳನ್ನು ಕುಡಿಯಬಾರದು ಎಂದು ಹೇಳುವಂಥಾ ಕಲ್ಪನೆ ಏನು ಎಂಬುದು ಗೊತ್ತಾಗಲಿಲ್ಲ. ಹೀಗೆ ಒಂದು ಕಡೆ ಜನ ಕುಡಿಯುವುದು ಇನ್ನೊಂದು ಕಡೆ ಕುಡಿಯದೇ ಇರುವುದು ಇಂಥಾ ಒಂದು ತಾರತಮ್ಯ ಇರುವಾಗ ರಾಜ್ಯಕ್ಕೆಲ್ಲಾ ಅನ್ವಯಿಸುವಂಥಾ ಏಕರೂಪತೆಯ ಕಾಯಿದೆಯು ಜಾರಿಗೆ ಬರುತ್ತದೆಯೇ ಎಂಬುದನ್ನು ನಾನು ಸರ್ಕಾರದವರನ್ನು ಕೇಳಬೇಕಾಗಿದೆ. ಈಗ ಒಂದು ಜನತೆಗೆ ಮೂಲಭೂತವಾದ ಹಕ್ಕಾಗಿರುವಂಥಾ ಯಾವುದಾದರೂ ಪದಾರ್ಥಗಳನ್ನು ಸೇವಿಸಿ ತಮ್ಮ ಯೋಗ್ಯವಾದ ಮರ್ಯಾದೆಯ ಜೀವನವನ್ನು ನಡೆಸುವ ಒಂದು ಹಕ್ಕುಬಾಧ್ಯತೆಗಳನ್ನು ಕಾನೂನು ಮೂಲಕ ನಿರ್ಬಂಧಿಸುತ್ತಿದ್ದಾರೆ. ಇದರಲ್ಲಿ ಯಾವ ಒಂದು ಕಟ್ಟುನಿಟ್ಟಾದ ನಿಯಮವೂ ಇಲ್ಲ. ಅನುಕೂಲ ಇದ್ದವರು ಪರ್ಮಿಟ್ ತೆಗೆದುಕೊಂಡು ಕೆಲವು ಪಾನೀಯಗಳನ್ನು ಕುಡಿಯುತ್ತಾರೆ ಅನುಕೂಲವಿಲ್ಲದವರು ಕಳ್ಳಭಟ್ಟಿಯಲ್ಲಿ ತಯಾರಾಗತಕ್ಕ ಪದಾರ್ಥಗಳನ್ನು ಉಪಯೋಗ ಮಾಡಿಕೊಂಡು ತಮ್ಮ ಜೀವನವನ್ನೂ ಮತ್ತು ತಮ್ಮ ಸಂಸಾರವನ್ನು ಹಾಳುಮಾಡಿಕೊಂಡು ಆಸ್ಪತ್ರೆಗಳಿಗೆ

ಹೋಗಿ ಬೀಳುತ್ತಾರೆ. ಈ ರೀತಿಯು ಒಂದು ಆಡಳಿತ ನೀತಿಯೆನ್ನು ಸರ್ಕಾರದವರು ನಿರ್ವಹಿಸಿ ಜನಸಾಮಾನ್ಯರಲ್ಲಿ ಡಿಸ್ಕ್ರಿಮಿನೇಷನ್ ಅನ್ನು ಯಾತಕ್ಕೆ ತಂದೊಡ್ಡುತ್ತಿದ್ದಾರೆಂಬುದನ್ನು ವಿಮರ್ಶೆ ಮಾಡತಕ್ಕ ವಿಚಾರ.

ಈ ಕಾಯಿದೆಯಲ್ಲಿ ಕೆಲವು ಅಮಲು ಪದಾರ್ಥಗಳನ್ನು ಎಗ್ಜೆಂಟ್ ಮಾಡಬಹುದೆಂದು ಹೇಳಿದೆ. ಈಗಾಗಲೇ ಶ್ರೀ ಕೃಷ್ಣಸೆಟ್ಟರು ಹೇಳಿದಹಾಗೆ ಈ ಕಳ್ಳನ್ನು ವಿನಾಯಿತಿ ಮಾಡಿ ಇದನ್ನೊಂದು ಗುಡಿ ಕೈಗಾರಿಕೆಯನ್ನಾಗಿ ಮಾಡಿ. ಇದರಿಂದ ಬೆಲ್ಲವೋ ಅಥವಾ ಸಕ್ಕರೆಯೋ ಇಂಥಾ ಯಾವುದಾದ ರೊಂದು ವಸ್ತುವನ್ನು ತಯಾರುಮಾಡಲಿಕ್ಕೆ ಅವಕಾಶವಾಗುತ್ತದೆ. ಆದುದರಿಂದ ಸರ್ಕಾರದವರು ಇದನ್ನು ಒಂದು ಗುಡಿ ಕೈಗಾರಿಕೆ ಎಂತ ಸಾರಿ ಇದಕ್ಕೆ ಸಂಪೂರ್ಣ ವಿನಾಯಿತಿ ಕೊಡಬೇಕೆಂದು ಹೇಳುತ್ತೇನೆ. ಇದರಿಂದ ಪಾನೀಯ ಮಾಡತಕ್ಕವರಿಗೂ ಒಂದು ಅವಕಾಶವನ್ನು ಕಲ್ಪಿಸಿಕೊಟ್ಟ ಹಾಗೆ ಆಗುತ್ತದೆ. ಇದರಿಂದ ಇಲ್ಲಿಸಿಟ್ ಆರಕ್‌ನ ಬಳಕೆಯನ್ನೂ ತಪ್ಪಿಸಿದ ಹಾಗೆ ಆಗುತ್ತದೆ. ಇದನ್ನು ಜನರು ಒಂದು ಆಹಾರವನ್ನುವಿನಂತೆ ಬಳಸಲು ಅವಕಾಶ ಕಲ್ಪಿಸಿದಂತೆ ಆಗುತ್ತದೆ. ಕಳ್ಳಭಟ್ಟಿ ತಯಾರಿಕೆಯೂ ಕೂಡ ಇದರಿಂದ ನಿಂತುಹೋಗುತ್ತದೆ. ತನ್ಮೂಲಕ ಜನರ ಆರೋಗ್ಯ ಹಾಳಾಗುವುದೂ ಕೂಡ ತಪ್ಪುತ್ತದೆ. ಈ ಎಲ್ಲ ದೃಷ್ಟಿಗಳಿಂದಲೂ ಈ ಕಳ್ಳಿಗೆ ಈ ವ ಸೂದೆಯಲ್ಲಿ ಸಂಪೂರ್ಣ ವಿನಾಯಿತಿ ಕೊಡಬೇಕಾದ್ದು ಅಗತ್ಯ ಎಂದು ಹೇಳುತ್ತೇನೆ.

2-30 P.M.

ಇನ್ನು ಈ ಕಳ್ಳು ಇಲ್ಲಿ ಹೇಳಿರುವ ಪ್ರಕಾರ ಲೈಸೆನ್ಸ್‌ದಾರನೇ ಮಾರಬೇಕೆಂದು ಹೇಳಿದೆ. ಇನ್ನು ಕಳ್ಳು ತೆಗಿಯುವ ಉದ್ಯಮವನ್ನು ಬೇರೆ ಬಡಪಾಯಿಗಳು ಮಾಡುತ್ತಿದ್ದಾರೆ. ಇದರಿಂದ ನಗರಗಳಲ್ಲಿರತಕ್ಕ ಶ್ರೀಮಂತರು ಸುಖ ಸೌಖ್ಯದಿಂದ ಬೇಕಾದಷ್ಟು ವರಮಾನ ಪಡೆದು ಜೀವಿಸಲು ಅವರಿಗೆ ಇದರಿಂದ ಒಂದು ಒಳ್ಳೆ ಅವಕಾಶ ಉಂಟಾಯಿತು. ಬಡವರಿಗೇನೂ ಇದರಿಂದ ಪ್ರಯೋಜನ ವಾಗಲಿಲ್ಲ. ಅನೇಕ ಸಂದರ್ಭಗಳಲ್ಲಿ ಈ ಕಳ್ಳು ತೆಗೆಯುವ ಉದ್ಯಮದಲ್ಲಿರತಕ್ಕ ಜನರು ಮರದಿಂದ ಬಿದ್ದು ಕೈಕಾಲುಗಳನ್ನು ಮುರಿದುಕೊಂಡು ಇಡೀ ಸಂಸಾರಗಳೂ ಹಾಳಾಗಿರತಕ್ಕ ನಿದರ್ಶನಗಳು ಅನೇಕ ಇವೆ. ಆದುದರಿಂದ ಈಗ ಈ ಕಳ್ಳಿನ ಮಾರಾಟವನ್ನು ಯಾರಿಗೆ ಮನಾಫಲಿ ಮಾಡಿಕೊಟ್ಟಿ ದೆಯೋ ಅದನ್ನು ತಪ್ಪಿಸಿ, ಈ ಮಾರಾಟವನ್ನೂ ಸಹಾ ಈ ಕಳ್ಳು ತೆಗೆಯುವ ಉದ್ಯಮದಲ್ಲಿರತಕ್ಕವ ರಿಗೇ ಕೊಟ್ಟರೆ ಅವರ ಸ್ಥಿತಿಗತಿಗಳು ಸ್ವಲ್ಪಮಟ್ಟಿಗೆ ಉತ್ತಮಗೊಳ್ಳಲು ಒಂದು ಅವಕಾಶ ಆಗುತ್ತದೆ. ಆದುದರಿಂದ ಇನ್ನುಮುಂದಕ್ಕೆ ಕಳ್ಳನ್ನು ಯಾರು ತೆಗೆಯುತ್ತಾರೆಯೋ ಅವರಿಗೇ ಇದರ ಮಾರಾಟದ ಲೈಸನ್ಸ್‌ನ್ನೂ ಸಹಾ ಕೊಟ್ಟು ಅವರ ಎಕನಾಮಿಕ್ ಕಂಡೀಷನ್ ಸ್ವಲ್ಪಮಟ್ಟಿಗಾದರೂ ಉತ್ತಮ ಗೊಳ್ಳುವಂತೆ ಅವಕಾಶ ಕಲ್ಪಿಸಿಕೊಡಬೇಕೆಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದ ರಿಂದ ಈ ಕಳ್ಳನ್ನು ಅಡಲ್ಟ್ರೇಷನ್ ಮಾಡುವುದೂ ಕೂಡ ತಪ್ಪುತ್ತದೆ. ಮರದ ಹತ್ತಿರ ಈ ಲಿಕ್ಕ ರನ್ನು ತೆಗೆಯುವ ಕಾಲಕ್ಕೆ ಅಲ್ಲೇ ಅದನ್ನು ಕುಡಿದರೆ, ಇದು ಫ್ರೆಷ್ ಆಗಿರುವಾಗ ಅಷ್ಟು ಅಮಲಿರು ವುದಿಲ್ಲ ಎಂದು ಹೇಳುತ್ತಾರೆ. ಇದರಿಂದ ಇದನ್ನು ಪಟ್ಟಣಗಳಿಗೆ ತಂದು ಅಡಲ್ಟ್ರೇಟ್ ಮಾಡತಕ್ಕ ಅವಕಾಶವೂ ತಪ್ಪುತ್ತದೆ. ಆದುದರಿಂದ ಈ ಮಸೂದೆಯಲ್ಲಿ ಇದಕ್ಕೆ ಸಂಪೂರ್ಣ ವಿನಾಯಿತಿ ಕೊಡ ಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಇದರಲ್ಲಿ ಹೆಂಗಸರು ಮಕ್ಕಳನ್ನು ಇಲ್ಲಿ ಕೂಲಿಗೆ ಇಡಬಾರದೆಂದು ಹೇಳಿದೆ. ಆದರೆ ಪರ್ಮಿಷನ್ ಪಡೆದು ಹೆಂಗಸರನ್ನು ಮಾತ್ರ ಕೂಲಿಗೆ ಇಟ್ಟುಕೊಳ್ಳಬಹುದೆಂದು ತಿಳಿಸಲಾಗಿದೆ. ಕುಡು ಕರ ಮಧ್ಯದಲ್ಲಿ ಹೆಂಗಸರನ್ನು ಇಡುವುದೂ ಕೂಡ ಸರಿಯಲ್ಲ. ಇದಕ್ಕೂ ಸಹಾ ಅವಕಾಶ ಇರಬಾರ ದೆಂದು ಹೇಳುತ್ತೇನೆ.

ಇನ್ನು ತಕ್ಸೀರುಗಳಿಗೆ ಸಂಬಂಧಪಟ್ಟ ಹಾಗೆ ಪೂರ್ತಿ ಅಧಿಕಾರವನ್ನು ಅಧಿಕಾರಿಗಳ ಕೈಗೆ ಕೊಡಲಾಗಿದೆ. ಈ ವಿಚಾರದಲ್ಲಿ ರೆವಿನ್ಯೂ, ಎಕ್ಸೈಜ್ ಮತ್ತು ಪೋಲೀಸ್ ಅಧಿಕಾರಿಗಳಿಗೆ ಪೂರ್ಣಾಧಿಕಾರವನ್ನು ಕೊಟ್ಟಿದ್ದಾರೆ. ಆದರೆ ಇವರೆಲ್ಲರೂ ಇದನ್ನು ಚಾಲೂ ಮಾಡುವಾಗ ಇವರ ಯೋಗ್ಯತೆ, ಇವರ ದಕ್ಷತೆ, ಹಾಗೂ ಇವರ ದುರಾಚಾರ ಎಷ್ಟರಮಟ್ಟಿಗಿರುತ್ತದೆ ಎಂಬುದನ್ನು ಈಗ ಹೇಳುವುದಕ್ಕಾಗುವುದಿಲ್ಲ. ಆದರೆ ಸದ್ಯ ಪ್ರೊಹಿಬಿಷನ್ ಜಾರೀಲಿರುವ ಕಡೆಗಳಲ್ಲಿ ಈ ಅಧಿಕಾರಿ ಗಳಿಂದ ಸಭ್ಯ ಗೃಹಸ್ತರಿಗೆ ಇರಲು ತುಂಬಾ ತೊಂದರೆ ಆಗಿದೆ ಎಂದು ನಮಗೆ ತಿಳಿದುಬಂದಿದೆ. ಕೆಲವು ಕಡೆ ಈ ಇಲ್ಲಿಸಿಟ್ ಲಿಕ್ಕರನ್ನು ಮಾರಾಟ ಮಾಡುವ ಕಡೆ ಹೆಂಗಸರನ್ನಿಟ್ಟುಕೊಂಡು ಅವರು ಜನರನ್ನು ಆಕರ್ಷಣೆ ಮಾಡುತ್ತಿದ್ದಾರೆ. ಇಲ್ಲಿ ಹೆಂಗಸರನ್ನು ಇಟ್ಟುಕೊಳ್ಳಲು ಅನುಮತಿ ಇರಲಿ, ಇಲ್ಲದಿರಲಿ ಅವರು ಈ ಕೆಟ್ಟ ಕೃತ್ಯವನ್ನು ಮಾಡುತ್ತಿದ್ದಾರೆ. ಇದನ್ನು ಸರ್ಕಾರದವರು ಕೂಡಲೇ ನಿಲ್ಲಿಸಬೇಕೆಂದು ಹೇಳುತ್ತೇನೆ. ಆದರೆ ಪ್ರೊಹಿಬಿಷನ್ ನೆಪದಲ್ಲಿ ಅಧಿಕಾರಿಗಳು ಸಭ್ಯಗೃಹಸ್ಥರುಗಳ

(ಶ್ರೀ ಗೋಪಾಲಸಾಲೆನ್ನ)

ಮನೆಗಳಿಗೆ ನುಗ್ಗಿ ಅವರಿಗೆಲ್ಲಾ ತೊಂದರೆ ಆಗುತ್ತಿದೆ ಎಂದು ಕೇಳುತ್ತೇವೆ. ಇದು ಬಹಳ ಅನ್ಯಾಯ. ಈ ಒಂದು ನಪದಲ್ಲಿ ಪೋಲೀಸಿನವರು ಕಾಂಗ್ರೆಸೇತರರನ್ನು ಪೀಡಿಸಲು ಇದು ತುಂಬಾ ಸಹಕಾರಿಯಾಗಿದೆ. ಅವರಿಗೆ ಕಾಂಗ್ರೆಸ್ಸಿನವರನ್ನು ಹಿಡಿಯುವುದಕ್ಕೆ ಧೈರ್ಯವಿಲ್ಲ.

ಅಧ್ಯಕ್ಷರು.—ಮದ್ರಾಸ್ ರಾಜ್ಯದಲ್ಲಿ ಈಗಲೂ ಆ 1866ನೇ ಅಬ್ಕಾರಿ ನಿಬಂಧದ ಕಾನೂನು ಇದ್ದೇ ಇದೆ. ಅದನ್ನು ತೆಗೆದು ಈಗ ಇದನ್ನು ಅಲ್ಲಿ ಜಾರಿಗೆ ಕೊಡುತ್ತಾರೆ, ಅಷ್ಟೆ.

ಶ್ರೀ ಗೋಪಾಲ ಸಾಲೆನ್ನ.—ಆದರೆ ಅಕಾಲದಲ್ಲಿದ್ದ ಅಧಿಕಾರಿಗಳ ಮಟ್ಟ ಮತ್ತು ಅವರ ಜಾಗ್ರತೆ, ಅವರ ದಕ್ಷತೆ ಈಗಿನ ಅಧಿಕಾರಿಗಳಲ್ಲಿಲ್ಲ. ಜನರಿಗೆ ಈಗಿನ ಅಧಿಕಾರಿಗಳಲ್ಲಿ ನಂಬಿಕೆ ಇಲ್ಲ. ಇದರಿಂದ ಸಭ್ಯ ಗೃಹಸ್ಥರ ಜೀವನಕ್ಕೆ ಬಹಳ ತೊಂದರೆ ಆಗಿದೆ.

†ಶ್ರೀ ಎಂ. ವಿ. ರಾಮರಾವ್.—ಮದರಾಸು ರಾಜ್ಯದಲ್ಲಿ ಪಾನನಿರೋಧ ಜಾರಿಗೆ ಬಂದು ಬಹಳ ವರ್ಷಗಳಾಗಿವೆ. ಪಾನ ನಿರೋಧ ಬಂದ ಅನೇಕ ವರ್ಷಗಳ ಕಾಲ ದಕ್ಷಿಣ ಕನ್ನಡ ಜಿಲ್ಲೆಯೂ ಮದರಾಸು ರಾಜ್ಯದಲ್ಲೇ ಇತ್ತು. ಆದುದರಿಂದ ಹಿಂದೆ ಮದರಾಸು ರಾಜ್ಯದಲ್ಲಿದ್ದಾಗ ಹೇಗೆ ಇತ್ತು ಅಥವಾ ಈಗೇನಾದರೂ ವ್ಯತ್ಯಾಸಗಳಾಗಿದೆಯೇ ಎನ್ನುವುದನ್ನು ಇಲ್ಲಿ ತಿಳಿಸಿದರೆ ಅನುಕೂಲ ವಾಗಿರುತ್ತದೆ.

ಶ್ರೀ ಗೋಪಾಲ ಸಾಲೆನ್ನ.—ಮಾನ್ಯ ಮಂತ್ರಿಗಳು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪಾನನಿರೋಧ ಜಾರಿಯಲ್ಲಿದ್ದ ಕಾಲದಲ್ಲಿ ಅಲ್ಲಿನ ಜನರಿಗಿದ್ದ ಗೌರವ ಮತ್ತು ಅವರ ನೈತಿಕಮಟ್ಟ ಎಷ್ಟರಮಟ್ಟಿಗಿತ್ತು ಎನ್ನುವುದನ್ನು ವಿಚಾರಿಸುವಾಗ ನಮ್ಮ ಜಿಲ್ಲೆಯಲ್ಲಿ ಈ ಹಿಂದೆ ಗೃಹಶಾಖಾ ಮಂತ್ರಿಗಳಾಗಿದ್ದ ಶ್ರೀವರ್ಮಾ ಚನ್ನಬಸಪ್ಪನವರು ಒಂದು ದೊಡ್ಡ ಧಾಳಿಯನ್ನೇ ನಮ್ಮ ಜಿಲ್ಲೆಯಲ್ಲಿ ಮಾಡಿದರು. ಆ ಕಾಲದಲ್ಲಿ ತೆಗೆದಂತಹ ಗಡಿಗೆಗಳು ಮತ್ತು ಷರಾಬು ಮಾರುತ್ತಿದ್ದಂತಹ ಸಂದರ್ಭ ಹಿಂದೆ ಯಾವಾಗಲೂ ಇರಲಿಕ್ಕಿಲ್ಲ. ಅಂತಹ ಒಂದು ದೊಡ್ಡ ಧಾಳಿ ಮಾಡಿ ಅವನ್ನು ಪತ್ತೆ ಹಚ್ಚಲು ಪ್ರಯತ್ನ ನಡೆಸಿದ್ದರು ಎಂದು ಗೊತ್ತಾಗಿದ್ದುದು ಮುಂದೇನಾಯಿತೋ ಅದು ಗೊತ್ತೂ ಆಗಲಿಲ್ಲ ಮತ್ತು ಈ ಕೇಸು ವಾಪಸ್ಸು ಆಯಿತು ಎಂದು ಕೇಳಿದೆ.

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರು ಬಹಳ ದೊಡ್ಡದಾಗಿ ವಿಷಯವನ್ನು ಹೇಳು ತ್ತಿದ್ದಾರೆ. ಯಾವಾಗಲೂ ಸದಸ್ಯರು ಭಾಷಣ ಮಾಡುವಾಗ ಮಧ್ಯೆ ಪ್ರವೇಶಿಸಿ ಅವರ ಭಾಷಣಕ್ಕೆ ಅಡ್ಡಿಯುಂಟಾಗುವಂತೆ ಮಾಡುತ್ತಿರುತ್ತಾರೆ. ಪ್ರಸಂಗವಿಲ್ಲದ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸು ತ್ತಿದ್ದಾರೆ. ಮಾನ್ಯ ಸದಸ್ಯರಿಗೆ ಗೊತ್ತಿರುವಂತೆ ಮದರಾಸಿನಲ್ಲಿ ಪಾನನಿರೋಧ ಜಾರಿಗೆ ಬಂದದ್ದು 1956ನೇ ಇಸವಿಯಲ್ಲಿಲ್ಲ. 1935-37 ರಲ್ಲೇ ಬಂದಿತ್ತು. ಆಗ ತಾವು ಆ ರಾಜ್ಯದಲ್ಲೇ ಇದ್ದುದ ರಿಂದ ಆಗಿರುವ ಪರಿಸ್ಥಿತಿ ಹೇಗಿತ್ತು? ಈಗ ಈ ರಾಜ್ಯಕ್ಕೆ ನಿಮ್ಮ ಜಿಲ್ಲೆ ಬಂದ ಮೇಲೆ ಜನ ಯಾವ ರೀತಿ ಪರಿಸ್ಥಿತಿಯುಂಟಾಗಿದೆ ಎನ್ನುವುದನ್ನು ಇಲ್ಲಿ ಹೇಳಿದರೆ ಸರಿಯಾಗಿರುತ್ತಿತ್ತು.

ಶ್ರೀ ಕೆ. ಪಿ. ರೇವಣಸಿದ್ದಪ್ಪ (ತಿಪಟೂರು).—ಮಾನ್ಯ ಮಂತ್ರಿಗಳು ಮಧ್ಯ ಪ್ರವೇಶಿಸಿ ಮಾತ ನಾಡುತ್ತಾರೆಂದು ಹೇಳಿದರು. ಶ್ರೀವರ್ಮಾ ಸಾಲೆನ್ನ ಅವರು ಹಿಂದೆ ಶ್ರೀ ಚನ್ನಬಸಪ್ಪನವರು ಧಾಳಿ ಮಾಡಿ ಕಳ್ಳಬಟ್ಟಿ ಸಾರಾಯಿ ಕೇಸನ್ನು ಪತ್ತೆಹಚ್ಚಲು ಮಾಡಿದುದನ್ನು ವಾಪಸ್ಸು ತೆಗೆದುಕೊಂಡರು ಎಂದು ಹೇಳುತ್ತಿದ್ದಾರೆ.

ಶ್ರೀ ಎಂ. ವಿ. ರಾಮರಾವ್.—ಆ ಕೇಸು ವಿಚಾರಣೆಯಾಗಿ ಇತ್ಯರ್ಥವಾಗಿದೆ.

Mr. SPEAKER.—He says by implication that in this House, rules are not being observed.

ಶ್ರೀ ಕೆ. ಪಿ. ರೇವಣ್ಣಸಿದ್ದಪ್ಪ.—ಮಾನ್ಯ ಮಂತ್ರಿಗಳು 'ಮಧ್ಯ ಪ್ರವೇಶಿಸಿ' ಎಂದು ಹೇಳುವುದು ಸರಿಯಾದುದೆ ?

Mr. SPEAKER.—It is perfectly correct.

ಶ್ರೀ ಗೋಪಾಲ ಸಾಲೆನ್ನ.—ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆ ಮದರಾಸು ಭಾಗಕ್ಕೆ ಸೇರಿ ದ್ದಾಗ ಬಹುತೇಕ ಅಲ್ಲಿದ್ದ ಬಡಜನಕ್ಕೆ ಅನುಕೂಲವಾಗಬೇಕು ಎಂದು ತಂದಿದ್ದರು. ಅದರಿಂದ ನಾವೂ ಕೂಡ ಸ್ವಾಗತಿಸಿದೆವು. ಈಗಲೂ ಕೂಡ ಇಲ್ಲಿ ಈ ಬಿಲ್ಲನ್ನು ಸ್ವಾಗತಿಸುತ್ತಿದ್ದೇವೆ. ಇದರ ಪರಿಣಾಮ ಬಹಳವಾಗಿ ಬಡಜನಕ್ಕೆ ಹೆಚ್ಚಿನ ಉಪಯೋಗವಾಗಬೇಕು ಎನ್ನುವುದು. ಹಿಂದೆ ನೂರರಲ್ಲಿ ಹತ್ತು ಕಡೆಯಲ್ಲಿ ಕಳ್ಳ ಭಟ್ಟಿನಡೆಯುತ್ತಿದ್ದುದು ಈಗ ನಮ್ಮ ಭಾಗದಲ್ಲಿ ಒಂದು ಸಾವಿರದಷ್ಟು ಆಗುತ್ತಿದೆ. ಇದರಿಂದ ಜನರಿಗೆ ಎಷ್ಟು ಮಟ್ಟಿನ ಪ್ರಯೋಜನವಾಗುತ್ತದೆ ಎನ್ನುವುದನ್ನು ತಾವು ಇಲ್ಲಿ ಯೋಚನೆ ಮಾಡಬೇಕು. ಕಾಯಿದೆಯನ್ನೇನೋ ಪಾಸು ಮಾಡುತ್ತೀರಿ. ಆದರೆ ಪಾಸಾದ

ಕಾಯಿದೆಯನ್ನು ಸರಿಯಾಗಿ ಕಾರ್ಯಗತ ಮಾಡುವುದಕ್ಕೆ ಆಗಲಿಲ್ಲ. ಹಾಗೆಂದರೆ ಕಾಯಿದೆ ಮಾಡುವುದಕ್ಕೆ ಸರಿಯಾದ ವಾತಾವರಣವನ್ನು ಕಲ್ಪಿಸಿಲ್ಲ. ದಿನೇ ದಿನೇ ನಿಮ್ಮ ಮುಂದಾಳುಗಳ ಎದುರಿನಲ್ಲೇ ಇಲ್ಲಸಿಟ್ಟು ಲಕ್ಕರುಗಳ ಕೇಸುಗಳಾಗಿ ಮೊಕದ್ದಮೆಗಳಾಗುತ್ತಿರುತ್ತವೆ. ನಾನು ಹೇಳುವುದು ಕಾಯಿದೆಯನ್ನು ಸರಿಯಾಗಿ ಮಾಡಿ ಆ ಕಾರ್ಯಕ್ರಮವನ್ನು ಜಾರಿಗೆ ಕೊಡುವುದರಲ್ಲಿ ತಕ್ಕ ಕ್ರಮ ತೆಗೆದ ಕೊಂಡು ಜನಕ್ಕೆ ಅನುಕೂಲ ಸಿಗುವ ಹಾಗೆ ಮಾಡಬೇಕು. ಈಗ ನಾವು ನೋಡುತ್ತಿರುವುದು ಸಮಾಜ ದ್ರೋಹದಶಕ್ತಿ ಜಾಸ್ತಿಯಾಗುತ್ತಿದೆ. ಸಮಾಜದ ಹಿತದ ಶಕ್ತಿ ಇದರಿಂದ ಬೆಳೆಯುವುದು ಕಷ್ಟವಾಗುತ್ತದೆ. ಅಲ್ಲದೆ ಇದರಲ್ಲಿ ವಾರಂಟು ಇಲ್ಲದೆ ಮನೆಯನ್ನು ಸರ್ಚು ಮಾಡಬಹುದು ಎಂದು ಮಾಡುವಾಗ ಅಧಿಕಾರಿಗಳು ಜನತೆಗೆ ತೊಂದರೆ ಕೊಡುವುದಕ್ಕೆ ಅವಕಾಶ ಮಾಡಿ ಕೊಟ್ಟಂತಾಗುತ್ತದೆ. ಇದಕ್ಕೆ ಸರಿಯಾದ ನಿರ್ಬಂಧವಿರುವಂತೆ ಇಲ್ಲಿ ತಿದ್ದುಪಡಿ ಮಾಡಿದರೆ ಅನುಕೂಲವಾಗುತ್ತದೆ. ಇಲ್ಲದೇ ಪೋಲೀಸಿನವರಿಗೇ ಇಂತಹ ಅಧಿಕಾರಗಳನ್ನು ಕೊಡುವಂತಾದರೆ ಬಹಳ ತೊಂದರೆಯಾಗಲು ಅವಕಾಶವಾಗುತ್ತದೆ.

ನಾನು ಈಗಾಗಲೇ ಏನೇನು ವಿಚಾರಗಳನ್ನು ಹೇಳಿದ್ದೇನೋ ಅವುಗಳ ಬಗ್ಗೆ ಮಾನ್ಯ ಮಂತ್ರಿಗಳು ಪರಿಶೀಲನೆ ಮಾಡಿ ಸಾಮಾನ್ಯ ಜನಕ್ಕೆ ಅನುಕೂಲವಾಗುವಂತೆ ಕಾನೂನು ಮಾಡಬೇಕೆಂದು ಹೇಳಿ ನನ್ನ ಈ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಚ್. ಆರ್. ಕೇಶವ ಮೂರ್ತಿ (ಗಂಡಸಿ).—ಸ್ವಾಮಿ, ಈ ಎಕ್ಸೈಸ್ ಬಿಲ್ಲನ್ನು 3–4 ಬಿಲ್ಲುಗಳನ್ನು ಸೇರಿಸಿ ಅವುಗಳಿಂದ ಕ್ಲಾಜುಗಳನ್ನು ತೆಗೆದುಕೊಂಡು ಮಾಡಿದೆ. ಈ ಬಿಲ್ಲಿನ bird's eye view ತೆಗೆದುಕೊಂಡರೆ, ಎರಡು Conclusion draw ಮಾಡಬಹುದು. ಇದನ್ನು ನೋಡಿದರೆ ಪ್ರೊಹಿಬಿಷನ್ ಸ್ಕ್ರ್ಯಾಪ್ ಮಾಡತಕ್ಕಂಥ ಯೋಚನೆ ಸರ್ಕಾರಕ್ಕೆ ಇದೆಯೋ ಎನ್ನುವ ಹಾಗೆ ಭಾಸವಾಗುತ್ತದೆ. ಆಗಲಿ ನಾನು ಬೇಡ ಅನ್ನುವುದಿಲ್ಲ. ಈ ಮಸೂದೆಯನ್ನು ಸ್ವಾಗತಿಸುತ್ತೇನೆ.

ಈ ಬಿಲ್ಲಿನಲ್ಲಿ ದೊಡ್ಡ ಕೊರತೆ ಕಾಣುವುದೇನೆಂದರೆ ಇದು Copitilistic tendency, encourage ಮಾಡುವ ಹಾಗೆ ಕಾಣುತ್ತದೆ. ಸೊಸೈಟಿಗಳನ್ನು ಸ್ಥಾಪನೆ ಮಾಡಿ ಅವುಗಳ ಮೂಲಕ ಪಾಣಿ ಬೆಲ್ಲ, ನೀರ, ಸೇಂದಿ ಮತ್ತು ಅದರಲ್ಲಿ ಆಗತಕ್ಕಂಥ ಉಪವಸ್ತುಗಳನ್ನು ತಯಾರು ಮಾಡತಕ್ಕಂಥ ಒಂದು ಕಾಲದಲ್ಲಿ, ಆ ವಿಷಯ ಈ ಬಿಲ್ಲಿನಲ್ಲಿ ಅಡಕವಾಗಿರದೆ ಇರತಕ್ಕಂಥಾದ್ದು ಇರುವುದು ಒಂದು ಕೊರತೆ ಇದು ಸೆಲೆಕ್ಟ್ ಕಮಿಟಿಗೆ ಹೋಗುತ್ತಾ ಇರುವುದರಿಂದ, ಅಲ್ಲಿ ಇದನ್ನು ಸೇರಿಸಿಕೊಂಡು ಸರಿಮಾಡುವುದು ಅಗತ್ಯ. ನೀರ ಅಂತ ಹೇಳಿ ಬಿಟ್ಟು ಹೆಂಡ ಸಾಗಿಸಿ ಕನ್‌ಸ್ಯೂಮ್ ಮಾಡುತ್ತಾ ಇದ್ದಾರೆ 99 ಪರ್ಸೆಂಟ್ ಮಾಮೂಲನಂತೆ ಹೆಂಡ ಸಾರಾಯಿ ಜನರ ಹೊಟ್ಟೆಗೆ ಸಾಗ ತ್ತಾ ಇದೆ. ಅದನ್ನು ತಡೆಗಟ್ಟುವುದಕ್ಕೆ ಈ ಕಾನೂನಿನಲ್ಲಿ ತಕ್ಕ ಪ್ರಾವಿಶನ್ ಮಾಡುವುದು ಒಳ್ಳೆಯದು.

ಈ ಬಿಲ್ಲನ್ನು ಕ್ಲಾಜ್ ವೈಸ್ ಕ್ಲಾಜ್ ನೋಡಿದರೆ, Excise Commissioner, Deputy Commissioner District Excise Commissioner ಮತ್ತು ಇತರ ಎಸ್ಟಾಬ್ಲಿಷ್‌ಮೆಂಟನ್ನು ಸ್ಥಾಪನೆ ಮಾಡುವುದು. ಕಾಣುತ್ತದೆ. ಈ ಎಸ್ಟಾಬ್ಲಿಶ್‌ಮೆಂಟಿನ ಖರ್ಚು ಸುಮಾರು 23 ಲಕ್ಷ ರೂಪಾಯಿ ಎಂದು ಅಂದಾಜು ಮಾಡಲಾಗಿದೆ. ಇದಕ್ಕೆ ಸ್ವಲ್ಪ ಹೆಚ್ಚು ಖರ್ಚಾದರೂ ಪರವಾಗಿಲ್ಲ. ಆದರೆ ಈವಾಗ ಆಗತಕ್ಕಂಥ illicit liquor manufacture ನಿಂದ ವಿಪರೀತ ಖರ್ಚು ಸರಕಾರಕ್ಕೆ ಆಗುತ್ತಾ ಇದೆ. ಕೇಸುಗಳನ್ನು ಕಂಡು ಹಿಡಿಯುವುದಕ್ಕೆ ಪೋಲಿಸರಿಗೂ, ಅವುಗಳನ್ನು ಟ್ರೈ ಮಾಡುವುದಕ್ಕೆ ಕೋರ್ಟುಗಳಿಗೂ ಕೆಲಸವಾಗಿದೆ; ಸರಕಾರಕ್ಕೆ ಮತ್ತು ಜನಕ್ಕೆ, ಇಬ್ಬರಿಗೂ ಕೂಡ ವಿಶೇಷವಾಗಿ ಖರ್ಚಾಗುತ್ತಿದ್ದರೂ, ಅದರಿಂದ ಒಂದು ಪ್ರತಿಫಲ ದೊರೆಯುತ್ತಾ ಇಲ್ಲ. ಇನ್ನಷ್ಟು ಖರ್ಚು ಮಾಡಿದರೂ ಬೇಡವೆನ್ನುವುದಿಲ್ಲ, ಇದರಲ್ಲಿ ಇನ್ನೂ 10 ರಷ್ಟು ಆದಾಯ ತೆಗೆಯುವ ಹಾಗೆ ಮಾಡಬೇಕು. ಈ ಆದಾಯವನ್ನು ಹೆಚ್ಚಿಸುವುದಕ್ಕೆ ಅವಕಾಶವಿದೆ. ಹಾಗೆ ಮಾಡಲು, ತಕ್ಕ ಕ್ಲಾಜುಗಳನ್ನು ಇದರಲ್ಲಿ ಅಳವಡಿಸಿಕೊಳ್ಳಬೇಕು.

ಎಕ್ಸೈಸ್ ಕಮಿಶನರು ಸ್ಟೇಟ್ ಅಡ್ಮಿನಿಸ್ಟ್ರೇಶನ್ ಮ್ಯಾನೇಜ್ ಮಾಡುತ್ತಾರೆ. ಡೆಪ್ಯುಟಿ ಕಮಿಷನರು ಅವರಿಗೆ ಸಬಾರ್ಡಿನೇಟ್ ಅಂತ ಇದರಲ್ಲಿದೆ. ಡೆಪ್ಯುಟಿ ಕಮಿಶನರಿಗೆ ಬೇರೆ ಕೆಲಸವೇ ಬೇಕಾದಷ್ಟಿರುತ್ತದೆ. ಡೆಪ್ಯುಟಿಕಮಿಶನರನ್ನು ಈ ಎಕ್ಸೈಸ್ ಕೆಲಸಕ್ಕೆ ಸಿಕ್ಕಿಸಿಬಿಟ್ಟು ತೊಡಕು ಮಾಡುವುದಕ್ಕಿಂತ, ಆಡಿಶನಲ್ ಡೆಪ್ಯುಟಿಕಮಿಶನರನ್ನು ನೇಮಕ ಮಾಡಿಕೊಳ್ಳುವುದು ಮೇಲು. ಇಲ್ಲದೆ ಹೋದರೆ ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರುಗಳು ಅಥವಾ ಎಕ್ಸೈಸ್ ಕಮಿಶನರಿಗೇ ಡೆಪ್ಯುಟಿ ಕಮಿಶನರಿಗೆ ಈ ಇಲಾಖೆಯಲ್ಲಿರುವ ಅಧಿಕಾರವನ್ನು ವಹಿಸುವುದು ಒಳ್ಳೆಯದು.

ಟಾಡಿ exempt ಮಾಡುವ ಪವರನ್ನು ಎಕ್ಸೈಸ್ ಕಮಿಶನರಿಗೆ ಕೊಡುವುದು ಈ ಹೆಚ್ಚಿನ ಅಧಿಕಾರವನ್ನು ಕಮಿಶನರಿಗೆ ಕೊಡದೆ, ಸರಕಾರ ಉಳಿಸಿ ಕೊಳ್ಳುವುದು ಒಳ್ಳೆಯದು.

(ಶ್ರೀ ಹೆಚ್. ಆರ್. ಕೇಶವಮೂರ್ತಿ)

ಕ್ಲಾಜು 18 (3)ರಲ್ಲಿ ಬಾಂಡ್ ಎಕ್ಸಿಕ್ಯೂಟ್ ಮಾಡಿ ಇಂಟಾಕ್ಸಿಕೆಂಟ್ ರಿಮೂವ್ ಮಾಡಬಹುದು ಎಂದು ಹೇಳಿದೆ. ಇದು ಕ್ಯಾಪಿಟಲಿಸ್ಟಿಕ್ ಟೆಂಡೆನ್ಸಿಯನ್ನು ಎನ್‌ಕರೇಜ್ ಮಾಡತಕ್ಕಂಥ ಕ್ಲಾಜು Intoxicants ಸಾಗಿಸತಕ್ಕಂಥವರು ತೆರಿಗೆ ಕೊಟ್ಟು ಸಾಗಿಸಲಿ. ಲೈಸೆನ್ಸುದಾರರುಗಳು ಬೇಕಾದಷ್ಟು ಲಾಭ ಸಂಪಾದನೆ ಮಾಡುತ್ತಿರುತ್ತಾರೆ. ಡ್ಯೂಟಿ ಕೊಟ್ಟು ತೆಗೆದುಕೊಂಡು ಹೋಗಲಿ. ಬಡವರುಗಳು ಸುಂಕಕೊಟ್ಟು ಊರೊಳಗೆ, ಸಂತೆಯೊಳಗೆ ಬರುತ್ತಾರೆ. ಆದ್ದರಿಂದ ಇವರೂ ಸುಂಕಕೊಟ್ಟು ಇಂಟಾಕ್ಸಿಕೆಂಟುಗಳನ್ನು ತೆಗೆದುಕೊಂಡು ಹೋಗಲಿ ಆದ್ದರಿಂದ "or a bond has been executed for the payment thereof" ಎಂಬುದನ್ನು ಅಳಿಸಿ ಬಿಡಬೇಕು.

ಕ್ಲಾಜು ಇಷ್ಟತೂ Capitalist tendency encourage ಮಾಡುತ್ತದೆ. ಕೆಲವರು ಧನಿಕರುಗಳು, ಕಂಟ್ರಾಕ್ಟರುಗಳು, ಮ್ಯಾನ್ಯುಫ್ಯಾಕ್ಚರ್ ಮನಾಫಲಿ ಮಾಡಿಕೊಂಡು ಲೀಸ್ ಮಾಡಿಕೊಂಡು ಹೋಗುತ್ತಾ ಇರುತ್ತಾರೆ. ಇದುವರೆಗೆ ಇರುವ ಪದ್ಧತಿ ಇದು. ಈ ಪದ್ಧತಿ ಒಳ್ಳೆಯದಲ್ಲ. ಹೆಚ್ಚು ಹೆಚ್ಚು ಕಂಟ್ರಾಕ್ಟರುಗಳು, ಲೈಸೆನ್ಸುದಾರರುಗಳು ಉತ್ಪತ್ತಿಯಾಗುವಂತೆ ಮಾಡಬೇಕು. ಈ ಲೀಪ್ ಮಾಡುವುದನ್ನು ತಪ್ಪಿಸಬೇಕು, ಅದಕ್ಕೆ ತಕ್ಕಂತೆ ಕ್ಲಾಜನ್ನು ಅಳವಡಿಸಬೇಕು. ಸಬ್‌ಲೀಸ್ ಇರಕೂಡದು.

Prohibition of employment of Children and of Women ಮಕ್ಕಳನ್ನು ಸೇರಿಸಬೇಡಿ ಎಂದು ಹೇಳಿದರೆ ಪರವಾಗಿಲ್ಲ why are you excluding women ಅದು ನನಗೆ ಅರ್ಥವಾಗುತ್ತಿಲ್ಲ. women ಇದ್ದರೆ ಏನೂ ಅನಾಹುತವಾಗುವುದಿಲ್ಲ. ಹೆಂಗಸರು ಲೈಸೆನ್ಸುದಾರರು ಇದ್ದರೆ ಲೈಸೆನ್ಸು ಕೊಡಬೇಕಾಗುತ್ತದೆ. ಲೈಸೆನ್ಸು ಕೊಡುತ್ತೀರೋ ಇಲ್ಲವೋ ಅವರನ್ನು ಲೈಸೆನ್ಸುದಾರರಾಗಿ ಏಕೆ ಮಾಡಬಾರದು. ಹಾಗಿರುವಾಗ ಅವರನ್ನು ಏಕೆ ಎಂಪ್ಲಾಯ್ ಮಾಡಬಾರದು ?

27 Tax for tapping trees from whom leviable. It may be recovered from the Occupier ಎಂದಿದೆ ಸಾಮಾನ್ಯವಾಗಿ ಗ್ರಾಮಾಂತರ ಪ್ರದೇಶಗಳಲ್ಲಿ ಈಚಲು ಮರಗಳನ್ನು ಟ್ಯಾಪ್ ಮಾಡತಕ್ಕಂಥವರು ಲ್ಯಾಂಡ್ ಮಾಲಿಕರಿಗೆ ತಿಳಿಸುವುದೇ ಇಲ್ಲ, ಈ ಮಾಲೀಕರು ಅನಕ್ಷರಸ್ಥರಾಗಿರುತ್ತಾರೆ. ಅವರಿಗೆ ಗೊತ್ತಾಗುವುದೂ ಇಲ್ಲ, ಆಕ್ಯುಪೈಯರುಗಳಿಗೆ ಮಾಮೂಲು 4 ಆಣೆಯೋ, 8 ಆಣೆಯೋ ಕೊಡುತ್ತಿರುತ್ತಾರೆ. ಫಾರಂ ಇಂಗ್ಲೀಷಿನಲ್ಲಿರುತ್ತದೆ. ಲೈಸೆನ್ಸುದಾರರು, ಆಕ್ಯುಪಯರ್ ರುಜು ಹಾಕಿಸಿಕೊಂಡು ಬಿಡುತ್ತಾರೆ. ಅದಕ್ಕೆ ಆಕ್ಯುಪಯರ್ ತಪ್ಪಿತಸ್ಥ ಅಂದರೆ ನ್ಯಾಯವಲ್ಲ. ಆಕ್ಯುಪಯರನ್ನು ನಾವು ಜವಾಬ್ದಾರನನ್ನಾಗಿ ಮಾಡುವುದು ಬೇಡ. ಯಾರು ಲೈಸೆನ್ಸುದಾರನೋ ಅವನಿಂದ ಸಫಿಶಿಯಂಟ್ ಸೆಕ್ಯೂರಿಟಿ ತೆಗೆದುಕೊಂಡು ಅವನು ಸರ್ಕಾರಕ್ಕೆ ಡಿಫಾಲ್ಟರ್ ಆದರೆ ಅವನಿಂದ ವಸೂಲು ಮಾಡಲು ಯಾವ ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳಿ. Occupierಗೆ ಯಾವ ತರಹ ತೊಂದರೆಯನ್ನೂ ಕೊಡಬೇಡಿ. ಅವನಿಗೆ ಬಹಳ ಕಷ್ಟವಾಗುತ್ತದೆ. ಈ ದೃಷ್ಟಿಯಲ್ಲಿ ಈ ಕ್ಲಾಜನ್ನು ಬದಲಾಯಿಸಿ.

ಕ್ಲಾಜು 34 ರಲ್ಲಿ Penalty for illegal export, etc., ಹೇಳುತ್ತದೆ. ಅನೇಕ ಸೊಸೈಟಿಗಳಲ್ಲಿ ನೀರಾಕ್ಕೆ ಲೈಸೆನ್ಸು ತೆಗೆದುಕೊಂಡು, ಈಚಲ ಮರವನ್ನು ಟ್ಯಾಪ್ ಮಾಡುತ್ತಾರೆ. ಖಾದಿ ಬೋರ್ಡ್, ಎಕ್ಸೈಸ್ ಇಲಾಖೆಯವರು ಮತ್ತು ಪೋಲೀಸಿನವರು ಈ ಮೂರು ಜನ ಸೇರಿಕೊಂಡು ಮಾಡುತ್ತಾರೆ. 9 ಗಂಟೆ ಒಳಗೆ ಸಾಗಿಸಿದರೆ ಅದು ನೀರ, ಅದರ ಮೇಲೆ ಸಾಗಿಸಿದರೆ ಹೆಂಡ ಎಂತ ಕಾನೂನು ಮಾಡಿದ್ದಾರೆಂದು ನನಗೆ ಗೊತ್ತಾಗಿದೆ. I stand corrected if I am wrong.

[MR. DEPUTY SPEAKER in the Chair.]

ಹೀಗೆ ಸೇಂದಿಯನ್ನು ಇಳಿಸಿ ಸಾಮಾನ್ಯವಾಗಿ 9 ಗಂಟೆಯ ಮೇಲೆ ಸಾಗಿಸುತ್ತಾರೆ, ಗ್ರಾಮಾಂತರ ಪ್ರದೇಶದಲ್ಲಿ. ಪೋಲೀಸಿನವರನ್ನು ಕೇಳಿದರೆ ನಮ್ಮ ಅಧಿಕಾರದಲ್ಲಿ ಅದು ಬರುವುದಿಲ್ಲ ಎಂದು ಹೇಳುತ್ತಾರೆ. ತಮಗೆ ಒಂದು ವಿಷಯ ಹೇಳಬೇಕಾದರೆ ಮಾನ್ಯ ಗೃಹಸಚಿವರನ್ನು ಈ ಸಂಬಂಧದಲ್ಲಿ ಕೇಳಲಾಗಿ ಅವರು ಅದಕ್ಕೆ ಕಾನೂನಿನಲ್ಲಿ ಏನು ಇಲ್ಲವಾದ್ದರಿಂದ ಅಬ್ಕಾರಿ ಮಂತ್ರಿಗಳನ್ನು ಕೇಳಿ ಎಂದು ಹೇಳಿದರು. ನಾನು ತಮ್ಮನ್ನು ಕೇಳಲಿಲ್ಲ. ಅದು ಏನು ಎನ್ನುವುದು ನನಗೆ ಗೊತ್ತಾಗಲಿಲ್ಲ. ಅಂಥ ತಪ್ಪುಗಳಿಗೆ ಯಾವ ರೀತಿ ಶಿಕ್ಷೆ ವಿಧಿಸುತ್ತೀರಿ ಎನ್ನುವುದು ಗೊತ್ತಿಲ್ಲ. ಆ ಬಗ್ಗೆ ಸೂಕ್ತವಾದ ಕ್ಲಾಜನ್ನು ಸೇರಿಸಬೇಕೆಂದು ನನ್ನ ಸಲಹೆ.

I Clause 34 it is stated :

Provided further that where the offence relates to the import or manufacture of any intoxicant, the fine, imposed shall not be less than double the amount of duty leviable on such intoxicant, or one hundred rupees, whichever is more……

3-00 P.M.

ಎಂದು ಹೇಳಿದ್ದೀರಿ. ಇದರಿಂದ ಇಲ್ಲೀಗಲ್ ಟ್ರಾನ್ಸ್‌ಪೋರ್ಟ್ ಮತ್ತು ತಯಾರಿಕೆಗೆ ಉತ್ತೇಜನವನ್ನು ಕೊಟ್ಟಹಾಗೆ ಆಗುತ್ತದೆ. ಸಾಮಾನ್ಯವಾಗಿ ಹೆಂಡ ಮಾರಿ ಸಿಕ್ಕಿದರೆ ಕೇಸನ್ನು ಹಾಕಿ ಡ್ಯೂಟಿಯ ಎರಡಷ್ಟು ಜುಲ್ಮಾನೆ ಕೊಡಬೇಕು ಎಂದರೆ ನೂರಕ್ಕೆ ಒಂದೆರಡು ಕೇಸುಗಳು ಪತ್ತೆಯಾಗುವಾಗ ಡ್ಯೂಟಿಯ ಎರಡರಷ್ಟನ್ನು ಜುಲ್ಮಾನೆಯಾಗಿ ಕೊಡುತ್ತಾನೆ. ಅಕ್ರಮವಾಗಿ ತಯಾರು ಮಾಡಿದರೆ ಅಥವಾ ಸಾಗಾಣಿಕೆ ಮಾಡಿದರೆ ಅದಕ್ಕೆ ಜಾಸ್ತಿ ಜುಲ್ಮಾನೆಯನ್ನು ಹಾಕಬೇಕು ಮತ್ತು ಅದಕ್ಕೆ ಸೂಕ್ತವಾಗಿ ತಿದ್ದುಪಡಿ ಮಾಡಬೇಕು. ಸಾವಿರ ರೂಪಾಯಿಗಳವರೆಗೂ ಜುಲ್ಮಾನೆ ಹಾಕುವುದು, ಜೈಲು ಶಿಕ್ಷೆ ವಿಧಿಸುವುದು ಈ ರೀತಿ ಸೇರಿಸಿ ಕೊಡುವ ಶಿಕ್ಷೆಯ ಪ್ರಮಾಣವನ್ನು ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ.

ಕ್ಲಾಜ್ 36ರಲ್ಲಿ ಅಕ್ರಮವಾಗಿ ಮಾದಕ ಪದಾರ್ಥಗಳನ್ನು ಇಟ್ಟುಕೊಂಡಿರುವವರಿಗೆ ಶಿಕ್ಷೆ ವಿಧಿಸುವ ವಿಚಾರವಿದೆ. ಇದರಲ್ಲಿ ಏನಾಗುತ್ತದೆ ಎಂದರೆ ತಪ್ಪು ಮಾಡುವವರೆಲ್ಲ ದೊಡ್ಡ ದೊಡ್ಡ ಸಾಹುಕಾರರು ಆಗಿರುತ್ತಾರೆ. ಮಾದಕ ಪದಾರ್ಥಗಳನ್ನು ದೊಡ್ಡ ಪ್ರಮಾಣದಲ್ಲಿ ತಯಾರಿಸುವವರು ಮತ್ತು ಸಾಗಾಣಿಕೆ ಮಾಡುವವರೆಲ್ಲ ದೊಡ್ಡವರು. ಕೆಲವರು ಸಣ್ಣವರು ಈ ಕೆಲಸಗಳನ್ನು ಮಾಡುತ್ತಾರೆ ಆದರೆ ಅಲ್ಪ ಪ್ರಮಾಣದಲ್ಲಿ. ಇಬ್ಬರಿಗೂ ಒಂದೇ ಪ್ರಮಾಣದ ಶಿಕ್ಷೆ ಮಾಡುವುದು ಸರಿಯಾಗಿರುವುದಿಲ್ಲ. ಅಕ್ರಮವಾಗಿ ಇಟ್ಟುಕೊಂಡಿರುವ ಮಾದಕ ಪದಾರ್ಥ ಎಷ್ಟೆಷ್ಟು ಪ್ರಮಾಣದಲ್ಲಿ ಸಿಕ್ಕುತ್ತದೆಯೋ ಅದರ ಆಧಾರದ ಮೇಲೆ ಶಿಕ್ಷೆಯನ್ನು ವಿಧಿಸುವುದು ಧರ್ಮ. ಆ ರೀತಿ ಮಾಡಬೇಕೆಂದು ನಾನು ಸಲಹೆ ಮಾಡುತ್ತೇನೆ.

ಕ್ಲಾಜ್ 37ರಲ್ಲಿ ಏನು ಹೇಳಿದ್ದಾರೆಂದರೆ 34, 35, 36, ನೇ ಕ್ಲಾಜುಗಳಲ್ಲಿ ಹೇಳಿಲ್ಲದೆ ಇರುವ ತಪ್ಪುಗಳನ್ನು ಮಾಡುವುದಕ್ಕೆ 200 ರೂಪಾಯಿಗಳವರೆಗೂ ಜುಲ್ಮಾನೆಯನ್ನು ಹಾಕಬಹುದು ಎಂದು ಹೇಳಿದ್ದಾರೆ. ಈ ಕ್ಲಾಜುಗಳಲ್ಲಿ ಹೇಳಿರುವುದಕ್ಕಿಂತ ಜಾಸ್ತಿ ತಪ್ಪನ್ನು ಮಾಡಿದರೂ 200 ರೂಪಾಯಿ, ಕಡಮೆ ತಪ್ಪನ್ನು ಮಾಡಿದರೂ 200 ರೂಪಾಯಿ ಎನ್ನುವುದು ಸರಿಯೇ ಎನ್ನುವುದನ್ನು ತಾವು ಸ್ವಲ್ಪ ಆಲೋಚನೆ ಮಾಡಬೇಕು. ಎಂಥ ತಪ್ಪು ಮಾಡಿದರೂ 200 ರೂಪಾಯಿಗಳವರೆಗೂ ಜುಲ್ಮಾನೆ ಎಂದು ಹಾಕುವುದು ಸರಿಯಲ್ಲ ಅವರು ಮಾಡುವ ತಪ್ಪಿನ ಪ್ರಮಾಣದ ಮೇಲೆ ಶಿಕ್ಷೆ ವಿಧಿಸುವ ಹಾಗೆ ಈ ಕ್ಲಾಜನ್ನು ಬದಲಾವಣೆ ಮಾಡಬೇಕು.

ಕ್ಲಾಜ್ 38 (ಇ)ನಲ್ಲಿ ರೆಪ್ಯೂಟೆಡ್ ಪ್ರಾಸ್ಟಿಟ್ಯೂಟ್ಸ್ ಎನ್ನುವ ಪದಗಳನ್ನು ಉಪಯೋಗಿಸಿದ್ದಾರೆ. ಈಗಿನ ಪ್ರಜಾಯುಗದಲ್ಲಿ ಇಂಥ ಪದಗಳ ಬಳಕೆ ಚೆನ್ನಾಗಿ ಕಾಣುವುದಿಲ್ಲ. ಅವುಗಳನ್ನು ಸೂಕ್ತ ರೀತಿಯಲ್ಲಿ ಬದಲಾವಣೆ ಮಾಡಬೇಕೆಂದು ನನ್ನ ಸಲಹೆ.

ಕ್ಲಾಜ್ 38 (2)ರಲ್ಲಿ ಲೈಸನ್ಸ್ ಪಡೆದಿರುವವರು ಕಟ್ಟಡದಲ್ಲಿ ಅಥವಾ ಸೇಂದಿ ಮುಂತಾದುವನ್ನು ತಯಾರು ಮಾಡುವ ಜಾಗದಲ್ಲಿ ಯಾರಾದರೂ ಕುಡಿದವರು ಇದ್ದರೆ ಲೈಸೆನ್ಸ್ ಹೊಂದಿದವನ ಮೇಲೆ ತಪ್ಪು ಬರುತ್ತದೆ; unless he proves otherwise. It is a clause of controversy. ಯಾರು ಕುಡಿದಿರುತ್ತಾರೆಯೋ ಅವರಿಗೆ ಶಿಕ್ಷೆ ವಿಧಿಸಬೇಕು. ಲೈಸನ್ಸ್ ಪಡೆದಿರುವವನಿಗೆ ಅಥವಾ ಒಂದು ಅಂಗಡಿ ಇಟ್ಟುಕೊಂಡಿರುವವನಿಗೆ ಅವನಿಗೆ ಸೇರಿದ ಸ್ಥಳದಲ್ಲಿ ಕುಡಿಯುತ್ತಾನೆ ಎಂದು ಶಿಕ್ಷೆ ವಿಧಿಸುವುದು ತಪ್ಪಾಗುತ್ತದೆ. ಕುಡಿದವನಿಗೆ ಹೆಚ್ಚು ಶಿಕ್ಷೆ ಇರಲಿ ಆದರೆ ಲೈಸನ್ಸ್ ಪಡೆದಿರುವವನಿಗೆ ಅಥವಾ ಅಂಗಡಿ ಇಟ್ಟುಕೊಂಡಿರುವವನಿಗೆ ಒಂದು ಎಚ್ಚರಿಕೆಯನ್ನು ಮಾತ್ರ ಕೊಡಬೇಕು ಎಂದು ಸಲಹೆ ಮಾಡುತ್ತೇನೆ.

ಕ್ಲಾಜ್ 40ರಲ್ಲಿ ಕೆಮಿಸ್ಟ್ ಆದವನ ಮೇಲೆ ಕೇಸು ಹಾಕುವುದಕ್ಕೆ ಅವಕಾಶವಿದೆ. ಒಬ್ಬ ಕೆಮಿಸ್ಟ್ ಯಾವ ಆಳನ್ನೂ ಇಟ್ಟುಕೊಂಡಿರುವುದಿಲ್ಲ. ಎಲ್ಲ ಕೆಲಸವನ್ನೂ ಅವನೇ ಮಾಡುತ್ತಿರುತ್ತಾನೆ. ಅಲ್ಲಿ ಈ ತರಹ ಔಷಧಿಗಳನ್ನು ತೆಗೆದುಕೊಂಡು ಬರಬೇಕಾದರೆ ಯಾರ ಕೈಯಲ್ಲಾದರೂ ಹೇಳಿ ತರಿಸಿಕೊಳ್ಳುತ್ತಾನೆ. ಆ ಮನುಷ್ಯ ಹಾಗೆ ತೆಗೆದುಕೊಂಡು ಬಂದರೆ ತಪ್ಪಾಗುತ್ತದೆ. ನಾನೇ ಹೇಳಿಕಳಿಸಿದ್ದೆ ಎಂದು ಕೆಮಿಸ್ಟ್ ಆದವನು ಹೇಳಿದರೂ ಅವನ ಮಾತನ್ನು ನಂಬುವುದಿಲ್ಲ. ಅವನ ಪೇ ರೋಲ್ ತೆಗೆಸಿ ಅವನನ್ನು ಕೆಲಸಕ್ಕೆ ಇಟ್ಟುಕೊಂಡಿದ್ದಾನೆಯೇ ಇಲ್ಲವೇ ಎಂದು ನೋಡುತ್ತಾರೆ. ಆದುದರಿಂದ by

(ಶ್ರೀ ಎಚ್. ಆರ್. ಕೇಶವಮೂರ್ತಿ)

any person not employed ಎನ್ನುವುದಕ್ಕಿಂತ by any person not authorised ಎಂದು ಹೇಳಿದರೆ ಚೆನ್ನಾಗಿರುತ್ತದೆ. ಈ ರೀತಿ ಬದಲಾವಣೆ ಮಾಡಬೇಕೆಂದು ಹೇಳುತ್ತೇನೆ.

43ನೇ ಕ್ಲಾಜಿನ ಪ್ರಾವಿಸೋ ಪ್ರಕಾರ ದುಡ್ಡಿದ್ದವರಿಗೆ ಉಪಕಾರವಾಗುತ್ತದೆ, ಕಾನೂನು ಮುಂದೆ ಯಾರೂ ದೊಡ್ಡವರಲ್ಲ. ಕಾನೂನು ಎಲ್ಲರಿಗಿಂತಲೂ ದೊಡ್ಡದು. ಕಾನೂನಿನ ಮುಂದೆ ಎಲ್ಲರೂ ಸರಿಸಮಾನರು. ಎಲ್ಲರಿಗೂ ಒಂದೇ ರೀತಿಯಲ್ಲಿ ಅನ್ವಯಿಸುವಂತೆ ಅಳವಡಿಸಬೇಕೆಂದು ಹೇಳುತ್ತೇನೆ. ಸಣ್ಣವರು ತಪ್ಪು ಮಾಡಿದರೆ ಅವರಿಗೆ ಮಾತ್ರ ಇಂಪ್ರಿಸನ್‌ಮೆಂಟ್ ಕೊಡಬೇಕು, ಬೇರೆಯವರು ದುಡ್ಡಿದ್ದವರು ದುಡ್ಡು ಕೊಡದೆ ಇದ್ದರೆ ಮಾತ್ರ ಇಂಪ್ರಿಸನ್‌ಮೆಂಟ್ ಕೊಡುತ್ತೇವೆ ಎಂದು ಹೇಳುವುದು ಸರಿಬರುವುದಿಲ್ಲ. ಇದನ್ನು ಸ್ವಲ್ಪ ನೋಡಿ ಸರಿಮಾಡಿಕೊಳ್ಳಬೇಕು.

ಇದೇ ರೀತಿಯಾಗಿ 44ನೇ ಕ್ಲಾಜಿನಲ್ಲಿ Enhanced punishment after previous conviction ವಿಚಾರ ಹೇಳಿದ್ದಾರೆ. ಇದರಲ್ಲಿ ಏನಾಗಿದೆ ಎಂದರೆ ಒಂದು ಸಾರಿ ತಪ್ಪು ಮಾಡಿದರೆ ಶಿಕ್ಷೆ ವಿಧಿಸುತ್ತೀರಿ. ಅನಂತರ ಎಷ್ಟು ಸಲ ತಪ್ಪು ಮಾಡಿದರೂ ಮೊದಲನೆಯ ಸಲ ವಿಧಿಸಿದ ಶಿಕ್ಷೆಯ ಎರಡರಷ್ಟು ಶಿಕ್ಷೆಯನ್ನು ವಿಧಿಸಬೇಕು ಎಂದು ಇದೆ. ಇದರಿಂದ ಏನಾಗುತ್ತದೆ ಎಂದರೆ ಒಂದು ಸಲ ಶಿಕ್ಷೆಗೆ ಒಳಗಾದ ಮೇಲೆ ಎಷ್ಟು ಸಲ ಅದೇ ತಪ್ಪನ್ನು ಮಾಡಿದರೆ ನನಗೆ ಆಗುವುದು ಮೊದಲನೆಯ ಸಲ ಆದ ಶಿಕ್ಷೆಯ ಎರಡರಷ್ಟು ಮಾತ್ರ ಎನ್ನುವ ಒಂದು ರೀತಿಯ ಭಾವನೆ ಬರುತ್ತದೆ. ಈ ರೀತಿ ಇರಬಾರದು. ಎರಡನೆಯ ಸಲ ತಪ್ಪು ಮಾಡಿದರೆ ಎರಡರಷ್ಟು, ಮೂರನೆಯ ಸಲ ಮಾಡಿದರೆ ಮೂರರಷ್ಟು ಹೀಗೆ ಮಾಡಿದಹಾಗೆಲ್ಲ ಅದಕ್ಕನುಗುಣವಾಗಿ ಶಿಕ್ಷೆಯನ್ನು ಜಾಸ್ತಿ ಮಾಡುತ್ತ ಹೋಗಬೇಕು. ಆಗ ತಪ್ಪು ಮಾಡುವುದು ಕಡಮೆಯಾಗುತ್ತದೆ ಎಂದು ನನ್ನ ಸಲಹೆ. ಆದುದರಿಂದ ತಪ್ಪನ್ನು ಜಾಸ್ತಿ ಮಾಡಿದ ಹಾಗೆಲ್ಲ ಶಿಕ್ಷೆಯನ್ನೂ ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ.

ಪವರ್ ಟು ಅರೆಸ್ಟ್ ವಿತ್‌ಔಟ್ ವಾರಂಟ್ ಅಂತ ಹೇಳಿ ಒಂದು ಕ್ಲಾಜನ್ನು ಹಾಕಿದ್ದೀರಿ, ಗ್ರಾಮಾಂತರ ಪ್ರದೇಶಗಳಲ್ಲಿ ಇಂತಹ ಕಾನೂನುಗಳಿಂದ ಬಹಳ ತೊಂದರೆಗಳಾಗುತ್ತವೆ ಮತ್ತು ಬಹಳ ಅನಾಹುತಗಳಾಗುತ್ತವೆ. ಸಾಮಾನ್ಯವಾಗಿ ಈ ಎಕ್ಸೈಜ್ ಇಲಾಖೆಯ ಅಧಿಕಾರಿಗಳಾಗಲಿ, ಪೋಲೀಸ್ ಇಲಾಖೆಯ ಅಧಿಕಾರಿಗಳಾಗಲಿ ಅವರಿಗೆ ತೊಂದರೆ ಬಂದಾಗ ಅಥವಾ ದುರುದ್ದೇಶದಿಂದಲೋ ಏನೋ ತಿಳುವಳಿಕೆ ಇಲ್ಲದೇ ಇರತಕ್ಕ ಜನರ ಮೇಲೆ ಈ ಕಾನೂನಿನ ಭಾರ ಹೇರಿ ಅವರನ್ನು ಹೆದರಿಸಿ ಅವರ ಹತ್ತಿರ ದುಡ್ಡು ಕಿತ್ತುಕೊಳ್ಳತಕ್ಕ ಅನೇಕ ಸಂದರ್ಭಗಳು ನಮ್ಮ ಗಮನಕ್ಕೆ ಬಂದಿದೆ. ಅನೇಕ ರೀತಿಯಲ್ಲಿ ತೊಂದರೆಗಳನ್ನು ಕೊಡುತ್ತಾರೆ ಒಂದು ಉದಾಹರಣೆಯನ್ನು ಕೊಡುವುದಾದರೆ ಇಲಸಿಟ್ ಲಿಕ್ಕರ್ ವಿಷಯದಲ್ಲಿ ನಮ್ಮ ಗ್ರಾಮಾಂತರ ಪ್ರದೇಶದಲ್ಲಿ ಒಬ್ಬರು ಪೋಲೀಸ್‌ನವರು ಇದ್ದರು ಅವರು ಏನು ಮಾಡಿದರು ಎಂದರೆ, ಒಂದು ಸಾರಿ ಯಾರದೋ ಹತ್ತಿರ ದುಡ್ಡು ಕೇಳಿದರು ಅವರು ಕೇಳಿದಾಗ ದುಡ್ಡು ಕೊಡದೇ ಇದ್ದುದಕ್ಕೆ, ಆ ಮನುಷ್ಯನ ಹೊಲದಲ್ಲಿ ಇದ್ದ ಹುಲ್ಲಿನ ಬಣವೆಯಲ್ಲಿ ಹೆಂಡವನ್ನು ಇಟ್ಟು ಹೆದರಿಸಿ ಅವರಿಂದ ದುಡ್ಡನ್ನು ಕಿತ್ತುಕೊಂಡು ಹೋದರು. ಈ ತರಹ ಸನ್ನಿವೇಶಕ್ಕೆ ಅವಕಾಶವಾಗುತ್ತದೆ. ಆದ್ದರಿಂದ ಇದನ್ನು ತಡೆಗಟ್ಟುವುದಕ್ಕೆ ಒಂದು ಕೌಂಟರ್ ಪವರ್ ಇರಬೇಕು ಆ ರೀತಿ ಇದ್ದರೆ ಅದರಿಂದ ಅನುಕೂಲವಾಗುತ್ತದೆ ಮತ್ತು ಸತ್ಯ, ಧರ್ಮದಿಂದ ಅಧಿಕಾರಿಗಳೂ ಕೂಡ ನಡೆದುಕೊಳ್ಳುವುಕ್ಕೆ ಅವಕಾಶವಾಗುತ್ತದೆ ಎಂದು ಹೇಳುತ್ತೇನೆ.

ಕ್ಲಾಜ್ 57ರಲ್ಲಿ ಎಕ್ಸೈಜ್ ಆಫೀಸರಿಗೆ ಅಧಿಕಾರವನ್ನು ಕೊಟ್ಟಿದ್ದೀರಿ. ಅವರು ಯಾರ ಮೇಲಾದರೂ ಚಾರ್ಜು ಮಾಡಿ ರೆಕಾರ್ಡ್ ಮಾಡುತ್ತಾ ಇದ್ದರೆ ಅದನ್ನು ನಿಲ್ಲಿಸತಕ್ಕ ಅಧಿಕಾರವನ್ನು 57 (3)ರ ಪ್ರಕಾರ ಡೆಪ್ಯೂಟಿ ಕಮಿಷನರಿಗೆ ಕೊಟ್ಟಿದ್ದೀರಿ. ಈ ಮಧ್ಯೆ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರು ಇರುವುದೇ ಇಲ್ಲ. ಈ ರೀತಿ ಏಕೆ ಮಾಡಿದ್ದೀರಿ ಎಂದು ಕೇಳುತ್ತೇನೆ. ಎಕ್ಸೈಜ್ ಇನ್‌ಸ್ಪೆಕ್ಟರು ಮಾಡತಕ್ಕ ತಪ್ಪನ್ನು ರಿವೈಸ್ ಮಾಡುವುದಕ್ಕೆ ಡಿಸ್ಟ್ರಿಕ್ಟ್ ಎಕ್ಸೈಜ್ ಆಫೀಸರಿಗೆ ಅಧಿಕಾರ ಇದ್ದರೆ ಸಾಲದೇ ? ಡೆಪ್ಯೂಟಿ ಕಮಿಷನರಿಗೆ ಏಕೆ ಈ ಅಧಿಕಾರವನ್ನು ಕೊಡುತ್ತೀರಿ ಅವರಿಗೆ ದೊಡ್ಡ ಡಿಸ್ಟ್ರಿಕ್ಟ್‌ನಲ್ಲಿ ವ್ಯವಹಾರಗಳು ಬೇಕಾದಷ್ಟು ಇರುತ್ತವೆ, ಆದ್ದರಿಂದ ಈ ಅಧಿಕಾರವನ್ನು ಅವರಿಗೆ ಕೊಡುವುದು ಸರಿಯಿಲ್ಲ ಎಂದು ಹೇಳುತ್ತೇನೆ.

ಇದು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ ತಜ್ಞರು ಸೇರಿಕೊಂಡು ಕೂಲಂಕಷವಾಗಿ ಇದನ್ನು ಪರಿಶೀಲನೆ ಮಾಡುವವರು ಇದ್ದಾರೆ ಆದ್ದರಿಂದ ಇದರ ವಿಷಯದಲ್ಲಿ ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ, ನನ್ನ ಅರಿಕೆ ಇಷ್ಟೆ. ಪಾಣಿ ಚೆಲ್ಲ ಮತ್ತು ನೀರಾ ಈ ವಿಷಯದಲ್ಲಿ ಮತ್ತು ಇಲ್ಲಿಸಿಟ್ ಲಿಕ್ಕರ್ ವಿಷಯದಲ್ಲಿ ಬಹಳ ದೊಡ್ಡ ಗೊಂದಲವಾಗಿದೆ. ಗ್ರಾಮಾಂತರ ಪ್ರದೇಶಗಳಲ್ಲಿ ಅದರಿಂದ ಬಹಳ ಅನ್ಯಾಯ ನಡೆಯುತ್ತಾ ಇದೆ, ಬಡವರು ಹಾಳಾಗುತ್ತಾ ಇದ್ದಾರೆ ಮತ್ತು ನಿಷ್ಠುರಾದವರು ಅಲ್ಲಿ

ಬಾಳುವುದಕ್ಕೆ ಸಾಧ್ಯವಿಲ್ಲ, ಅದನ್ನು ಸರಿಪಡಿಸುವುದಕ್ಕೆ ಈ ಎಕ್ಸೈಜ್ ಬಿಲ್ಲೂ ಕೂಡ ಬಹಳ ಮುಖ್ಯವಾದುದು, ಅದಕ್ಕೆ ಸಾಕಾದಷ್ಟು ಕ್ಲಾಜ್‌ಗಳನ್ನು ಸೇರಿಸಿಕೊಂಡು ಇದನ್ನು ನಿರೋಧಿಸುವುದಕ್ಕೆ ತಕ್ಕ ಒಂದು ಕ್ರಮವಾದ ಕಾನೂನನ್ನು ಮಾಡಬೇಕೆಂದು ಪ್ರಾರ್ಥನೆ ಮಾಡಿಕೊಂಡು ಇಷ್ಟು ಅವಕಾಶ ಕೊಟ್ಟಿದ್ದಕ್ಕಾಗಿ ಮಾನ್ಯ ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಆರ್. ಎನ್. ಲಕ್ಷ್ಮೀಪತಿ (ಗೌರಿಬಿದನೂರು) ಮಾನ್ಯ ಸಭಾಪತಿಯವರೇ, ಈ ಎಕ್ಸೈಜ್ ಬಿಲ್‌ನಲ್ಲಿ ಅಡಕವಾಗಿಲ್ಲದೆ ಇರತಕ್ಕ ಒಂದು ವಿಷಯವನ್ನು ಈ ಸಭೆಯಲ್ಲಿ ತಿಳಿಸಿ ಸೆಲೆಕ್ಟ್ ಕಮಿಟಿಯವರು ಇದನ್ನು ಪರ್ಯಾಲೋಚನೆ ಮಾಡಬೇಕೆಂದು ಹೇಳಿ ಅವರಲ್ಲಿ ಮನವರಿಕೆ ಮಾಡಿಕೊಳ್ಳುತ್ತೇನೆ. ಈಗ ನಮ್ಮ ದೇಶದಲ್ಲಿ ಅನೇಕ ಪ ದೇಶಗಳಲ್ಲಿ ಪಾನನಿರೋಧವನ್ನು ಜಾರಿಗೆ ತಂದಿದ್ದೀರಿ. ಅದರಂತೆ ಗೌರಿಬಿದನೂರು ಮತ್ತು ಕೋಲಾರ ಜಿಲ್ಲೆಯಲ್ಲೂ ಪಾನನಿರೋಧ ಜಾರಿಯಲ್ಲಿದೆ. ಆದರೆ ಟ್ಯಾಪಿಂಗ್‌ಗೆ ಮಾತ್ರ ಗೌರಿಬಿದನೂರು ಮತ್ತು ಇತರ ಕಡೆಗಳಲ್ಲಿ ಅವಕಾಶ ಮಾಡಿಕೊಟ್ಟಿದ್ದೀರಿ, ಇದರಿಂದ ಏನಾಗುತ್ತದೆ ಎಂದರೆ ಕುಡಿಯುವವನು ತನ್ನ ಪ್ರಾಣ ಹೋದರೂ ಚಿಂತೆ ಇಲ್ಲ ಕುಡಿಯುವುದನ್ನು ಬಿಡುವುದಿಲ್ಲ. ಒಂದು ನಿದರ್ಶನವನ್ನು ಕೊಡುತ್ತೇನೆ ನಮ್ಮ ಗೌರಿಬಿದನೂರಿನಲ್ಲಿ ಒಂದು ದಿನ ಒಂದು ಬೀದಿಯಲ್ಲಿ ಒಂದು ಹೆಂಡದ ಲಾರಿ ಬಂತು ಅಲ್ಲಿ ಒಬ್ಬ ಚಾಡಮಾಲ ಇದ್ದ ಅವನು ಆ ಲಾರಿ ಹತ್ತಿರ ಹೋಗಿ ಪೀಪಾಯಿಯಿಂದ ಸೋರುತ್ತಾ ಇದ್ದ ಹೆಂಡವನ್ನು ಒಂದು ಲೋಟದಲ್ಲಿ ಹಿಡಿದುಕೊಳ್ಳುತ್ತಾ ಇದ್ದ ಏನಯ್ಯಾ ಹೀಗೆ ಮಾಡುತ್ತಾ ಇದ್ದೀ ಎಂದು ನಾನು ಅವನನ್ನು ಕೇಳಿದೆ ಅ ಕ್ಕೆ ಅವನು ಪ್ರಾಣವೇ ಹೋಗುತ್ತದೆ ಸ್ವಾಮಿ ಹೆಂಡದ ಲಾರಿ ಬಂದು ನಿಂತಿದೆ ಹೆಂಡ ಕುಡಿಯದೇ ಇರುವುದಕ್ಕೆ ಆಗುತ್ತದೆಯೇ ಎಂದು ಹೇಳಿದ. ಪಾನನಿರೋಧ ಬಂದಿದ್ದರೂ ಕೂಡ ಅನೇಕ ಕಡೆಗಳಲ್ಲಿ ಈಚಲು ಮರದಿಂದ ಹೆಂಡ ಇಳಿಸುವುದಕ್ಕೆ ಅವಕಾಶ ಕೊಟ್ಟರೆ ಖಂಡಿತವಾಗಿಯೂ ಪಾನನಿರೋಧ ಯಶಸ್ವಿಯಾಗುವುದಿಲ್ಲ, ಇದನ್ನು ತಿಳಿದುಕೊಂಡು ಸೆಲೆಕ್ಟ್ ಕಮಿಟಿಯವರು ಸೂಕ್ತವಾದ ರೀತಿಯಲ್ಲಿ ಇದನ್ನು ಪರ್ಯಾಲೋಚನೆ ಮಾಡಬೇಕಂದು ಹೇಳುತ್ತೇನೆ. ಇವತ್ತು ನೋಡಿ ಗೌರಿಬದನೂರಿನಲ್ಲಿ ಹೆಂಡದ ಅಂಗಡಿ ಇಡದೇ ಸರ್ಕಾರದವರಿಗೆ ಬರುತ್ತಾ ಇದ್ದ ವರಮಾನವೆಲ್ಲಾ ನಿಂತು ಹೋಗಿದೆ. ಆದರೆ ಅಲ್ಲಿ ಟ್ಯಾಂಪಿಂಗ್ ಇರುವುದರಿಂದ ಅಲ್ಲ ಹೆಂಡ ಕುಡಿಯುವುದಕ್ಕೆ ಯಥೇಚ್ಛವಾಗಿ ಸಿಕ್ಕುತ್ತದೆ. ಇದರಿಂದ ಜನಗಳಿಗೆ ಆಗಬೇಕಾದ ಉತ್ತಮ ಪರಿಣಾಮವಾಗುತ್ತಾ ಇಲ್ಲ, ಇದನ್ನು ಗಣನೆಗೆ ತೆಗೆದುಕೊಳ್ಳಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಈ ಕಾನೂನಿನಲ್ಲಿ ಪಾನನಿರೋಧ ಮಾಡಬೇಕಾದರೆ ಕುಡಿದವರಿಗೆ ಬಹಳ ಉಗ್ರವಾದ ಶಿಕ್ಷೆ ಮಾಡಬೇಕು ಸಾಧಾರಣ ಶಿಕ್ಷೆ ಮಾಡುತ್ತೇವೆ ಎಂದರೆ ಖಂಡಿತವಾಗಿಯೂ ಇದು ಯಶಸ್ವಿಯಾಗುವುದಿಲ್ಲ. ಮತ್ತು ಪಾನನಿರೋಧವನ್ನು ಜಾರಿಗೆ ತರುವ ಸಿಬ್ಬಂದಿ ಸರಿಯಾದವರು ಇರಬೇಕು ಕೆಳ ದರ್ಜೆಯ ಪೋಲೀಸ್ ದಫೇದಾರರಿಗೆ ಈ ಕೆಲಸವನ್ನು ವಹಿಸಿದರೆ ಪ್ರಯೋಜನವಿಲ್ಲ, ಏಕೆಂದರೆ ಅವರಿಗೆ ಬರುವ ಸಂಬಳ ಸಾಲುವುದಿಲ್ಲ, ಹೊಟ್ಟೆ ಬಟ್ಟೆಗೆ ಬಹಳ ತಾಪತ್ರಯ ಪಡುತ್ತ ಇರುತ್ತಾರೆ, ಮಕ್ಕಳನ್ನು ಸಾಕುವುದೇ ಅವರಿಗೆ ದುಸ್ತರವಾಗಿರುತ್ತದೆ ಅಂಥವರನ್ನು ಪಾನನಿರೋಧ ಮಾಡುವ ಕೆಲಸ ನೋಡಿಕೊಳ್ಳಿ ಎಂದರೆ ಖಂಡಿತವಾಗಿಯೂ ಅವರಿಂದ ಸಾಧ್ಯವಾಗುವುದಿಲ್ಲ.

ಶ್ರೀ ಎಂ. ವಿ. ರಾಮರಾವ್.—ಇದು ಪಾನನಿರೋಧಕ್ಕೆ ಸಂಬಂಧಪಟ್ಟ ಮಸೂದೆ ಅಲ್ಲ, ಎಕ್ಸೈಜ್ ಬಿಲ್ಲು ಇದು.

ಶ್ರೀ ಆರ್. ಎನ್. ಲಕ್ಷ್ಮೀಪತಿ.– ಏನೇ ಆಗಲಿ ಕಾನೂನು ಪ್ರಕಾರ ಅವರು ಕ್ರಮ ತೆಗೆದುಕೊಳ್ಳಬೇಕಲ್ಲವೆ?

ಶ್ರೀ ಎಂ. ವಿ. ರಾಮರಾವ್.—ಪಾನನಿರೋಧದ ಕಾನೂನಿನ ಪ್ರಕಾರ ತೆಗೆದುಕೊಳ್ಳುತ್ತಾರೆ, ಈ ಕಾನೂನಿನ ಪ್ರಕಾರ ಅಲ್ಲ.

ಶ್ರೀ ಆರ್. ಎನ್. ಲಕ್ಷ್ಮೀಪತಿ.—ಸರಿ, ಒಂದನೇ ಸಾರಿ ಕುಡಿದವನಿಗೆ ಹತ್ತು ರೂಪಾಯಿ ಜುಲ್ಮಾನೆ ಹಾಕಬೇಕು ಎರಡನೆ ಸಾರಿ ಕುಡಿಧವನಿಗೆ 20 ರೂಪಾಯಿ ಜುಲ್ಮಾನೆ ಹಾಕಬೇಕು ಜಾಸ್ತಿ ಕುಡಿದವರ ಮೇಲೆ ಹೆಚ್ಚು ಶಿಕ್ಷೆ ವಿಧಿಸಬೇಕು ಹಾಗೆ ಮಾಡದಿದ್ದರೆ ಖಂಡಿತವಾಗಿಯೂ ಕುಡಿತವನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಯಾರು ಕಳ್ಳತನದಲ್ಲಿ ಸಾಗಾಣಿಕೆ ಮಾಡುತ್ತಾರೆ ಮತ್ತು ಯಾರು ಕಳ್ಳತನದಲ್ಲಿ ಸಾರಾಯಿ ತಯಾರು ಮಾಡುತ್ತಾರೆ ಅಂತಹವರ ಮೇಲೆ ಹೆಚ್ಚು ಶಿಕ್ಷೆ ವಿಧಿಸಬೇಕೆಂದು ಪ್ರಾರ್ಥನೆ ಮಾಡುತ್ತೇನೆ.

ಬೇಲ್ ಮೇಲೆ ಬಿಡುವ ಒಂದು ವಿಷಯ ಇದೆ, ಇದರಲ್ಲಿ ಎಕ್ಸೈಜ್ ಇನ್‌ಸ್ಪೆಕ್ಟರು 50 ರೂಪಾಯಿ ಲಂಚ ತೆಗೆದುಕೊಂಡು ಬಿಟ್ಟು ಬಿಡುತ್ತಾನೆ ಎಂದು ಇಟ್ಟುಕೊಳ್ಳಿ ಅಂತಹ ಸಂಧರ್ಭದಲ್ಲಿ ಇದರ ಜವಾಬ್ದಾರಿ ಪೋಲೀಸ್‌ನವರದೇ ಅಥವಾ ಎಕ್ಸೈಜ್ ಇನ್‌ಸ್ಪೆಕ್ಟರದೇ ಯಾರದು ಎಂಬುದನ್ನು ತಿಳಿಸಬೇಕೆಂದು ಹೇಳುತ್ತೇನೆ.

(ಶ್ರೀ ಆರ್. ಎನ್. ಲಕ್ಷ್ಮೀಪತಿ)

ದಫೇದಾರರುಗಳಿಗೆ ಟು ಅರೆಸ್ಟ್ ವಿತ್ ಔಟ್ ವಾರಂಟ್ ಅಂತ ಹೇಳಿ ಹೆಚ್ಚಿನ ಅಧಿಕಾರ ಕೊಡುತ್ತಾ ಇದ್ದೀರಿ ಇದು ಬಹಳ ವಿಪರೀತವಾಗುತ್ತದೆ; ಬಹಳ ಉಗ್ರವಾಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ. ಇಷ್ಟು ಅಧಿಕಾರ ಅವರಿಗೆ ಕೊಡಬಾರದು, ಯಾರು ಕೇಸನ್ನು ಹಿಡಿದು ಕೋರ್ಟಿನಲ್ಲಿ ಕೇಸು ಹಾಕುತ್ತಾನೆ ಅವನೇ ಅದನ್ನು ಸಮರ್ಥನೆ ಮಾಡಬೇಕು. ನಮ್ಮ ತಾಲ್ಲೂಕಿನಲ್ಲಿ ಯಾವನೋ ಒಬ್ಬನ ಮೇಲೆ ಪೋಲೀಸ್‌ನವರು ಅವನ ಮನೆಯಲ್ಲಿ ಗಾಂಜಾ ಇತ್ತು ಎಂದು ಕೇಸು ಹಾಕಿದರು ಎಂದು ಇಟ್ಟುಕೊಳ್ಳಿ, ಬೇರೆಯಾರೋ ಒಬ್ಬರು ಹೋಗಿ ವಿಷಯ ತಿಳಿಸಿ ಅದನ್ನು ವಿತ್‌ಡ್ರಾ ಮಾಡಿದರೆ ಅದರಿಂದ ಎಂತಹ ದುಷ್‌ಪರಿಣಾಮವಾಗುತ್ತದೆ ಎಂಬುದನ್ನು ಸ್ವಲ್ಪ ಯೋಚನೆ ಮಾಡಬೇಕು. ಆದ್ದರಿಂದ ಪೋಲೀಸ್‌ನವರು ಯಾರು ಕೇಸು ಹಾಕುತ್ತಾರೊ ಅವರೇ ಪ್ರೂಫ್ ಕೊಡುವಂತಹ ಸ್ಥಿತಿಯಲ್ಲಿರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ವಿ. ಎಂ. ದೇವ್ (ಗುಬ್ಬಿ).—ಸ್ವಾಮಿ, ಇದರಲ್ಲಿ ಕೆಲವು ಪೀನಲ್ ಸೇಫ್ ಗಾರ್ಡ್ಸ್ ಕೊಟ್ಟಿದ್ದೀರಿ, ಏನೆಂದರೆ ಒಬ್ಬ ಅಧಿಕಾರಿ ಸಾಕಾದಷ್ಟು ಕಾರಣವಿಲ್ಲದೆ ಒಬ್ಬರ ಮನೆಗೆ ಹೋಗಿ ಏನಾದರೂ ಸರ್ಚ್ ಮಾಡುವುದಕ್ಕೆ ಹೋದರೆ ಅದಕ್ಕೆ ಶಿಕ್ಷೆಯಾಗುತ್ತದೆ ಎಂದು ಇದೆ. ಯಾರನ್ನು ಬೇಕಾದರೂ ವಾರಂಟ್ ಇಲ್ಲದೆ ಬಂಧಿಸಬಹುದು ಅಂತ ಇದರಲ್ಲಿ ಹೇಳಿದೆ. ಆದರೆ ಸರ್ಕಾರದವರು ಬರುಬರುತ್ತಾ ಆಡಳಿತವನ್ನು ಬಿಗಿಮಾಡಬೇಕೆಂದು ಏನೇನೋ ಮಾಡುತ್ತಿದ್ದಾರೆ; ಆದರೆ ನಾನೀಗ ನೋಡಿರುವುದನ್ನು ಮಾತ್ರ ಹೇಳುತ್ತಿದ್ದೇನೆ. ಪ್ರತಿಯೊಂದು ಪಂಚಾಯತಿ ಸದಸ್ಯರುಗಳನ್ನೂ ಮತ್ತು ರೈತಾಪಿ ಜನರನ್ನೂ ಕೇಳಿದ್ದರಲ್ಲಿ ಈಗ ಎಲ್ಲೆಲ್ಲಿಯೂ (illicit arrack) ಇಲ್ಲಿಸಿಟ್ ಅರಕ್ಕಿನ ತಯಾರಿಕೆ ಜಾಸ್ತಿಯಾಗಿದೆ ಎಂದು ಹೇಳುತ್ತಿದ್ದಾರೆ. ಇನ್ನು ನನ್ನ ಕೆಲವು ಸ್ನೇಹಿತರು ಬಹಳ ಮರುಕಪಟ್ಟುಕೊಂಡು ಇಂಥಹ ಕಾನೂನಿನಿಂದ ಜನ್ಯವಾದ ಮನೋಭಾವದಿಂದ ಅಧಿಕಾರಿಗಳು ನಿರಪರಾಧಿಗಳ ಮನೆಯನ್ನು ಸರ್ಚ್‌ಮಾಡಿದರೆಂದು ಹೇಳಿಕೊಂಡು ಮರುಗಿದರು. ಅದೇಕೋ ಏನೋ ಈ Prohibition (ಪ್ರಾಹಿಬಿಷನ್) ಬಹಳ ವರ್ಷಗಳಾದರೂ ಇದಿನ್ನೂ ಸಂಪೂರ್ಣವಾಗಿ ನಿಂತಿಲ್ಲ. ಅಷ್ಟೇ ಅಲ್ಲ. ಆಡಳಿತ ಪಕ್ಷದವರು ಇದನ್ನು ಸಮಯದಲ್ಲಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಈ ಹಿಂದೆ ನನ್ನ ಎಲೆಕ್ಷನ್ನಿನಲ್ಲಿ ಒಬ್ಬ ಕುಡಿದು ಬಂದು ಏನೇನೋ ಮಾತನಾಡಲು ಪ್ರಾರಂಭಿಸಿದ. ಆಗ ನಾನು......

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಅಧ್ಯಕ್ಷರೇ ಕೋರಂ ಇಲ್ಲ. ಸಭೆಯನ್ನು ಮುಂದುವರಿಸಬೇಕಾಗಿದೆ.

Mr. DEPUTY SPEAKER.—There is quorum.

ಶ್ರೀ ವಿ. ಎಂ. ದೇವ್.—ಆಡಳಿತ ಪಕ್ಷದವರಿಗೆ ಇದರಲ್ಲಿ ಒಂದು ವಿಚಕ್ಷಣೆ ಇಲ್ಲ. ಈ ದಿವಸ ನಾನು ಪೇಪರಿನಲ್ಲಿ ನೋಡಿದೆ. ಈಚೆಗೆ ಸ್ವಾತಂತ್ರ್ಯ ಗಳಿಸಿದ ಗೋವಾದಲ್ಲಿ ಈಗತಾನೇ ಎಲೆಕ್ಷನ್ ಮುಗಿದಿದೆ. ಆಡಳಿತ ಪಕ್ಷಕ್ಕೆ ಭಾರಿ ಸೋಲಾಗಿದೆ. ಕಾರಣವೇನು? ಇಂತಹ ಕಾನೂನುಗಳಿಂದ ಮತ್ತು ನಮ್ಮ ಅನೀತಿಗಳಿಂದ, ದುರಾಡಳಿತ ಪರಮಾವಧಿ ಮುಟ್ಟಿದೆ. ಈ ಮೊದಲು ಅಲ್ಲಿಂದ ಬರುತ್ತಿದ್ದಷ್ಟು ಲಿಕ್ಕರ್ ಬೇರೆಲ್ಲಿಂದಲೂ ಬರುತ್ತಿರಲಿಲ್ಲ. ಈ ಕುಡಿತವನ್ನು ತಪ್ಪಿಸಲು ಪ್ರಪಂಚದ ಅನೇಕ ದೇಶಗಳಲ್ಲಿ ನಡೆದ ವಿವಿಧ ಪ್ರಯೋಗಗಳ ಮತ್ತು ಪರಿಣಾಮಗಳ ಆಧಾರದಿಂದ ಕಾನೂನನ್ನು ರೂಪಿಸಬೇಕಾಗಿದೆ. ಅಮೇರಿಕಾ ದೇಶದವರು ಬಹಳ ಪ್ರಯತ್ನಪಟ್ಟರು, ಆದರೆ ಅದು ಸಾಧ್ಯವಾಗಲಿಲ್ಲ. ಆದರೆ ಇಲ್ಲಿ ತಾವು ಪೀನಲ್ ಸೇಫ್‌ಗಾರ್ಡ್ ಹಾಕಿ ಇದನ್ನು ಸಕ್ಸೆಸ್ ಮಾಡಲು ಹೊರಟಿದ್ದೀರಿ. ಅಮೇರಿಕಾದಲ್ಲಿ ಇಂತಹ ಪ್ರಯೋಗ ನಡೆದಿತ್ತು. ಪರಿಣಾಮವೇನಾಯಿತು? ಆ ಅಮೇರಿಕಾ ದೇಶದಲ್ಲಿರತಕ್ಕ ಫೆಡರಲ್ ಆರ್ಮಿ ಎಷ್ಟಿತ್ತೋ ಅದಕ್ಕಿಂತ ಹೆಚ್ಚು ಅಲ್ಲಿ ಫೈರಾರಂಸ್ ಇಟ್ಟುಕೊಂಡಿರತಕ್ಕ ಕುಡುಕರ ಸೈನ್ಯ ಹುಟ್ಟಿಕೊಂಡಿತು. ಇಲ್ಲಿ ಹೀಗಾದರೇ ಇನ್ನು ಆ ರಷ್ಯಾದೇಶದ ವಿಚಾರಕ್ಕೆ ಬಂದರೆ ಅಲ್ಲೇನು ವ್ಯತ್ಯಾಸಗಳಿವೆ ಎಂಬುದನ್ನು ನನ್ನ ಅಲ್ಲಿಗೆ ಹೋಗಿಬಂದಿರತಕ್ಕ ಸ್ನೇಹಿತರು ಹೇಳುತ್ತಾರೆ. ಅಲ್ಲಿ ಕುಡುಕರ ಸಂಖ್ಯೆ ಬಹಳ ಕಡಮೆ ಎಂದು ಹೇಳುತ್ತಾರೆ. ಅಲ್ಲಿ ಹುಡುಗರಾಗಿರುವಾಗಲೇ ಅವರಿಗೆ ಸರಿಯಾದ ಬುದ್ಧಿ ಕಲಿಸಿ ಅವರನ್ನು ಸಭ್ಯಪ್ರಜೆಗಳಾಗುವಂತೆ ಮಾಡಿರುತ್ತಾರೆಂದು ಹೇಳುತ್ತಿದ್ದಾರೆ. ಆದರೆ ಇಲ್ಲಿ ಕಂಟ್ರಾಕ್ಟ್ ತೆಗೆದುಕೊಂಡಾತ ಸಬ್‌ಲೀಜ್ ಮಾಡಬಹುದು ಎಂತ ಹೇಳಿದೆ. ಇದನ್ನು ನಾನು ಒಪ್ಪಲಾರೆ.

ಈ ವಿಚಾರ ನನಗೆ ಬಹಳ ವಿರೋಧವಾಗಿದೆ. ಸರ್ಕಾರ ಇಲ್ಲಿಸೆಟ್ ಅರೆಕ್ಕನ್ನು ತಡೆಗಟ್ಟಲು ಆಳವಾಗಿ ಆಲೋಚನೆ ಮಾಡಬೇಕು. ಈಗ ಸೋಷಿಯಲಿಸ್ಟಿಕ್ ರಾಜ್ಯಗಳಲ್ಲಿ ಕುಡುಕರಿಗೆ ಮಕ್ಕಳು ಹುಟ್ಟಿದರೆ ಅವರು ಅಂಗ ವಿಹೀನರಾಗುತ್ತಾರೆಂದು ಹೇಳುತ್ತಿರುವುದರಿಂದ ಮತ್ತು ವೈದ್ಯ ಶಾಸ್ತ್ರದ ಪ್ರಕಾರವು ಹೀಗಾಗುವುದು ಸರಿಯಾಗಿರುವುದರಿಂದ ಅಲ್ಲಿಯ ಜನ ಆ ಕುಡಿತವನ್ನೇ ಕೈಬಿಟ್ಟಿದ್ದಾ

ರಂತೆ ಶಾಲೆಯ ಪಠ್ಯ ಪುಸ್ತಕಗಳ ಮುಖಾಂತರ ಶಿಕ್ಷಣ ಕೊಡಬೇಕು. ನಿರುದ್ಯೋಗ ಹೋಗಲಾಡಿಸ ಬೇಕು. ಈ ರೀತಿ ಒಂದು ವಿಚಿತ್ರ ರೀತಿಯಲ್ಲಿ ಈ ಕುಡಿತವನ್ನು ತಪ್ಪಿಸಬೇಕೆಂದು ಹೇಳುತ್ತೇನೆ. ಇದು ಪರಿಣಾಮಕಾರಿಯಾಗಿಯೂ ಆಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೋರಂ ಇಲ್ಲ, ಸ್ವಾಮಿ.

Mr. DEPUTY SPEAKER.—We shall see.

(The bell was rung)

Sri C. J. MUCKANAPPA.—When there is no quorum, the chair just rings the bell. Till then the House should be in vacuum.

Mr. DEPUTY SPEAKER.—When the bell is rung, proceedings cannot go on.

Sri C. J. MUCKANNAPPA.—Are we so sit here keeping quiet till the members come or are we to adjourn ? Yesterday the chair was pleased to adjourn the House for 15 minutes for want of a quorum. Let us have a convention or a precedent in this regard. When there is no quorum, when there is a point of order raised on that account, what is the procedure to be followed immediately ?

Mr. DEPUTY SPEAKER.—When the bell is ringing, the Hon'ble member should follow the procedure. Nobody speaks when the bell is ringing. We are expected to wait for some time.

Sri C. J. MUCKANNAPPA.-What we want is the minimum required number of members pretent, at least 20 including the Speaker; then only we can transact business. Otherwise the House will be in a vacuum.

Mr. DEPUTY SPEAKER.—That I will consider.

Now there is quorum.

ಶ್ರೀ ವಿ. ಎಂ. ದೇವ್.—ನಾನು ಇಷ್ಟೇ ಹೇಳುವುದು ನಮ್ಮ ಕಾರ್ಯಕ್ರಮದೊಳಗೇ ಬದಲಾವಣೆಯಾಗಬೇಕು. ಮತ್ತು ನಾನಾಗಲೇ ಹೇಳಿದಹಾಗೆ ಈಗ ಇರುವ ಪ್ರೊಹಿಬಿಷನ್ ನೀತಿ ಮತ್ತು ಅದರೊಳಗಿರುವ ಈ ಎಕ್ಸೈಜು ಬಿಲ್ಲು ಹೇಗಿದೆ ಎಂದರೆ ಆಳುವ ಪಕ್ಷದ ಸದಸ್ಯರಿಗಾಗಲೀ ವಿರೋಧಪಕ್ಷದ ಸದಸ್ಯರಿಗಾಗಲೀ ಯಾರೇ ಆಗಲೀ ನಿಂದೆಗೆ ಗುರಿಯಾಗಲೇಬೇಕಾಗುತ್ತದೆ. ಜನ ಇದರಿಂದ ನಿಜವಾಗಿ ಕಷ್ಟಕ್ಕೆ ಗುರಿಯಾಗುತ್ತಾರೆ. ಇದರಲ್ಲಿರುವ ಅಧಿಕಾರಿಗಳ ವರ್ತನೆಯಿಂದಾಗಿ ನಿಜವಾದ ಅಧಃಪತನಕ್ಕೆ ಕಾರಣವಾದಂತಾಗುತ್ತದೆ. ಈ ದೃಷ್ಟಿಯಿಂದ ನೀವು ಇದನ್ನು ಕೂಲಂಕಷವಾಗಿ ಪರಿಶೀಲಿಸಿ ಮೂಲಭೂತವಾದ ಬದಲಾವಣೆ ಮಾಡಬೇಕು ಎಂದು ನನಗನ್ನಿಸುತ್ತದೆ.

3-30 P.M.

† ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮೀ, ಸರಕಾರದವರು ಈ ಮಾನ್ಯ ಸಭೆಯ ಮುಂದೆ ಅಬ್ಕಾರಿ ಮಸೂದೆ ಎಂದು ಏನು ಮಂಡಿಸಿದ್ದಾರೆ ಅದರ ವಿಷಯದಲ್ಲಿ ಕೆಲವು ಸಲಹೆಗಳನ್ನು ಮಾನ್ಯ ಸ್ನೇಹಿತರು ಈಗಾಗಲೇ ಮಾಡಿದ್ದಾರೆ. ಮಾನ್ಯ ಸಚಿವರು ಮದ್ಯಪಾನದ ವಿಷಯವನ್ನು ಪ್ರಸ್ತಾಪಮಾಡುವುದು ಈ ಮಸೂದೆಯ ವ್ಯಾಪ್ತಿಗೆ ಮೀರಿದ್ದು ಎಂದು ಅನೇಕಸಾರಿ ಸೂಚ್ಯಾರ್ಥವಾಗಿ ಭಾಷಣಕಾರರಿಗೆ ತಿಳಿಸಿದರು. ನಿಜ, ಕುಡಿಯುವ ವಿಷಯದಲ್ಲಿ ಕುಡುಕರ ವಿಷಯದಲ್ಲಿ ಈ ಮಸೂದೆ ಅಷ್ಟಾಗಿ ತಲೆಕೆಡಿಸಿಕೊಂಡಿಲ್ಲ. ಇದರಲ್ಲಿ ಮಾದಕ ಪದಾರ್ಥಗಳ ಉತ್ಪಾದನೆ, ಆಯಾತ ನಿರ್ಯಾತ, ಮಾರಾಟ ಇವುಗಳ ಬಗ್ಗೆ ಈ ವಿಧೇಯಕದಲ್ಲಿ ಪ್ರಕರಣಗಳನ್ನು ಹಾಕಿ ಬೇರೆ ಬೇರೆ ಭಾಗಗಳಲ್ಲಿರತಕ್ಕ ಹಳೇ ಕಾನೂನುಗಳನ್ನೆಲ್ಲಾ ಏಕರೂಪತೆಗೆ ತರುವ ಉದ್ದೇಶದಿಂದ ತಂದಿದ್ದೇವೆಂದು ಹೇಳಿದ್ದಾರೆ. ಮೇಲಾಗಿ ಈ ಮಸೂದೆ ಸೆಲೆಕ್ಟ್ ಕಮಿಟಿಗೆ ಕೂಡ ಹೋಗಬೇಕಾಗಿದೆ ಎಂದು ಹೇಳಿ ಈಗಾಗಲೇ ಸೂಚನೆಯನ್ನೂ ಕೊಟ್ಟಿದ್ದಾರೆ. ಇನ್ನೊಂದು ಮಾತನ್ನು ಇಲ್ಲಿ ಹೇಳಬೇಕಾಗಿದೆ. ಅದು ಮಾನ್ಯ ಮುಕ್ಕಣ್ಣಪ್ಪನವರು ಹೇಳಿದ ಹಾಗೆ ಮತ್ತು ಈಗ ತಾನೇ ಪ್ರಸ್ತಾಪ ಮಾಡಿದ ಹಾಗೆ ಸಭೆಯಲ್ಲಿ ಚರ್ಚೆ ನಡೆಯುವಾಗ ಸದಸ್ಯರುಗಳಿಲ್ಲದೆ ಶೂನ್ಯವಾಗಿರುವಂತಹ ಪರಿಸ್ಥಿತಿ ನೋಡಿದರೆ ಆಡಳಿತಪಕ್ಷದ ಸದಸ್ಯರುಗಳಿಗೆ ಎಷ್ಟೊಂದು ಆಸಕ್ತಿ ಇದೆ ಎನ್ನುವುದು ಎಲ್ಲ ವರ್ತುಳದಲ್ಲೂ ಕಂಡು

(ಶ್ರೀ ಎಸ್. ಗೋಪಾಲಗೌಡ)

ಬರುತ್ತಿದೆ. ನಾನಾದರೂ ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದು ಇಂತಹ ಮಸೂದೆಗಳನ್ನು ಮುಂದೆ ಯಾವಾಗಬೇಕಾದರೂ ತರಬಹುದು. ಬೇರೆ ಕೆಲಸಕಾರ್ಯಗಳು ಹೆಚ್ಚಾಗಿರುವಾಗ ಕೆಲವು ದಿನಗಳ ಕಾಲ ಈ ಸಭೆಯನ್ನು ಮುಂದುವರಿಸುವುದರ ಬಗೆಗಾದರೂ ಯಾವ ವಿಚಾರವನ್ನೂ ಮಾಡಲಿಲ್ಲ. ಇಲ್ಲಿ ಕುಳಿತುಕೊಳ್ಳುವುದಕ್ಕೆ ಕಾಲಾವಕಾಶವಿಲ್ಲ. ಬೇಕಾದ ಹಾಗೆ ಮಂತ್ರಿಗಳು ಪ್ರವಾಸದಲ್ಲಿ ತಿರುಗುತ್ತಿದ್ದಾರೆ. ತುರುವೇಕೆರೆ ಕಡೆಗೆ ಹೋಗುವವರು, ಧಾರವಾಡದ ಕಡೆಗೆ ಹೋಗುವವರು, ಬಿಜಾಪುರದ ಕಡೆಗೆ ಹೋಗುವವರು, ಹೀಗೆ ಇದರಲ್ಲಿ ಬಹಳ ಕಾಲ ಕಳೆಯುತ್ತಿದ್ದಾರೆ.

(Interruption.)

ನಾನು ತಮ್ಮ ಮೂಲಕ ವಿನಂತಿ ಮಾಡಿಕೊಳ್ಳುವುದು ಈ ಸಭೆಯನ್ನು ಇನ್ನೂ ಮುಂದೆ ಹೋಗುವ ರೀತಿಯಲ್ಲಿ ಏರ್ಪಾಡುಗಳನ್ನು ಮಾಡುವುದು ಒಳ್ಳೆಯದು.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಗೋವಾದಲ್ಲಿ ಚುನಾವಣೆ ನಡೆಯುತ್ತಿದೆ.

ಶ್ರೀ ಎಸ್. ಗೋಪಾಲಗೌಡ.—ಗೋವಾಕ್ಕೆ ಯಾರೂ ಹೋಗಿಲ್ಲ. ಇಂತಹ ಸನ್ನಿವೇಶದಲ್ಲಿ ನಮ್ಮ ಕೆಲಸ ಕಾರ್ಯಗಳಿಗೆ ಗೌರವಕ್ಕೆ ಚ್ಯುತಿಬಾರದಂತೆ ಮಾಡಬೇಕಾಗುತ್ತದೆ. ಕೆಲವು ಸನ್ನಿವೇಶಗಳಲ್ಲಿ ನಾವು ಮತ್ತು ನೀವು ನಮ್ಮ ಜವಾಬುದಾರಿ ಏನಿದೆ ಎನ್ನುವ ವಿಷಯದಲ್ಲಿ ಗಮನಿಸಬೇಕಾಗುತ್ತದೆ. ಈ ಮಸೂದೆಯಲ್ಲಿ ಹೊಸ ದೃಷ್ಟಿಕೋನ ಯಾವ ವಿಚಾರದಲ್ಲಾಗಲೀ ಇದೆ ಎನ್ನುವುದು ನನಗೆ ಎಲ್ಲೂ ಕಂಡು ಬಂದಿಲ್ಲ. ಬೇರೆ ಕಾನೂನುಗಳಲ್ಲಿ ಏನಿತ್ತೋ ಅವುಗಳಲ್ಲಿರತಕ್ಕ ಸೆಕ್ಷನ್ನುಗಳನ್ನೂ ಇಲ್ಲಿಯೂ ಅಳವಡಿಸಿ ಅದನ್ನು ಏಕರೂಪತೆಗೆ ತರಬೇಕೆನ್ನುವ ಪ್ರಯತ್ನ ನಡೆದಿದೆ. ಆದರ ಮೂಲಭೂತವಾಗಿ ನಮ್ಮ ಮುಂದೆ ಇರತಕ್ಕ ಸಮಸ್ಯೆಯನ್ನು ತಂದು ಈ ಕಾನೂನಿನ ಏಕರೂಪತೆ ಮಾಡುವುದಲ್ಲ. ಈ ಕಾನೂನನ್ನು ಜಾರಿಗೆ ಕೊಡುವುದರಲ್ಲಿರತಕ್ಕ ಅಡ್ಡಿ ಆತಂಕಗಳನ್ನು ಮಾನ್ಯ ಸಚಿವರು ಗಮನಿಸಿದ್ದಾರೋ ಇಲ್ಲವೋ ? ನಾನು ಮಾನ್ಯ ಸಚಿವರಿಗೆ ಸೂಚನೆ ಕೊಡುವುದು ಈ ಮಸೂದೆಯ ಮೇಲೆ ಚರ್ಚೆಮಾಡುವಾಗ ಪಾನನಿರೋಧದ ವಿಷಯದಲ್ಲಿ ಯಾರಾದರೂ ಹೇಳುವುದಕ್ಕೆ ಹೋದರೆ ಅದು ಈ ಮಸೂದೆಯ ವ್ಯಾಪ್ತಿಗೆ ಮೀರಿದ್ದೆಂದು ಹೇಳುತ್ತಾರೆ.

ಶ್ರೀ ಎಂ. ವಿ. ರಾಮರಾವ್.—ಸದಸ್ಯರು ಪಾನನಿರೋಧವನ್ನು ಚರ್ಚಿಸುವುದಕ್ಕೆ ಇಷ್ಟಪಟ್ಟರೆ ಅವರು ಮಾತನಾಡಬಹುದು. ಆದರೆ ಇಲ್ಲಿ ಪ್ರಸ್ತಾಪಮಾಡುತ್ತಿರುವ ಬಿಲ್ಲಿನಲ್ಲಿ ಪಾನನಿರೋಧಕ್ಕೆ ಅನ್ವಯಿಸುವಂತಹ ಕಾನೂನು ಇದಲ್ಲ. ಇದು ಎಕ್ಸೈಜು ಬಿಲ್ಲು; ಇದರಲ್ಲಿ ಪಾನನಿರೋಧದ ಬಗೆಗೆ ಪ್ರಸ್ತಾಪವಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಹೌದು, ಪಾನ ನಿರೋಧದ ಬಗ್ಗೆ ಇಲ್ಲಿ ಪ್ರಸ್ತಾಪ ಇಲ್ಲ. ಆದರೆ ಈ ಎಕ್ಸೈಜು ಬಿಲ್ಲಿಗೆ ಸಂಬಂಧಿಸಿದಂತೆ ಎಕ್ಸೈಜು ಕಮಿಷನರನ್ನು ನೇಮಕ ಮಾಡುವುದು, ಎಕ್ಸೈಜು ಇನ್ಸ್‌ಪೆಕ್ಟರುಗಳನ್ನು ಎಲ್ಲ ಜಿಲ್ಲೆಗಳಲ್ಲಿಯೂ ನೇಮಕ ಮಾಡುವುದರ ಮೂಲಕ, ಇನ್ನು ಮಾದಕ ಪದಾರ್ಥಗಳ ಉತ್ಪಾದನೆ, ಅವುಗಳ ಮಾರಾಟ ಮತ್ತು ಅಂತಹ ಪದಾರ್ಥಗಳನ್ನೂ ನಿಯಂತ್ರಣಗೊಳಿಸುವುದು, ಇವನ್ನೆಲ್ಲಾ ಮಾಡುವುದಕ್ಕೆ ಈ ಕಾನೂನು ಪ್ರಕಾರ ಅವಕಾಶವಿದೆ ಎಂದು ಸ್ಪಷ್ಟಪಡಿಸುತ್ತಾರೆ. ಆದರೂ ಈಗಿನ ಪಾನನಿರೋಧದ ಸಂದರ್ಭದಲ್ಲಿ ಇದನ್ನೆಲ್ಲಾ ಕಾರ್ಯಗತ ಮಾಡುವುದಕ್ಕೆ ಅನುಕೂಲವಾದ ವಾತಾವರಣವಿದೆಯೋ ಎನ್ನುವುದನ್ನು ನಾವು ಇಲ್ಲಿ ಗಮನಿಸಿದರೆ ಈ ಮಸೂದೆಗೆ ನೇರವಾದ ಒಂದು ಸ್ಥಾನ ದೊರೆಯುವುದಿಲ್ಲ ಮತ್ತು ಇದರ ಆವಶ್ಯಕತೆ ನೇರವಾಗಿ ಕಂಡುಬರುವುದಿಲ್ಲ. ಮುಖ್ಯವಾಗಿ ನಮ್ಮ ಮುಂದೆ ಇರುವ ಕಾನೂನಿನಲ್ಲಿ ಇರುವುದು ಮಾದಕ ಪದಾರ್ಥಗಳ ಉತ್ಪಾದನೆ ಅದರ ಮೂಲಕ ಇತರ ಪ್ರದೇಶಗಳಿಂದ ಆಯಾತ ಮಾಡುವುದು ಮತ್ತು ಇಲ್ಲಿಂದ ಪರದೇಶಗಳಿಗೆ ಕಳುಹಿಸಿಕೊಡುವುದು ಇವುಗಳ ಬಗ್ಗೆ ನಮಗೆ ಕಾನೂನು ಬೇಕಾಗುತ್ತದೆ ಎಂದು ಎಲ್ಲ ಕಾನೂನುಗಳನ್ನೂ ಒಂದೇ ಕಡೆಗೆ ಕೂಡಿಸುವ ಪ್ರಯತ್ನದಲ್ಲಿ ತರಲಾಗಿದೆ. ಎಲ್ಲೆಲ್ಲಿ ನಾವು ಮಾದಕ ಪದಾರ್ಥಗಳನ್ನು ಉತ್ಪಾದನೆ ಮಾಡುತ್ತೇವೆ ಅವನ್ನು ಯಾವ ಸ್ಥಳದಿಂದ ಯಾವ ಸ್ಥಳಕ್ಕೆ ಕಳುಹಿಸುತ್ತೇವೆ, ಇಷ್ಟಕ್ಕೆ ಮಾತ್ರ ನಾವು ಈ ಕಾನೂನನ್ನು ಅನ್ವಯಿಸುವುದಕ್ಕಾಗಿ ಮಾಡಲಾಗಿದೆ. ವಾಸ್ತವಸ್ಥಿತಿ ಏನಾಗಿದೆ ಎಂದರೆ ಪಾನನಿರೋಧದ ವಿಷಯದಲ್ಲಿ ರಾಷ್ಟ್ರೀಯವಾದ ಒಂದು ನೀತಿ ಕೂಡ ಇವೊತ್ತು ಸರಕಾರದ ಮುಂದೆ ಇಲ್ಲ. ಹಾಗಿರುವಾಗ ಯಾರೂ ಕುಡಿಯುವವರ ವಿಷಯದಲ್ಲಿ ಯಾರೂ ಪ್ರಸ್ತಾಪ ಮಾಡದೇ ಇದನ್ನು ಏಕೀಕೃತವಾಗಿ ಮಾಡುವುದು ಯಾವ ತರದಲ್ಲಿ. ಬೆಂಗಳೂರಿನಲ್ಲಿ ಇದರ ಉತ್ಪಾದನೆ ಮಾಡುತ್ತಾರೆ ಆದರೆ ಇಲ್ಲಿ ಹೆಂಡ ಸಾರಾಯಿಗಳನ್ನು ಕುಡಿಯುವು

ದರಲ್ಲಿ ತಪ್ಪಾಗಲಾರದು. ಬೇರೆ ಕಡೆಗಳಲ್ಲಿ ನಿಯಂತ್ರಣ ಮಾಡಿದ್ದಾರೆ. ನಿಯಂತ್ರಣದ ಮಟ್ಟದಲ್ಲಿ ಒಂದು ರೀತಿಯ ಅಸಂಮಂಜಸತೆ ಇದೆ. ಈ ವಿಧೇಯಕವನ್ನು ಜಾರಿಗೆ ಕೊಡುವಾಗ ಸರಕಾರದ ಸಿಬ್ಬಂದಿಯವರು ಯಾವ ರೀತಿ ಕೆಲಸ ಮಾಡಬೇಕು ಎನ್ನುವುದೇ ಒಂದು ದೊಡ್ಡ ಪ್ರಶ್ನೆಯಾಗಿದೆ.

ಈಗಾಗಲೇ ತಾವು ಕೇಳಿದಿರಿ: ಮಂಗಳೂರು ಜಿಲ್ಲೆಯ ಪರಿಸ್ಥಿತಿ ಹಿಂದೆ ಏನಿತ್ತು, ಪಾನ ನಿರೋಧ ಜಾರಿಗೆ ಬಂದಮೇಲೆ ಏನು ಆಯಿತು ಎಂಬುದನ್ನು. ಅದನ್ನು ನಾನು ರಾಜ್ಯದ ವಿಷಯದಲ್ಲಿ ಹೇಳಬೇಕೆಂದರೆ, ಇವತ್ತು ಸುಮಾರು 10 ಕೋಟಿ ರೂಪಾಯಿಗಳ ಆದಾಯ—ಸರಕಾರಕ್ಕೆ ಬರಬೇಕಾದ ಆದಾಯ, ಈ ಒಂದು ಪಾನನಿರೋಧ ನೀತಿಯಿಂದಾಗಿ ಹೋಗಿದೆ. ತಾವು ಹಿಂದೆ ಒಂದು ಸಲ ಮಾನ್ಯ ಸಭೆಯಲ್ಲಿ ಹೇಳಿದ ಹಾಗೆ, ಈ ನೀತಿ ಯಶಸ್ವಿಯಾಗಿಲ್ಲ ಅನ್ನುವುದನ್ನು ತಾವು ಒಪ್ಪಿಕೊಂಡಿದ್ದೀರಿ.

ಶ್ರೀ ಎಂ. ವಿ. ರಾಮರಾವ್.—ನಾನು ಒಪ್ಪಿಕೊಂಡಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕೇಸುಗಳು ಎಷ್ಟಿವೆ ಎಂದು ಹೇಳುವಾಗ ಮಾತ್ರ ಹಾಗೆ ಹೇಳಿದಿರಿ. ಅದಕ್ಕೆ ಮುಂಚೆ ಅವತ್ತು ಯಶಸ್ವಿಯಾಗಿಲ್ಲ ಅಂತ ಹೇಳಿದಿರಿ. ಅದನ್ನು ಯಶಸ್ವಿಯಾಗಿ ಕಾರ್ಯಗತ ಮಾಡಿದೆ ಎಂದು ಯಾರೂ ಹೇಳುವುದಕ್ಕೆ ಸಾಧ್ಯವಿಲ್ಲ. ತದ್ವಿರುದ್ಧವಾಗಿ ಇವತ್ತು ಬೆಂಗಳೂರು ಒಂದು ದೊಡ್ಡ ಪಾನದ ಕೇಂದ್ರವಾಗಿದೆ. ಇಲ್ಲಿಂದ ಪಾನನಿರೋಧ ಇರತಕ್ಕಂಥ ರಾಜ್ಯದ ಮೂಲೆ ಮೂಲೆಗೂ ಗುಪ್ತಗಾಮಿನಿಯಾಗಿ ಹೆಂಡದ ಹೊಳೆ ಹರಿಯುವುದನ್ನು ನೋಡಬಹುದು. ತಮಗೆ ಕುಡಿಯುವ ಅಭ್ಯಾಸವಿದೆಯೋ ಇಲ್ಲವೊ ಗೊತ್ತಿಲ್ಲ. ಆದರೆ ಈ ಕಾನೂನ ಹೇಗೆ ಅನ್ವಯವಾಗುತ್ತಿದೆ ಅನ್ನುವುದನ್ನು ಪರೀಕ್ಷೆ ಮಾಡಿ ನೋಡಬೇಕು.

† ಶ್ರೀ ಎಂ. ವಿ. ರಾಮರಾವ್.—ನನಗೆ ಕುಡಿಯುವ ಅಭ್ಯಾಸವಿದೆಯೊ ಇಲ್ಲವೊ ಎಂದು ಅನುಮಾನಪಟ್ಟರು. ಅದನ್ನು ಪರೀಕ್ಷೆಮಾಡಲು ಅವರು ದಯೆಯಿಟ್ಟು ನನ್ನ ಮನೆಯಲ್ಲಿ 8 ದಿನಗಳಿದ್ದು ಅಭ್ಯಾಸವಿದೆಯೊ ಇಲ್ಲವೊ ಎಂದು ಪರೀಕ್ಷೆ ಮಾಡಲಿ. ಅದು at my cost. Anybody who is curious is welcome. No toddy is also tapped in Bangalore. ಬೆಂಗಳೂರಿಗೆ ಅದು ಹೊರಗಡೆಯಿಂದ ಬರಬೇಕು. ಬೆಂಗಳೂರಿನಲ್ಲಿ ಹೆಂಡ ಉತ್ಪತ್ತಿಯಾಗುವುದಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಕ್ಷಮಿಸಬೇಕು. ತಮ್ಮ ಬಗ್ಗೆ ನನಗೆ ಯಾವ ಅನುಮಾನವೂ ಇಲ್ಲ. ನಾನು ಈ ವಿಷಯವನ್ನು ತಮ್ಮ ಬಗ್ಗೆ ಒಂದು ರೆಟಾರಿಕ್ ಆಗಿ ಹೇಳಿದ್ದೇನೆ. ನಾನು ಹೇಳಿದ್ದು ಸರಕಾರದವರಿಗೆ. ಒಂದು ವಾರ ತಮ್ಮ ಮನೆಯಲ್ಲಿ ಇರುವುದಕ್ಕೆ ನಾನು ಯಾವಾಗಲೂ ಸಿದ್ಧನಿದ್ದೇನೆ, ಸಂತೋಷದಿಂದ ತಮ್ಮ ಆಮಂತ್ರಣವನ್ನು ಒಪ್ಪಿಕೊಳ್ಳುತ್ತೇನೆ. ಇಲ್ಲಿ ಹೆಂಡ ಅನ್ನುವ ಶಬ್ದವನ್ನು ಎಲ್ಲ ಹೆಂಡಗಳಿಗೂ, ಮದ್ಯಕ್ಕೂ ಉಪಯೋಗಿಸಿದೆ. ವೀನಸ್ ಬ್ರೂಯರಿ ಅಥವಾ ಕೋಡೆ ಈಶ್ವರಸಾ ಕಂಟ್ರಿಲಿಕ್ಕರ್ ಅಂತ ಹೇಳಿ ಏನು ತಯಾರುಮಾಡುತ್ತಾರೊ, ಅದು ಮತ್ತು ಬ್ರಾಂದಿ, ವಿಸ್ಕಿ ಎಲ್ಲಾ ಅದರಲ್ಲಿ ಸೇರಿಕೊಂಡಿದೆ. ಅದು ಎಷ್ಟು ವ್ಯಾಪಕವಾಗಿದೆಯೆಂದರೆ ಬೆಂಗಳೂರು ಅದಕ್ಕೆ ಕೇಂದ್ರವಾಗಿದೆ. ಪರದೇಶಗಳ ಬಹಳ ಬೆಲೆ ಬಾಳುವ ಮದ್ಯ ಬೆಂಗಳೂರಿನಲ್ಲಿ ಇವತ್ತು ದೊರೆಯುತ್ತದೆ. ಬಹುಶಃ ರಷ್ಯ ದೇಶದಲ್ಲಿ ದೊರೆಯದೆ ಇರತಕ್ಕಂಥ ಬಹಳ ಉತ್ತಮ ತರಗತಿಯ ಹೆಂಡ ಬೆಂಗಳೂರಿನಲ್ಲಿ ದೊರೆಯುತ್ತದೆ ಅಂತ ಕೇಳಿದ್ದೇನೆ. ದೊಡ್ಡ ದೊಡ್ಡ ಮನುಷ್ಯರು ದೊಡ್ಡ ದೊಡ್ಡ ಸಮಾರಂಭಗಳಲ್ಲಿ ಕುಡಿಯುವುದಕ್ಕೆ ಲಾಯಕ್ಕಾದ ಮದ್ಯ ಸಿಗುತ್ತದೆ. ಅವು ಒಂದೊಂದು ಬಾಟ್ಲಿಗೆ 200-300 ರೂಪಾಯಿ ಆಗುತ್ತದೆ. ಅದು ಬ್ಲ್ಯಾಕ್ ಅಂಡ್ ವೈಟ್ ವಿಸ್ಕಿ ಅನ್ನುತ್ತಾರೆ, ಅದೆಲ್ಲಾ ಮುಕ್ಕಣ್ಣಪ್ಪನಂಥವರಿಗೆ ಅರ್ಥವಾಗುವುದಿಲ್ಲ. ಇಂಥ ಮದ್ಯಗಳ ಅಂಶವನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಈ ಕಾನೂನನ್ನು ಕಾರ್ಯಗತ ಮಾಡುವ ಜವಾಬ್ದಾರಿಯನ್ನು ಸರಕಾರದ ಸಿಬ್ಬಂದಿಗಳ ಮೇಲೆ ಹೊರಿಸಬಹುದು. ಕಾನೂನು ಮಾಡುವುದು ಸುಲಭ. ನಿಯಂತ್ರಣ ಮಾಡುವಾಗ ವಾಸ್ತವಿಕತೆಯನ್ನು ಗಮನಿಸಬೇಕಾದ್ದು ಮುಖ್ಯ. ಇದರಿಂದ ಎಷ್ಟು ಕಷ್ಟಕ್ಕೆ ಈಡಾಗುತ್ತೇವೆ ಅನ್ನುವುದನ್ನು ಈ ಸಭೆಯ ಗಮನಕ್ಕೆ ಮತ್ತು ತಮ್ಮ ಗಮನಕ್ಕೆ ತರಬೇಕೆನ್ನುವುದು ನನ್ನ ಇಚ್ಛೆ. ಹೀಗಿರುವಾಗ ಇವತ್ತು ಈ ಒಂದು ಮದ್ಯ ಅಕ್ರಮವಾಗಿ ಬೇರೆ ಕಡೆಗೆ ಸಾಗಿಸುವುದನ್ನು, ಮಾರಾಟವಾಗುವುದನ್ನು ತಡೆಯುವುದಕ್ಕೆ ಸಾಧ್ಯವಿಲ್ಲ ಅನ್ನುವುದನ್ನು ನಾವು ಒಪ್ಪಿಕೊಳ್ಳಬೇಕಾಗುತ್ತದೆ. ಅದರಲ್ಲಿ ಸರಕಾರದ ಪರವಾಗಿ ತಾವು ಮಾತನಾಡಬಹುದು, ಸಾಧ್ಯವಾದ ಮಟ್ಟಿಗೆ ತಡೆಗಟ್ಟಿದ್ದೇವೆ ಎಂದು ; ಅದನ್ನು ತಾವು ಹೇಳಬೇಕು, ಹೇಳುತ್ತೀರಿ. ವಾಸ್ತವವಾಗಿ ಇದನ್ನು ತಡೆಗಟ್ಟುವುದಕ್ಕೆ ಸಾಧ್ಯವೇ ಇಲ್ಲದಂಥ ಸ್ಥಿತಿಯಲ್ಲಿದ್ದೇವೆ. ಇವತ್ತು ಈ ಪಾನದ ವ್ಯಾಪಾರ, ಮಾರಾಟ ಎಲ್ಲಕಡೆಯಲ್ಲಿಯೂ ನಡೆಯುತ್ತಿದೆ. ನನಗೆ ಅನ್ನಿಸುತ್ತದೆ: ಸರಕಾರಕ್ಕೆ ಭಾಗ್ಯ ಏನೆಂದರೆ ಒಂದು ಕ್ರಮವರಿತು ಈ ಮದ್ಯದ ಮಾರಾಟವನ್ನು ವ್ಯವಸ್ಥಿತವಾಗಿ ಮಾಡಿಕೊಂಡು ಹೋಗಿದ್ದರೆ, ನಿರಾಯಾಸವಾಗಿ ಉತ್ಪತ್ತಿ ಬರಬೇಕಾದ್ದು 10 ಕೋಟಿ ರೂಪಾಯಿ; ಅದು

(ಶ್ರೀ ಎಸ್. ಗೋಪಾಲಗೌಡ)

ಹೋಯಿತು. ಅವರಲ್ಲಿ ಬಿನ್ನಾಭಿಪ್ರಾಯವಿರಬಹುದು. ಮಾನ್ಯಸ್ನೇಹಿತರು ಕೆಲವರು ಪಾನ ನಿರೋಧ ಯಶಸ್ವಿಯಾಗಿದೆ ಎಂದು ಹೇಳಬಹುದು; ಬಹಳ ಜನ ಕೂಲಿ ಜನರು ಈ ನೀತಿಯಿಂದಾಗಿ ಈ ಕುಡಿಯುವುದನ್ನು ಬಿಟ್ಟಿದ್ದಾರೆ ಎಂದು ಹೇಳಬಹುದು. ಮುಖ್ಯವಾಗಿ ಹರಿಜನರು ಒಳ್ಳೆಯ ಸ್ಥಿತಿಗೆ ಬಂದಿದ್ದಾರೆ ಎಂತ ಬಹಳ ಕಡೆಗಳಲ್ಲಿ ನನಗೆ ಹೇಳುತ್ತಾರೆ. ಈ ಮಾತಿನಲ್ಲಿ ಎಷ್ಟು ಅಂಶ ಸತ್ಯವಿದೆ ಎಂದು ಪರಿಶೀಲನೆ ಮಾಡಲು ಅಥವಾ ಮನದಟ್ಟು ಮಾಡಿಕೊಳ್ಳುವುದಕೆ ಸಾಧ್ಯವಾಗಿಲ್ಲ. ಈ ರಾಜ್ಯದಲ್ಲಿ ನಾವು ನೋಡಿದರೆ ಬಹುಶಃ ಇವತ್ತು ಸಾರೋದ್ಧಾರವಾಗಿ ಗೊತ್ತಾದ ಅಂಗಡಿಗಳನ್ನು ನಿಯಂತ್ರಣಮಾಡಿ ಮಾರಿದ್ದರೆ ಎಷ್ಟು ಖರ್ಚಾಗಬೇಕೊ, ಈ ಕಳ್ಳವ್ಯಾಪಾರದಲ್ಲಿ ಇವತ್ತು ಅದಕ್ಕಿಂತ ಹೆಚ್ಚು ಖರ್ಚಾಗುತ್ತದೆ. ಈಗ ಶ್ರೀ ಲಕ್ಷ್ಮೀಪತಿಯವರು ಹೇಳಿದಂತೆ, ಕೆಲವುಕಡೆ ಪ್ರೊಹಿಬಿಷನ್ ಇರುವ ಕಡೆ ಟಾಡಿ ಟ್ಯಾಪ್ ಮಾಡುವುದಕ್ಕೆ ಅವಕಾಶವನ್ನು ಕೊಡಲೇ ಬೇಕಾಗುತ್ತದೆ. ಏಕೆಂದರೆ ಬೆಂಗಳೂರಿನಲ್ಲಿ ಈಚಲುಮರಗಳು, ಬಗಿನೆ ಮರಗಳು ಇಲ್ಲ. ಪ್ರೊಹಿಬಿಷನ್ ಇರುವ ಹಾಸನ ಅಥವಾ ಬೇರೆ ಕಡೆಯಿಂದ ಟ್ಯಾಪ್ ಮಾಡಿ ತರಬೇಕು. ಶ್ರೀ ಕೃಷ್ಣಶೆಟ್ಟರು ಹೇಳಿದ ಹಾಗೆ ಹೆಂಡ ಇಳಿಸುವಾಗ ಅದು 9 ಗಂಟೆಗೆ ನೀರ ಆಗುತ್ತದೆ, ಅದು ಬಿಸಿಲು ಬಂದಮೇಲೆ ಕುಣಿಯುವುದಕ್ಕೆ ಹತ್ತಿ, ಹುಳಿ ಆಗಿ, ರೂಪ ತಾಳಿ ತನ್ನ ರೂಪಕ್ಕೆ ತಾನೆ ಬರುತ್ತದೆ. ಬಿಸಿಲು ಏರುತ್ತಾ ಕಳ್ಳು ಆಗುತ್ತಾ ಬರುತ್ತದೆ, ನೀರ ಆಗುವುದಿಲ್ಲ. ಒಂದು ಕಡೆಯಿಂದ ಒಂದು ಕಡೆಗೆ ಸಾಗಿಸುವಾಗ ನೀರ ಕಳ್ಳು ಆಗುತ್ತದೆ.

ಆದ್ದರಿಂದ ಈ ಕಾನೂನನ್ನು ಯಾವದೃಷ್ಟಿಯಿಂದ ಸ್ವಾಗತಿಸಬೇಕು ಅನ್ನುವುದು ಅರ್ಥವಾಗುತ್ತಿಲ್ಲ. ಇದರಲ್ಲಿ ನಾನು ಮಾನ್ಯ ಸಚಿವರಲ್ಲಿ ಈ ಸಂದರ್ಭದಲ್ಲಿ ಕೇಳಿಕೊಳ್ಳುವುದು ಇಷ್ಟು: ಮಾನ್ಯ ಮುಖ್ಯ ಮಂತ್ರಿಗಳು ಬಹಳ ಸಲ ಪಾನನಿರೋಧದ ವಿಷಯದಲ್ಲಿ ಪುನರ್ವಿಮರ್ಶೆ ಮಾಡತಕ್ಕಂಥ ಕಾಲ ಬಂದಿದೆ ಅಂತ ಹೇಳಿದರು.

Mr. DEPUTY SPEAKER.—The Hon'ble Member should speak on the Bill.

ಶ್ರೀ ಎಸ್. ಗೋಪಾಲಗೌಡ.—ಅದನ್ನೂ ಮಾತನಾಡಬೇಕಾಗುತ್ತದೆ. ಬೆಂಗಳೂರಿನಲ್ಲಿ ಒಂದು ಕಡೆ ನಾವು ಉತ್ಪಾದನೆ ಮಾಡುವ ಅಂಗಡಿಗಳಿಗೆ ಲೈಸೆನ್ಸು ಕೊಟ್ಟಿದ್ದೇವೆ. ಲೈಸೆನ್ಸು ಕೊಡುವ ಕ್ವಾಂಟಟಿಗಿಂತ ಹೆಚ್ಚು ಪ್ರಮಾಣದಲ್ಲಿ ಮಾರಿದರೆ, ಲೈಸೆನ್ಸು ಪಡೆಯದೆ ಮದ್ಯ ತಯಾರುಮಾಡಿದರೆ, ಎಕ್ಸೈಜ್ ಕೊಡದೆ ಇದ್ದರೆ, ಈ ಕಾನೂನು ಇಟ್ಟುಕೊಳ್ಳಬೇಕಾಗಿದೆ. ಆದರೆ ರಾಜ್ಯದಲ್ಲಿ ವಾಸ್ತವವಾದ ದೃಷ್ಟಿಯಿಂದ ನೋಡುವುದಾದರೆ, ಈ ಕಾನೂನು ಕಾರ್ಯಗತವಾಗುವುದಕ್ಕೆ, ಪಾನ ನಿರೋಧ ಕಾರ್ಯಗತಮಾಡುವುದಕ್ಕೆ ಎಂತಹ ಕೆಟ್ಟ ಸನ್ನಿವೇಶ, ವಾತಾವರಣ ಇದೆ ಅನ್ನುವುದನ್ನು ಪ್ರಸ್ತಾಪ ಮಾಡುವಾಗ, ಈ ಮಾತು ಹೇಳಬೇಕಾಗಿದೆ. ಇದರಲ್ಲಿ ಸರಕಾರದವರು ನಾನು ಪಾನ ನಿರೋಧದ ವಿರುದ್ಧ ಹೇಳುತ್ತಾ ಇದ್ದೇನೆ ಅಂತ ತಪ್ಪು ತಿಳಿದುಕೊಳ್ಳಬಾರದು. ವಾಸ್ತವವಾಗಿ ಇವತ್ತು ಈ ನೀತಿಯಿಂದಾಗಿ ಎಷ್ಟು ಅನೀತಿ ಉಂಟಾಗಿದೆ, ಜನರ ಆರೋಗ್ಯ ಎಷ್ಟು ಕೆಡುತಾ ಇದೆ, ಇದಕ್ಕೆ ಸಂಬಂಧಪಟ್ಟ ಸಿಬ್ಬಂದಿಗಳ ನೀತಿ ಏನಾಗಿದೆ, ಮತ್ತು ಕಳ್ಳವ್ಯಾಪಾರ ಎಷ್ಟು ಸಾರೋದ್ಧಾರವಾಗಿ ನಡೆಯುವುದಕ್ಕೆ, ಕೆಲವರು ಲಾಭ ಮಾಡಿಕೊಳ್ಳುವುದಕ್ಕ ಎಷ್ಟು ಅನುಕೂಲವಾಗಿದೆ ಎಂಬುದನ್ನು ಸರಕಾರದವರು ಈ ಸಂದರ್ಭದಲ್ಲಿಯಾದರೂ ಗಮನಿಸಬೇಕು.

ಆದುದರಿಂದ ಮಾನ್ಯ ಸರ್ಕಾರದವರಲ್ಲಿ ಕೇಳಿಕೊಳ್ಳುವುದು ಇಷ್ಟೆ; ಇಂಥ ಒಂದು ಡೋಲಾಯಮಾನ ಪರಿಸ್ಥಿತಿ ಅಥವಾ ಕೆಟ್ಟ ಪರಿಸ್ಥಿತಿ ಏನು ಈ ಸಂಬಂಧದಲ್ಲಿ ಇದೆ ಅದನ್ನು ಮೊದಲು ಪರಿಹಾರ ಮಾಡುವುದಕ್ಕೆ ಏನಾದರೂ ಕ್ರಮಗಳನ್ನು ತೆಗೆದುಕೊಳ್ಳಬೇಕು, ಈ ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ನಂತರದಲ್ಲಿ ಈ ಕಾನೂನಿಗೆ ಅರ್ಥ ಬರುತ್ತದೆ, ಇಂಥ ನಿಯಂತ್ರಣ ಮಾಡುವುದಕ್ಕೆ ನಮಗೆ ಅವಕಾಶ ದೊರೆಯುತ್ತದೆ ಎನ್ನುವ ವಿಷಯವನ್ನು ನಾನು ಈ ಸಂದರ್ಭದಲ್ಲಿ ಹೇಳಲಿಚ್ಛಿಸುತ್ತೇನೆ ಸ್ವಾಮಿ.

ಇನ್ನು ನಮಗೆ ನೀತಿಯ ಪ್ರಶ್ನೆ ಬರುತ್ತದೆ. ಯಾವುದೋ ಕಾರಣಕ್ಕಾಗಿ ಕೆಲವು ತಪ್ಪುಗಳನ್ನು ಮಾಡುತ್ತಾರೆ. ಮಹಾತ್ಮ ಗಾಂಧಿಯವರು ಹೇಳಿದರು: ಮದ್ಯಪಾನ ಮಾಡಬಾರದು, ಮದ್ಯವನ್ನು ಮಾರಾಟ ಮಾಡಿ ಬಂದ ಹಣದಲ್ಲಿ ಶಾಲೆ ಕಟ್ಟಿಸುವುದು ಇವೆಲ್ಲ ಕೂಡದು, ಇದನ್ನು ನಾವು ಕೈ ಬಿಡಬೇಕಾಗುತ್ತದೆ ಎಂದು. ನಿಜವಾಗಿ, ತಾತ್ವಿಕವಾಗಿ ಅದು ಬಹಳ ಒಳ್ಳೆಯದು, ಮತ್ತು ಅದರಂತೆ ನಾವು ಪ್ರಯತ್ನ ಮಾಡಿದ್ದೇವೆ. ಆದರೆ ವಾಸ್ತವಿಕ ಪರಿಸ್ಥಿತಿ—ಈಗಾಗಲೇ ಮಾನ್ಯ ಸಚಿವರ ಗಮನಕ್ಕೆ ಬಂದಿರಬಹುದು. ಶ್ರೀಮಾನ್ ಟಿ. ಸುಬ್ರಹ್ಮಣ್ಯ ಅವರು ಬಹಿರಂಗವಾಗಿ ಒಂದು ಕಡೆ ಹೇಳುತ್ತಾರೆ, ಏನು ಎಂದರೆ ಚುನಾವಣೆಯ ಕಾಲದಲ್ಲಿ ನನಗೆ ಗೊತ್ತಿದೆ, ಕಾಂಗ್ರೆಸ್ಸಿನವರು ತುರು

ವೇಕೆರೆಗೆ ತಮ್ಮ ವಾಹನಗಳಲ್ಲಿ ಸಾರಾಯಿಯನ್ನು ಸಾಗಿಸುತ್ತಾರೆ ಎಂದು. ಇದನ್ನು ರಾಜಕೀಯವಾಗಿ ಪ್ರಚಾರ ಮಾಡುವುದಕ್ಕಾಗಲೀ ಅಥವಾ ಯಾರನ್ನಾದರೂ ಅವಹೇಳನ ಮಾಡುವುದಕ್ಕಾಗಲೀ ಈ ಮಾತನ್ನು ಉದಹರಿಸುತ್ತಿಲ್ಲ. ಒಬ್ಬ 40 ವರ್ಷ ಕಾಂಗ್ರೆಸ್ಸಿನಲ್ಲಿದ್ದವರು, ವಯಸ್ಸಾದವರು, ನುರಿತವರು, ಗಾಂಧೀಜಿಯ ಧ್ಯೇಯಗಳನ್ನು ಅರಿತವರು ಸರ್ಕಾರದಲ್ಲಿದ್ದವರು, ಸರ್ಕಾರದ ಪಕ್ಷದಲ್ಲಿರುವವರು ಅನುಭವಿಗಳು ಎಲ್ಲ ಆಗಿರುವಾಗ ಅಂಥವರು—ಪಕ್ಷದ ಒಳಗಡೆ ಇರತಕ್ಕ ಭೇದಗಳು ಅಥವಾ ಜಗಳಗಳು ನಮಗೆ ಅಪ್ರಕೃತ. ಅವರು ಈ ಮಾತನ್ನು ಹೇಳುತ್ತಾರೆ ಎಂದರೆ ಈ ಸಭೆ ಮತ್ತು ನಾವು ಮಾತ್ರವಲ್ಲ, ದೇಶ ಕೂಡ ವಿಚಾರ ಮಾಡಬೇಕು. ಇದು ಎಷ್ಟರಮಟ್ಟಿಗೆ ನಾವು ನೀತಿ ಬಿಟ್ಟು ಹೋಗುವಂಥ ಒಂದು ಪರಿಸ್ಥಿತಿಯನ್ನು ತಂದುಕೊಂಡಿದ್ದೇವೆ ಎಂದು ಸೂಚಿಸುತ್ತದೆ. ಪಾನ ನಿರೋಧ ನೀತಿ ಇಲ್ಲವೆ ಇದ್ದಿದ್ದರೆ ಹೀಗೆ ಹೆಂಡವನ್ನು ಕಟ್ಟುವುದು, ಅದನ್ನು ತೆಗೆದುಕೊಂಡು ಹೋಗುವುದು ದೊಡ್ಡ ತಕ್ಸೀರಿನ ದೃಷ್ಟಿಯಲ್ಲಿ, ಅನೀತಿಯ ದೃಷ್ಟಿಯಲ್ಲಿ ಕಂಡುಬರುತ್ತಿರಲಿಲ್ಲ ಎಂದು ನನಗನ್ನಿಸುತ್ತದೆ. ಬೇರೆ ದೇಶಗಳಲ್ಲಿ ಇಂಥವನ್ನು ಸಾಮಾನ್ಯ ದೃಷ್ಟಿಯಿಂದ ನೋಡುತ್ತಾರೆ. ಕಾಂಗ್ರೆಸ್ಸಿನವರು ಚುನಾವಣೆಯ ಸಂದರ್ಭದಲ್ಲಿ ಹೆಂಡವನ್ನು ಪ್ರೊಹಿಬಿಷನ್ ಇರುವ ಜಾಗಕ್ಕೆ ತೆಗೆದುಕೊಂಡು ಹೋಗಿ ಕೊಟ್ಟರೆ ಓಟು ತೆಗೆದುಕೊಳ್ಳುವುದಕ್ಕೆ ಎನ್ನುವ ಪ್ರಶ್ನೆ ಬಹಳ ನೈತಿಕವಾದ ಮತ್ತು ಕ್ಲಿಷ್ಟವಾದ ಪ್ರಶ್ನೆ. ಇದನ್ನು ವಿಚಾರ ಮಾಡಬೇಕಾಗುತ್ತದೆ. ಇದನ್ನು ನಾನು ಏಕೆ ಹೇಳುತ್ತೇನೆಂದರೆ ಈ ಕಾನೂನುಗಳನ್ನು ನಾವು ಕಡತಕ್ಕೆ ಏರಿಸುವುದು ಬಹಳ ಸುಲಭ. ನಮ್ಮ ಆಶಯಗಳನ್ನು ಈ ಪ್ರಕರಣದ ಮೂಲಕ ಇಲ್ಲಿ ವ್ಯಕ್ತಪಡಿಸುತ್ತೇವೆ. ವಾಸ್ತವ ಪರಿಸ್ಥಿತಿ ತದ್ವಿರುದ್ಧವಾಗಿರುವಾಗ ಇದು ತಾನಾಗಿಯೇ ನಿರ್ಜೀವವಾಗುತ್ತದೆ ಅಥವಾ ಆ ಪ್ರಕರಣ ಸತ್ತು ಹೋಗುತ್ತದೆ. ಅವು ಏನು ಕೆಲಸಗಳನ್ನೂ ಮಾಡುವುದಕ್ಕೆ ಬರುವುದಿಲ್ಲ, ಅವುಗಳಿಗೆ ಶಕ್ತಿ ಉಳಿಯುವುದಿಲ್ಲ. ಇಂಥ ಒಂದು ವಿಪರ್ಯಾಸ ಪರಿಸ್ಥಿತಿ ಮದ್ಯಕ್ಕೆ ಸಂಬಂಧಪಟ್ಟ ಹಾಗೆ ನಮ್ಮ ಮುಂದೆ ಇದೆ. ಇದರಲ್ಲಿ ವಾಸ್ತವಿಕ ದೃಷ್ಟಿ ನಮಗೆ ಬರಬೇಕು, ವೈಜ್ಞಾನಿಕ ದೃಷ್ಟಿ ಬರಬೇಕು. ಮಾನವನಿಗೆ ಯಾವತ್ತೂ ಆತ್ಮಹತ್ಯೆ ಮಾಡಿಕೊಳ್ಳುವಾಗ ವಿನಾ ತನ್ನ ಕೈಯಿಂದ ವಿಷ ಕುಡಿಯಬೇಕು ಎಂದು ಅನ್ನಿಸುವುದಿಲ್ಲ. ಆದರೆ ಅವನಿಗೆ ಏನಾದರೂ ಮತ್ತು ಬರತಕ್ಕ ಸೋಮರಸವನ್ನೋ ಸುರೆಯನ್ನೋ ಮದ್ಯವನ್ನೊ ಅಥವಾ ಮಲಗುವಾಗ ನಿದ್ರೆ ಬರುವಂಥ ಗುಳಿಗೆಗಳನ್ನೋ ಅಥವಾ ಇನ್ನು ಯಾವುದನ್ನೋ ಸೇವನೆ ಮಾಡುತ್ತಾನೆ. ಅದನು ತೊಡೆದು ಹಾಕುವುದಕ್ಕೆ ಸಾಧ್ಯವಾಗಲಾರದು. ಈ ದೃಷ್ಟಿ ಕೋನದಿಂದ ನಾವು ನೋಡುವುದಾದರೆ ಇವತ್ತು ನಾವು ಏನು ಮಾದಕ ವಸ್ತುಗಳ ವಿಷಯದಲ್ಲಿ ಒಂದು ಅಭಿಪ್ರಾಯವನ್ನು ಹೊಂದಿದ್ದೇವೆಯೋ ಆದು ಸಮಂಜಸವಾದ ಅಭಿಪ್ರಾಯವಲ್ಲ, ಅದು ಕಾರ್ಯಗತ ಮಾಡತಕ್ಕ ಅಭಿಪ್ರಾಯವಲ್ಲ ಎನ್ನುವುದು ನಮಗೆ ತಿಳಿಯುತ್ತದೆ. ಇದರಿಂದಾಗಿ ಇವತ್ತು ಎಲ್ಲಿ ನೋಡಿದರೂ ನಮ್ಮ ಮಾನ್ಯ ಗೋಪಾಲ ಸಾಲೆನ್ನ ಅವರು ಕೊನೆಯಲ್ಲಿ ಪ್ರಾರ್ಥನೆ ಮಾಡಿಕೊಂಡರ ಇದು ಒಂದು ಗುಡಿ ಕೈಗಾರಿಕೆಯಾಗಿ ಬರುವಂತೆಮಾಡಿ ಎಂದು. ಆ ರೀತಿಯ ಪ್ರಾರ್ಥನೆ ಮಾಡಿಕೊಳ್ಳುವುದು ಬೇಕಾಗಿಲ್ಲ, ಏಕೆಂದರೆ ಈಗಾಗಲೇ ಇದು ಗುಡಿ ಕೈಗಾರಿಕೆಯಾಗಿದೆ. ಗುಡಿ ಗುಡಿಯಲ್ಲಿಯೂ ಈ ಭಟ್ಟಿಯ ಸಣ್ಣ ಯಂತ್ರಗಳು ಬಹಳ ಕಡೆ ನಮಗೆ ನೋಡುವುದಕ್ಕೆ ಸಿಕ್ಕುತ್ತವೆ. ಶರಾವತಿಯಂಥ ಭಾರಿ ಪ್ರಮಾಣದ ಕೆಲಸಗಳು ನಡೆಯುವ ಕಡೆ ದೊಡ್ಡ ಪ್ರಮಾಣದ ಭಟ್ಟಿಗಳನ್ನು ನೋಡಬಹುದು. ಸಣ್ಣ ಸಣ್ಣ ಊರುಗಳಲ್ಲಿ ಸಣ್ಣ ಸಣ್ಣ ಭಟ್ಟಿಗಳು, ಒಂದೆರಡು ಮಣ ಬೆಲ್ಲವನ್ನು ಕೊಂಡು ಮಾಡುವುದು ಇವೆ. ಇದು ಗುಡಿ ಕೈಗಾರಿಕೆಯಾಗಿದೆ. ಇಂಥದ್ದು ಸಿಕ್ಕಿಬಿಟ್ಟರೆ, ಬೆಲ್ಲದ ಪಾತ್ರೆ ಸಿಕ್ಕಿದರೆ, ಡಿಸ್ಟಿಲರಿ ಸಿಕ್ಕಿದರೆ, ಮದ್ಯವನ್ನು ಸಾಗಣೆ ಮಾಡುವುದು ಸಿಕ್ಕಿದರೆ ಒಂದು ಸಾವಿರ ರೂಪಾಯಿವರೆಗೆ ದಂಡ ಹಾಕಬಹುದು ಎಂದು ಹೇಳುತ್ತಾರೆ.

(MR. SPEAKER in the Chair)

ಇವತ್ತು ಎಷ್ಟರಮಟ್ಟಿಗೆ ಒಂದ ಉದ್ಯಮವಾಗಿ ಈ ಸಾರಾಯಿಗಳನ್ನು ಉತ್ಪತ್ತಿ ಮಾಡತಕ್ಕದ್ದು ನಮ್ಮಲ್ಲಿ ಬೆಳೆಯುತ್ತಿದೆ ಎಂದರೆ ಹಳ್ಳಿಗಳಲ್ಲಿ ನಾನು ನೋಡಿದ್ದೇನೆ, ಕೃಷಿಯಲ್ಲಾಗಲೀ ಕೈಗಾರಿಕೆಯಲ್ಲಾಗಲೀ, ವ್ಯಾಪಾರದಲ್ಲಾಗಲೀ ಅಥವಾ ಬೇರೆ ಯಾವ ಉತ್ಪಾದನೆಯ ಕಸಬಿನಲ್ಲಾಗಲೀ ಆಸಕ್ತಿ ಇಲ್ಲದ ಮಟ್ಟಿಗೆ ಕೆಲವು ಹಳ್ಳಿಗಳಲ್ಲಿ ನಿಶ್ಚಿಂತೆಯಾಗಿ ಕುಳಿತುಕೊಂಡಿರುತ್ತಾರೆ. ಅವರು ಕಳ್ಳಭಟ್ಟಿ ಕಸಬನ್ನು ಮಾಡಿಕೊಂಡು ಹತ್ತಿರದ ಒಂದು ಪಟ್ಟಣಕ್ಕೆ ಮದ್ಯವನ್ನು ಸರಬರಾಯಿ ಮಾಡಿಕೊಂಡು ಜೀವನೋಪಾಯ ಮಾಡಿಕೊಂಡು ಹೋಗುವ ಸ್ಥಿತಿಗೆ ಬಂದಿದ್ದಾರೆ. ಈ ಸಾರಾಯಿಯನ್ನು ಕುಡಿಯುವವರಿಗೆ ಬರುವ ರೋಗಗಳು, ಅವರ ಸ್ಥಿತಿಗತಿಗಳು ಇವನ್ನು ಹೇಳಬೇಕಾಗಿಲ್ಲ. ಕೆಲವು ಡಾಕ್ಟರುಗಳು ಹೇಳುತ್ತಾರೆ ಭಟ್ಟಿ ಸಾರಾಯಿಯನ್ನು ಪ್ರತಿದಿನ ಕುಡಿದು ಕುಡಿದು—ಅದಕ್ಕೆ ಮೈಲುತುತ್ತನ್ನು ಹಾಕಿ ಮಾಡಿರುತ್ತಾರೆ—ಅವನ ಕರುಳೆಲ್ಲ ತೂತುಬಿದ್ದು ಹೋಗಿ, ಆಪರೇಷನ್

(ಶ್ರೀ ಎಸ್. ಗೋಪಾಲಗೌಡ)

ಕೂಡ ಮಾಡುವುದಕ್ಕಾಗದ ಸ್ಥಿತಿಯಲ್ಲಿರುತ್ತದೆ ಎಂದು. ಈ ರೀತಿಯಾಗಿ ಸತ್ತವರು ಎಷ್ಟೋ ಜನ. ಇಷ್ಟು ಕ್ರೂರ ಪರಿಸ್ಥಿತಿಗೆ ನಾವು ಈ ಒಂದು ನೀತಿಯ ಮೂಲಕ ದೇಶದ ಜನತೆಯನ್ನು ಈಡು ಮಾಡಿ ಕುಳಿತಿದ್ದೇವೆ ಎಂದು ನನಗನ್ನಿಸುತ್ತದೆ. ಹೀಗಿರುವಾಗ ತಾವು ಧೈರ್ಯ ಮಾಡಬೇಕು. ನಾನು ಹಿಂದೆ ಕೂಡ ಯಾವುದೋ ಒಂದು ಸಂದರ್ಭದಲ್ಲಿ ಹೇಳಿದೆ—ಈ ಮಸೂದೆಯ ಸಂದರ್ಭದಲ್ಲಲ್ಲ—ಅವಗುಣವಾದ ನೀತಿ ಎನ್ನಿಸಿಕೊಳ್ಳಿ, ಒಂದು ಸ್ಪಷ್ಟವಾದ ಅಭಿಪ್ರಾಯ ಮತ್ತು ದೃಷ್ಟಿಕೋನ ಈ ವಿಷಯದಲ್ಲಿರಲಿ ....

ಶ್ರೀ ಟಿ. ಎನ್. ಮಾದಪ್ಪ ಗೌಡ (ನಾಗಮಂಗಲ).—ಒಣ ಪ್ರತಿಷ್ಠೆ.

ಶ್ರೀ ಎಸ್. ಗೋಪಾಲ ಗೌಡ.—ಒಣ ಪ್ರತಿಷ್ಠೆಯಿಂದ ಗುರಿ ಸಾಧನೆಯಾಗದೆ ಬಹಳ ನಷ್ಟವುಂಟಾಗುತ್ತದೆ. ಪ್ರತಿಷ್ಠೆ ಬೇಕು ಎಂದರೆ ಪ್ರತೀಕವಾಗಿ ಮಾಡಿ ದಿನ ನಿತ್ಯ ದೇಶವನ್ನು ಅನಾಹುತಕ್ಕೆ ಈಡು ಮಾಡುವುದು ವಿವೇಕದ, ವಿವೇಚನೆಯ ಲಕ್ಷಣವಲ್ಲ. ಇದು ನನ್ನ ಒಬ್ಬನ ಪ್ರಶ್ನೆಯಲ್ಲ ನಾನ ರಾತ್ರಿಯೆಲ್ಲ ತಲೆಕೆಳಗಾಗಿ ನಿಲ್ಲುತ್ತೇನೆಂದು ಸಾರ್ವತ್ರಿಕವಾಗಿ ಜನರೆಲ್ಲ ತಲೆಕೆಳಗಾಗಿ ಇರಬೇಕು ಎಂದು ಒಂದು ಕಾನೂನಿನ ಮೂಲಕ ಹೇಳತಕ್ಕದ್ದು ತುಂಬ ಅವಾಸ್ತವವಾಗುತ್ತದೆ.

4-00 P.M.

ಇದನ್ನು ತಾವು ವಿಚಾರಮಾಡಬೇಕು, ಈ ಕಾನೂನು ಸೆಲೆಕ್ಟ್ ಕಮಿಟಿಗೆ ಹೋಗುತ್ತದೆ ಎಂದು ಕೇಳಿದೆ. ಇದರಲ್ಲಿ ಕೆಲವು ಪೆನಾಲ್ಟಿ ಕ್ಲಾಜುಗಳು ಇವೆ ಅವು ಇನ್ನೂ ಹಳೇ ಕಾಲದ ರೀತಿಯಲ್ಲೇ ಇವೆ ಏಕೆಂದರೆ ಎಕ್ಸೈಜು ಎಂದರೆ ಹಿಂದೆ ಬ್ರಿಟಿಷರ ಕಾಲದಲ್ಲಿ ಹೆಂಡದ ಅಂಗಡಿ ಪಿಕೆಟ್ ಮಾಡಿದರೆ, ಈಚಲು ಮರ ಕಡಿಯುವುದಕ್ಕೆ ಹೋದರೆ ಅದು ಭಯಂಕರ ತಕ್ಸೀರು ಆಗುತ್ತಾ ಇತ್ತು. ಇವತ್ತು ಬೆಂಗಳೂರಿನ ಸುತ್ತಲೂ ಒಳ್ಳೆಯ ದ್ರಾಕ್ಷಿ ಬೆಳೆಯುತ್ತದೆ ಎಂದು ಶ್ರೀಮಾನ್ ಕೃಷ್ಣಪ್ಪನವರು ಆಗಾಗ್ಗೆ ಹೇಳುತ್ತಾ ಇರುತ್ತಾರೆ ಅದರಿಂದ ಅತ್ಯುತ್ತಮವಾದ ವೈನ್ ತಯಾರು ಮಾಡಹುದು ಎಂದು ಹೇಳುತ್ತಾರೆ. ಮಾವಿನ ಹಣ್ಣಿನಿಂದ ಒಳ್ಳೆಯ ವಿಸ್ಕಿ ತಯಾರು ಮಾಡಬಹುದು ಎಂದು ಈಚೆಗೆ ಯಾರೋ ಕಂಡು ಹಿಡಿದಿದ್ದಾರೆ. ಈ ರೀತಿ ಕೊಳೆತ ಹಣ್ಣಿನಿಂದ ಬೇಕಾದಷ್ಟು ಸಾರಾಯಿ ತಯಾರು ಮಾಡಬಹುದು. ಡೆಫಿನಿಷನ್ ಕ್ಲಾಜಿನಲ್ಲಿ ಕಂಟ್ರಿ ಲಿಕ್ಕರ್ ಎಂದು ಅನ್ನುವ ಒಂದು ಪದವನ್ನು ಉಪಯೋಗಿಸಿದ್ದೀರಿ. ಈ ಶಬ್ದ ತೆಗೆದು ಹಾಕುವುದು ಒಳ್ಳೆಯದು, ಸ್ವದೇಶೀ ಅಥವಾ ಭಾರತೀಯ ಸಾರಾಯಿ ಎಂದು ಬೇಕಾದರೆ ಹಾಕಿ ಕಂಟ್ರಿ ಎನ್ನುವ ಪದ ಸರಿಯಾದುದಲ್ಲ. ಇನ್ನೂ ಬೇಕಾದರೆ ಪರದೇಶೀ, ವಿದೇಶೀ ಎನ್ನುವ ಪದವನ್ನು ಬಳಸಿ ಅದರಲ್ಲಿ ಅಡ್ಡಿ ಏನೂ ಇಲ್ಲ. ಕಂಟ್ರಿ ಎನ್ನುವುದು ಸಮಂಜಸವಾಗಿಲ್ಲ. ನಮ್ಮ ಕಡೆ ಅಕ್ಕಿ ಭೋಜ ಅಂತ ಹೇಳಿ ಒಂದು ಪಾನೀಯವನ್ನು ತಯಾರು ಮಾಡುತ್ತೇವೆ, ನಾಗಾಲ್ಯಾಂಡ್‌ನಲ್ಲಿ ಅಕ್ಕಿ ಭೋಜ ಬಹಳವಾಗಿ ಮನೆ ಮಂದಿಯೆಲ್ಲಾ ಕುಡಿಯತಕ್ಕ ಪಾನೀಯ ಎಂದು ಕೇಳಿದ್ದೇನೆ. ಇದರಲ್ಲಿ ಅದರ ವಿಷಯದಲ್ಲಿ ಯಾವ ಒಂದು ಮಾತೂ ಇಲ್ಲ. ಮಲೆನಾಡಿನಲ್ಲಿ ಅಕ್ಕಿ ಭೋಜ ಇವತ್ತಿಗೂ ಇದೆ, ಜೊಳ್ಳು ಬತ್ತವನ್ನು ಸ್ವಲ್ಪಕಾಲ ಕೊಳೆ ಹಾಕಿ ಬೇಯಿಸಿದರೆ ಅದು ಒಂದು ಪಾನೀಯವಾಗುತ್ತದೆ ಮೊದಲು ಸಿಹಿಯಾಗಿರುತ್ತದೆ ಆಮೇಲೆ ಹುಳಿಯಾಗುತ್ತದೆ. ಅದನ್ನು ಇದರಲ್ಲಿ ಬಿಟ್ಟಿದ್ದಾರೆ ಅದಕ್ಕೆ ಮಾಫಿ ಮಾಡಿದ್ದಾರೆಯೋ ಏನೋ ಗೊತ್ತಿಲ್ಲ. ಅಕ್ಕಿಭೋಜ ಮಾಡಿಕೊಂಡು ಕುಡಿಯಬಹುದು ಎಂದು ಅರ್ಥವಾಗುತ್ತದೆ.

ಇದರಲ್ಲಿ ಟಾಡಿಗೆ ವಿನಾಯಿತಿ ಕೊಟ್ಟಿದ್ದೀರಿ. ಇದರಲ್ಲಿ ಆಹಾರದ ಅಂಶ ಇರುತ್ತದೆ ಎಂದು ಶ್ರೀಮಾನ್ ಕೃಷ್ಣಶೆಟ್ಟಿಯವರು ಹೇಳುತ್ತಾ ಇದ್ದರು, ನೇರವಾಗಿ ಪ್ರಕೃತಿಯಿಂದ ದೊರೆಯುತಕ್ಕ ಇದನ್ನು ಬಹಳವಾಗಿ ಸೇವನೆ ಮಾಡುವುದಕ್ಕೆ ಬಡವರಿಗೆ ಅವಕಾಶವಿರಬೇಕೆಂದು ನನಗೆ ಅನಿಸುತ್ತದೆ. ಟಾಡಿಯನ್ನು ತೆಂಗಿನ ಮರ, ಈಚಲು ಮರ, ಭಗಿನಿ ಮರದಿಂದ ಇಳಿಸುತ್ತಾರೆ. ಈಗ ಇರತಕ್ಕ ಮರಗಳನ್ನು ಉಪಯೋಗಿಸಿಕೊಂಡು ಒಳ್ಳೆಯ ರೀತಿಯಲ್ಲಿ ಹೆಂಡವನ್ನು ತಯಾರು ಮಾಡಿ ಸೇವನೆ ಮಾಡುವುದಕ್ಕೆ ಅವಕಾಶಕೊಟ್ಟರೆ ಬಹುಶಃ ಕುಡಿಯುವವರು ಯಾರಿದ್ದಾರೆ ಮತ್ತು ಅಂಗಾಂಗಗಳ ಕೊರತೆಯಾರಿಗೆ ಇರುತ್ತದೆ ಅಂತಹವರಿಗೆ ಸ್ವಲ್ಪ ಮಟ್ಟಿಗೆ ಆಹಾರದ ರೂಪದಲ್ಲೂ ಕೂಡ ಅನುಕೂಲವಾಗಬಹುದು ಎಂದು ನನಗೆ ಅನಿಸುತ್ತದೆ.

ಕ್ಲಾಜು 14, 15, 16 ಇವುಗಳನ್ನು ಸರ್ಕಾರದವರು ಹೇಗೆ ನಡೆಸಿಕೊಂಡು ಹೋಗಬೇಕೆಂದು ಇದ್ದಾರೆ ಎನ್ನುವುದು ಗೊತ್ತಾಗಲಿಲ್ಲ. ಈಗ ಕೆಲವುಕಡೆ ಪಾನನಿರೋಧ ಇರುವ ಕಡೆ ಹೆಂಡ ಇಳಿಸುವುದಕ್ಕೆ ಅವಕಾಶವನ್ನು ಕೊಟ್ಟಿದ್ದೀರಿ, ಶ್ರೀಮಾನ್ ಲಕ್ಷ್ಮೀಪತಿಯವರು ಹೇಳುತ್ತಾ ಇದ್ದರು ಅವರ ಊರಿನಲ್ಲಿ ಯಾವನೋ ಒಬ್ಬ ಹೆಂಡದ ಲಾರಿ ಬಂತು ಅದರಲ್ಲಿ ಹೆಂಡ ಸೋರುತ್ತಾ ಇತ್ತು ಒಂದು ಲೋಟ ಹಿಡಿದುಕೊಂಡು ಅದರ ಕೆಳಗೆ ನಿಂತುಕೊಂಡ, ಇಂತಹ ಅಸಂಗತ ಸ್ಥಿತಿ ಉಂಟಾಗುತ್ತದೆ.

ಇದು ಒಂದು ಆಕರ್ಷಣೀಯವಾದ ವಸ್ತು ಆದ್ದರಿಂದ ರಾಜ್ಯದಲ್ಲೆಲ್ಲಾ ಇದನ್ನು ಮಾರಾಟ ಮಾಡುವುದಕ್ಕೆ ವ್ಯವಸ್ಥೆ ಮಾಡುವುದು ಒಳ್ಳೆಯದು ಎಂದು ನನಗೆ ಅನಿಸುತ್ತದೆ. ಹಿಂದೆ ಅನೇಕ ಸಲ ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಆಶ್ವಾಸನೆ ಕೊಟ್ಟಿದ್ದರು ಮಲೆನಾಡಿನ ಕಡೆ ಕಳ್ಳು, ನೀರಾ ಇವಕ್ಕೆ ಅವಕಾಶ ಕೊಡುತ್ತೇವೆ ಎಂದು ಅದು ಬರಲೇ ಇಲ್ಲ ಬಹುಶಃ ಜನ ಆ ವಿಷಯದಲ್ಲಿ ವಿಶ್ವಾಸ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ ಎಂದು ಕಾಣುತ್ತದೆ, ಅಂತೂ ಅವರಿಗೆ ಕಳ್ಳು ಸಿಕ್ಕಲಿಲ್ಲ ಎಂದು ಬೇಸರ. ಈ ಟಾಡಿಯನ್ನು ರಾಜ್ಯದ ಎಲ್ಲಾ ಕಡೆಗಳಲ್ಲೂ, ಎಂದರೆ ಎಲ್ಲಿ ಈ ಹೆಂಡ ಇಳಿಸತಕ್ಕ ಮರಗಳಿವೆಯೋ ಅಲ್ಲಿ ಮತ್ತು ಇದನ್ನು ಇಳಿಸತಕ್ಕ ಕಡೆಗಳಲ್ಲಿ ಇದನ್ನು ಮಾರಾಟ ಮಾಡಲು ಒಂದು ಸುವ್ಯವಸ್ಥಿತವಾದ ಏರ್ಪಾಡನ್ನು ಮಾಡುವುದಕ್ಕೆ, ಸರ್ಕಾರದವರಿಗೂ ಈ ಉದ್ದೇಶವಿರುವಂತೆ ಕಾಣುತ್ತಿದೆ, ಅಲ್ಲದೆ ಈ ಇಲ್ಲಿಸಿಟ್ ಲಿಕ್ಕರನ್ನು ಕುಡಿದು ಜನರು ತಮ್ಮ ಆರೋಗ್ಯವನ್ನು ಕಳೆದುಕೊಳ್ಳುತ್ತಿದ್ದಾರೆ. ಆ ಅಪಾಯವನ್ನೂ ಕೂಡ ತಡೆಗಟ್ಟಿದಂತೆ ಆಗುತ್ತದೆ. ಇದರಿಂದ ಈ ದಿವಸ ಬಹಳ ಜನರ ಜೀವನ ಹಾಳಾಗುತ್ತಿದೆ. ಈ ಎಲ್ಲಾ ದೃಷ್ಟಿಗಳಿಂದ ಈ ವಿಚಾರಕ್ಕೆ ಸರ್ಕಾರದವರು ಗಮನಕೊಟ್ಟು ಇದನ್ನು ಒಳ್ಳೇ ರೀತಿಯಲ್ಲಿ ಮಾರಾಟ ಮಾಡಲು ವ್ಯವಸ್ಥೆ ಮಾಡಿದರೆ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ. ಇದರಿಂದ ಪಾನ ನಿರೋಧದ ಕಾನೂನಿಗೂ ಕೂಡ ಯಾವ ವಿರೋಧವೂ ಉಂಟಾಗುವುದಿಲ್ಲ.

ಇನ್ನು 6 ತಿಂಗಳ ಸಜಾ ಮತ್ತು ಒಂದು ಸಾವಿರ ರೂಪಾಯಿಗಳ ದಂಡಾ ಈ ಶಿಕ್ಷೆ ಕೊಡತಕ್ಕ ವಿಚಾರ ಸರ್ಕಾರದವರ ದಕ್ಷತೆಗೆ ಸೇರಿದ ವಿಚಾರ. ಈ ಮಸೂದೆಯನ್ನು ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಮರ್ಶೆಮಾಡಿ ಈ ಸಭೆಯ ಅನುಮೋದನೆಗೆ ಸರಿ ಹೊಂದುವಂತೆ ಕಳುಹಿಸಿಕೊಡುತ್ತಾರೆಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅಧ್ಯಕ್ಷರೇ, ನಾವೀಗ ಈಚಲಮರದಮ್ಮನಿಗೆ ಒಂದು ಕಾನೂನನ್ನು ಮಾಡುವುದಕ್ಕೆ ಹೊರಟಿದ್ದೇವೆ. ಈ ಈಚಲಮರದಮ್ಮ—''ಕುಂಟು ಕುದುರೆಯ ಮೇಲೆ ಕುಣಿಯುತ್ತಾ ಬರುತಾಳೇ ಈಚಾಲ ಮರದಮ್ಮಾ, ಅಂಥ ಈ ಈಚಾಲಮರದಮ್ಮ ಬಹಳ ಎತ್ತರವಾದ ಸ್ಥಳದಿಂದ ಮೆರವಣಿಗೆಯಲ್ಲಿ ಬರುತ್ತಾಳೆ. ಈ ಈಚಲ ಮರದಮ್ಮನನ್ನು ಹೇಗೆ ಮೆರವಣಿಗೆಯಲ್ಲಿ ಕರತರಬೇಕು? ಏನು ಹೆಟ್ಟಿಗೆಯಲ್ಲೇ, ಸೀಸಾಯಿನಲ್ಲೇ, ಬುಟ್ಟಿಯಲ್ಲೇ, ಪೀಪಾಯಿನಲ್ಲೇ, ಅದೇನು ಸೀಸಾಯಿನಲ್ಲಿ ಬಾಯಿ ಮುಚ್ಚಿಯೋ ಅಥವಾ ಬಾಯಿತೆಗೆದೋ ಎಂಬುದನ್ನೆಲ್ಲಾ ರೂಪಿಸಲು, ಈ ಮಹಾ ಮಾಯೆಯ ಮೆರವಣಿಗೆಗಾಗಿ ಒಂದು ಕಾನೂನು ಈಗ ರಚಿತವಾಗುತ್ತಿದೆ. ನಮಗೆ ಸ್ವಾತಂತ್ರ ಬಂದನಂತರ ಮತ್ತು ಬಂದ ಮೇಲೆ ಹಾಗೂ ಬರುವುದಕ್ಕೆ ಮುನ್ನ ಈ ಪಾನನಿರೋಧದ ಬಗ್ಗೆ ಬಹಳವಾಗಿ ಚರ್ಚೆ ನಡೆಸಿ, ಚಳವಳಿಯನ್ನೂ ಮಾಡಿ ಈ ಈಚಲದಮರದಮ್ಮ ಎಲ್ಲಿದ್ದಾಳೋ ಯಾವ ಮರದಮೇಲೆ ಇದ್ದಾಳೋ ಅಲ್ಲೇ ಇರಲಿ ಎಂದು ಹೇಳಿ, ಊರು ಹೊರಗೆ ಹೋಗತಕ್ಕ ಮಾರಿ ಮನೆಹೊಕ್ಕು ಹೋಗುವುದು ಬೇಡ ಅಂತ ಕೈಬಿಟ್ಟಿದ್ದನ್ನು ಈಗ ಈ ಸರ್ಕಾರ ಆ ಊರು ಹೊರಗೆ ಹೋಗತಕ್ಕ ಮಾರಿಯನ್ನು ಊರಿಗೆ ಹೊಕ್ಕಿಸಿ ಈ ಅಮ್ಮ ಈ ಊರಲ್ಲಿ ಇರಲಿ ಆ ಊರಲ್ಲಿ ಬೇಡ, ಈ ಮನೆಯಲ್ಲಿ ಇರಲಿ, ಈ ಮನೆಯಲ್ಲಿ ಬೇಡ ಎಂದು ಹೇಳತಕ್ಕ ನೀತಿ ಯಾವುದು? ಈ ತತ್ವ ಯಾವುದು? ಇದನ್ನು ಪೂಜೆ ಮಾಡಿದರೆ ಜನಗಳಿಗೆ ಆಗತಕ್ಕ ಪ್ರಯೋಜನವೇನಾದರೂ ಏನು? ಜನಗಳಿಗೆ ಬರುವ ಫಲವೇನು? ಈ ಬಗ್ಗೆ ಸರ್ಕಾರದವರು ಒಂದು ಕಾನೂನು ಮಾಡಲು ಹೊರಟಿದ್ದಾರೆ. ಇದರ ಮೇಲೆ ಅಂಥ ಕ್ರೂರದೃಷ್ಟಿ ಇಟ್ಟ ಈ ಕಾಂಗ್ರೆಸ್ ಸರ್ಕಾರಕ್ಕೆ ಏಕಾಏಕೀ ಇಷ್ಟೊಂದು ಅಭಿಮಾನ ಈ ಈಚಲಮರದಮ್ಮನ ಮೇಲೆ ಏಕೆ ಬಂತೋ ನನಗೆ ತಿಳಿಯದಾಗಿದೆ. ಪಾನ ನಿರೋಧವು ರಾಷ್ಟ್ರಾದ್ಯಂತ ಪೂರಾರಿಗೆ ಬರಬೇಕು ಎನ್ನತಕ್ಕ ರಾಜ್ಯದಲ್ಲಿ ಈ ದಿವಸ ಲೈಸೆನ್ಸ್ ಪಡೆದು ಪಾನ ಮಾರಾಟ ಮಾಡಬೇಕೆಂಬ ಕಾನೂನಿನ ಅಗತ್ಯವೇನಿತ್ತು ಎಂದು ಕೇಳುತ್ತೇನೆ? ಜನಗಳು ಎಲ್ಲಿಯಾಗಲೀ ಹೆಂಡಾ ಕುಡಿಯಬಾರದು, ಗಾಂಜಾ ಸೇದಬಾರದು, ಸಾರಾಯಿ ಕುಡಿಯಬಾರದು. ಅಫೀಮನ್ನು ಉಪಯೋಗಿಸಬಾರದು ಎಂದು ಹೇಳತಕ್ಕ ಜನರು ಈ ದಿವಸ ಈ ಕಾನೂನನ್ನು ಏಕೆ ತರಬೇಕು? ಈ ದಿವಸ ಯಾವ ಅಗೋಚರವಾದ ದೇವರಿಗೆ ಕಾನೂನು ಬೇಕಾಗಿತ್ತು? ಯಾವ ಗೂಬೆ ಇದನ್ನು ಕುಡಿಯಬೇಕು ಎಂದು ಕೇಳಿತ್ತು? ಒಂದೇ ಬಾಯಿನಲ್ಲಿ ...

Mr. SPEAKER.—How does 'ಗೂಬೆ' come in here?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ವಾಮಿ, ಈ ಬಿಲ್ಲಿನಲ್ಲಿ ನನಗೆ ಕಾಣತಕ್ಕ ಒಂದು ಅತ್ಯಾಶ್ಚರ್ಯಕರವಾದ ವಿಚಾರವೇನೆಂದರೆ: ಮೈಸೂರು ರಾಜ್ಯದಲ್ಲಿ ಕೇವಲ ಮೂರು ಜಿಲ್ಲೆಗಳಿಗೇ ಒಂದು ಕಾನೂನನ್ನು ಮಾಡಿದ್ದಾರೆ. ಇಡೀ ರಾಜ್ಯದಲ್ಲಿ ಮೂರು ಜಿಲ್ಲೆಗಳಿಗೆ ಮಾತ್ರ ಒಂದು ಕಾನೂನು, ಇನ್ನುಳಿದ ಜಿಲ್ಲೆಗಳಿಗೆಲ್ಲಾ ಒಂದು ಕಾನೂನು? ಏಕೆ ಈ ಡಿಸ್ಕ್ರಿಮಿನೇಷನ್? ಬೆಂಗಳೂರು, ಗುಲ್ಬರ್ಗ ಮತ್ತು ರಾಯಚೂರು ಈ ಮೂರು ಜಿಲ್ಲೆಗಳಿಗೇ ಒಂದು ಕಾನೂನು, ರಾಜ್ಯದ ಇನ್ನುಳಿದ 16 ಜಿಲ್ಲೆ

(ಶ್ರೀ ಸಿ ಜೆ. ಮುಕ್ಕಣ್ಣಪ್ಪ)

ಗಳಿಗೆಲ್ಲಾ ಒಂದು ಕಾನೂನು. ತುಮಕೂರಿನಲ್ಲಿ ಕುಡಿತ ಇಲ್ಲ. ಹಾಸನದಲ್ಲಿ ಕುಡಿತ ಇಲ್ಲ. ಮೈಸೂರು ಜಿಲ್ಲೆಗೆ ಈ ಹೆಂಡ, ಸಾರಾಯಿ, ವಿಸ್ಕಿ, ಬ್ರ್ಯಾಂಡಿ, ರಮ್, ಜಿನ್ನು ಇತ್ಯಾದಿಗಳ್ಯಾವೂ ಬೇಡ ಎಂದು ಹೇಳತಕ್ಕ ಸರ್ಕಾರ ಈ ಮೂರು ಜಿಲ್ಲೆಗಳಿಗೇಕೆ ಇವುಗಳೆಲ್ಲಾ ಇರಬೇಕೆಂದು ಹೇಳಿದೆ ? ಇಂಥ ಡಿಸ್ಕ್ರಿಮಿನೇಟರಿ ಕಾನೂನನ್ನು ಏಕೆ ಮಾಡಲು ಹೊರಟಿದ್ದಾರೆ ? ಈ ಮೂರು ಜಿಲ್ಲೆಗಳವರ ಹಿತವನ್ನು ಸಾಧಿಸುವಂತೆ ಇನ್ನುಳಿದ ಜಿಲ್ಲೆಗಳ ಹಿತಸಾಧನೆ ಈ ಸರ್ಕಾರಕ್ಕೆ ಬೇಕಿಲ್ಲವೇನು ? ಹಾಗಾದರೆ ಈ ಮೂರು ಜಿಲ್ಲೆಗಳಲ್ಲಿರತಕ್ಕವರು ಮಾಡಿರತಕ್ಕ ಬಾಕಿಪುಣ್ಯ ಏನು ? ಬಾಕಿ ಜಿಲ್ಲೆಗಳಲ್ಲಿರ ತಕ್ಕವರು ಮಾಡಿರುವ ಪಾಪವೇನು ? ಇಂಥ ಡಿಸ್ಕ್ರಿಮಿನೇಟರಿ ಮಸೂದೆಗೆ ನಾವು ಒಪ್ಪಿಗೆಯನ್ನು ಕೊಡಲು ಸಾಧ್ಯವಿಲ್ಲ. ರಾಜ್ಯದಲ್ಲಿ ತಮಗೆ ಬೇಡವಾದ ಕಡೆ ಈ ಪಾನನಿರೋಧದ ಕಾನೂನನ್ನು ತಂದು ಅಲ್ಲಿರತಕ್ಕ ಜನಗಳಿಗೆ ನೀವು ಹೆಂಡ ಕುಡಿಯಬಾರದು, ಭಂಗಿ ಸೇದ ಬಾರದು, ಅಫೀಮನ್ನು ತಿನ್ನಬಾರದು, ಜಿನ್, ರಂ, ಸಾರಾಯಿಗಳನ್ನು ಕುಡಿಯಬಾರದು ಎಂದು ಹೇಳುತ್ತಾ ಇನ್ನು ಕೆಲವು ಜಿಲ್ಲೆಗಳಲ್ಲಿರತಕ್ಕವರಿಗೆ ನೀವು ಲೈಸೆನ್ಸ್ ಪಡೆದು ಈ ಹೆಂಡ, ಸಾರಾಯಿ, ರಂ, ಜಿನ್ನು, ಭಂಗೀ, ಅಫೀಮು ಇತ್ಯಾದಿಗಳನ್ನೆಲ್ಲಾ ಮಾರಾಟ ಮಾಡಬಹುದು, ಜನಗಳು ಅವು ಗಳನ್ನು ಸೇವಿಸಬಹುದು ಎಂದು ತಮಗೆ ಬೇಕಾದವರಿಗೆ ಈ ಒಂದು ಅನುಕೂಲ ಕಲ್ಪಿಸಲು ಒಂದು ಯೂನಿಫಾರಂ ಬಿಲ್ಲನ್ನು ತರಬೇಕಾಗಿದೆ ಎಂಬ ಸೋಗನ್ನು ಹಾಕಿಕೊಂಡು ಈ ಡಿಸ್ಕ್ರಿಮಿನೇಟರಿ ಮಸೂದೆಯನ್ನು ಪಾಸ್ ಮಾಡಿಸಲು ಹೊರಟಿದ್ದಾರೆ. ಇಂಥ ಬಿಲ್ಲನ್ನು ನಾವು ಸರ್ವಥಾ ಒಪ್ಪುವುದ ಕ್ಕಾಗುವುದಿಲ್ಲ. ಈ ಮಂತ್ರಿ ಮಂಡಲದಲ್ಲಿ ಇಷ್ಟು ಜನ ಬುದ್ಧಿವಂತರೂ, ತಿಳಿವಳಿಕೆಯುಳ್ಳವರೂ, ಧ್ಯೇಯ ಧೋರಣೆ ಉಳ್ಳವರೂ ಇದ್ದೂ ಕೂಡ ಇದನ್ನು ಸ್ವಲ್ಪವೂ ಆಲೋಚನೆ ಮಾಡದೆ ಶಾಸನ ಕಡತಕ್ಕೇರಿಸಲು ಹೊರಟಿರುವುದು ತುಂಬಾ ಶೋಚನೀಯ. ಶಾಸನದ ಕಡತಕ್ಕೆ ಸೇರಿಬೇಕೆಂದು ಇಂಥಹ ಹೊಸ ಕಾನೂನುಗಳನ್ನು ಮಾಡಿ ತರುತ್ತಿದ್ದೀರಿ. ಇದರಲ್ಲೇನು ನೀವು ಮಾಡಲು ಹೊರಟಿದ್ದೀರಿ ಎಂದರೆ ಎಕ್ಸೈಸು ಕಮಿಷನರು ಮತ್ತು ಅವರ ಸಹಾಯ ಕ್ಕಾಗಿ ಡೆಪ್ಯುಟೀ ಕಮಿಷನರು, ಅಸಿಸ್ಟೆಂಟು ಕಮಿಷನರುಗಳು ಹಾಗೂ ಎಕ್ಸೈಜು ಇನ್ಸ್‌ಪೆಕ್ಟರುಗಳು ಇವರುಗಳನ್ನು ನೇಮಕ ಮಾಡಿಕೊಂಡು ಇದರಿಂದ ಈ ಕಾನೂನನ್ನು ಜಾರಿಗೆ ತರಬೇಕು ಎನ್ನುವುದ ರಲ್ಲಿರುವ ಅರ್ಥವೇನು ? ಇವೊತ್ತು ಇರುವ ಸೆಟ್ ಆಪ್‌ನಲ್ಲಿ ಏನು ಮಾಡಿದ್ದೀರಿ ಎಂದರೆ ಈ ರಾಜ್ಯ ದಲ್ಲಿ ಪ್ರೊಹಿಬಿಷನ್ನನ್ನು ತೆಗೆದುಕೊಂಡು ಬಂದು ಅದನ್ನು ಪೋಲೀಸು ಶಾಖೆಯವರಿಗೆ ತಿಳಿಸಿ ಅವರ ಸಹಾಯವನ್ನು ಪಡೆದುಕೊಂಡು ಈ ಇಲಾಖೆಯವರು ಜಾರಿಗೆ ತರಬೇಕೆಂದು ಮಾಡಿದಿರಿ. ಸಾವಿ ರಾರು ಈಚಲು ಮರಗಳನ್ನು ಕಡಿಯುತ್ತಿದ್ದರೂ ಈ ಎಕ್ಸೈಜು ಇಲಾಖೆಯವರ ಏನು ಕಾರ್ಯಕ್ರಮ ತೆಗೆದುಕೊಳ್ಳದೇ ಇರುವುದನ್ನು ನೋಡಿ ತುಂಬಾ ವಿಷಾದವಾಗಿದೆ. ನಮ್ಮ ಭಾಗದಲ್ಲಿರುವ ಒಂದು ಕಡೆಯಲ್ಲಿ ಟೊಬ್ಯಾಕೋ ಫ್ಯಾಕ್ಟರಿಯನ್ನು ಮಾಡಬೇಕೆಂದು ಅಲ್ಲಿ ಬೆಳೆದಿದ್ದಂತಹ ಸುಮಾರು 2,000 ಹಸೀ ಈಚಲು ಮರಗಳನ್ನು ಒಂದೇ ರಾತ್ರಿಯಲ್ಲಿ ಕಡಿದು ಹಾಕಿದುದರ ಬಗ್ಗೆ ಈ ಇಲಾಖೆಯವರು ತೆಗೆದುಕೊಂಡ ಕಾರ್ಯಕ್ರಮವೇನು ?

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರಿಗೆ ಇದರ ಬಗ್ಗೆ ಗೊತ್ತಿರಬೇಕು. ಇಲ್ಲಿ ಕೇಸನ್ನು ಹಾಕಲು ಆರ್ಡರಾಗಿದೆ.

Mr. SPEAKER.—This Bill is to be referred to a Select Committee.

C. J. MUCKANNAPPA.—My appeal is that the Bill itself may be withdrawn.

ಅಲ್ಲದೆ ಈ ಬಿಲ್ಲನ್ನು ಸೆಲೆಕ್ಟು ಕಮಿಟಿಗೆ ಬೇರೆ ತೆಗೆದುಕೊಂಡು ಹೋಗಿ ಇದರ ರೂಪು ರೇಖೆ ಗಳನ್ನು ಮಾಡಿ ಯಾರು ಲೈಸನ್ಸು ಕೊಡಬೇಕು. ಯಾರು ಕೊಡಕೂಡದು ಎನ್ನುವಂತೆ ಮಾಡ ಬೇಕೆಂದು ಹೋಗುತ್ತಿದ್ದಾರೆ. ನನ್ನ ಅಭಿಪ್ರಾಯದಲ್ಲಿ ಇದನ್ನು ಇಂತಹ ಕಮಿಟಿಗೇನೂ ಕಳುಹಿಸುವ ಅಗತ್ಯವಿಲ್ಲ ಎಂದು ತೋರುತ್ತೆ. ಬೆಂಗಳೂರಿನಲ್ಲಿ ತಯಾರಾಗಿ ಬರುವ ಹೆಂಡವೂ ಬೇಡ ಮತ್ತು ಅದರ ಹತೋಟಿ ಮಾಡಲು ಗುಲ್ಬರ್ಗಾ ಹಾಗೂ ರಾಯಚೂರು ಭಾಗಗಳಲ್ಲಿ ತರುವುದೂ ಬೇಡ. ಇದನ್ನೆಲ್ಲಾ ತೆಗೆದುಹಾಕಿ ಯಾರಾದರೂ ಕುಡುಕರು ಇದಕ್ಕೆ ಲೈಸನ್ಸು ಕೊಡಿ ಎಂದು ಎಂದರೆ ಕೊಡಿ. ಇದಕ್ಕಾಗಿ ಕಾನೂನನ್ನು ಏಕೆ ಮಾಡುತ್ತೀರಿ ? ಅಲ್ಲದೆ ಇದರಲ್ಲಿ ಹೆಂಡದ ಬಗ್ಗೆ ವಿನಾಯಿತಿ ಇರಬೇಕೆಂದು ಏಕೆ ಮಾಡುತ್ತೀರಿ ? ಅಲ್ಲದೆ ಈಚಲ ಮರವನ್ನು ಕಡಿದವಗೆ ಕೇವಲ ಒಂದು ತರದ ಜುಲ್ಮಾನೆ ಎಂದು ಹಾಕಿ ಅದಕ್ಕೆ ತಕ್ಕಂತೆ ಸುಳ್ಳು ಸಾಕ್ಷಿಗಳನ್ನು ಒದಗಿಸಿದರೆ ಮತ್ತು ಅದರಂತೆ ಡಿಫೆಂಡು ಮಾಡಿದರೆ ನೀವು ಎಷ್ಟು ಜನರನ್ನು ಜೈಲಿಗೆ ಕಳುಹಿಸಿದಂತಾಯಿತು ? ಒಂದು ರಾತ್ರಿಯಲ್ಲಿ ಆರುಸಾವಿರದಷ್ಟು ಈಚಲ ಮರವನ್ನು ಹಸಿಯಾಗಿರುವುದನ್ನು ಕಡಿದುಬಿಟ್ಟಿದ್ದಾರೆ ಇಂದು ನಾನು ಈ

ಇಲಾಖೆಗೆ ಪತ್ರ ಬರೆದು ಇದಕ್ಕೆ ತಕ್ಕ ಪ್ರೊಟೆಕ್ಷನ್ನು ಕೊಡಿ ಎಂದು ಕೇಳಿದಾಗ ಅದಕ್ಕೇನೂ ಪ್ರೊಟೆಕ್ಷನ್ನನ್ನು ಕೊಡಲಿಲ್ಲ. ಇದಕ್ಕೇಕೆ ಪ್ರೊಟೆಕ್ಷನ್ನು ಕೊಡಬೇಕೆಂದು ಹೇಳಿದವರು ಇದರೊಳಗೆ ಹೆಂಡಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನೇಕೆ ಕೊಡುತ್ತಿದ್ದೀರಿ ಎಂದು ಕೇಳಬೇಕಾಗಿದೆ. ಅದಕ್ಕೋಸ್ಕರ ಈ ಕಾನೂನು ಬೇಡ ಎಂದು ಹೇಳುತ್ತಿದ್ದೇನೆ. ಕಾನೂನು ಪ್ರಕಾರ ಎಲ್ಲವನ್ನೂ ಮಾಡಿಕೊಳ್ಳಬೇಕಾಗಿದೆ ಎಂದು ತಾವು ಇಲ್ಲಿ ಅಪ್ಪಣೆ ಕೊಡಿಸಿದಿರಿ. ಕಾನೂನುಗಳಲ್ಲಿರುವಂತೆ ಎಲ್ಲಿಯಾದರೂ ಕೂಡ ತಮ್ಮ ಅಧಿಕಾರಿಗಳು ಎಲ್ಲಾ ಇಲಾಖೆಯಲ್ಲೂ ಸುಸೂತ್ರವಾಗಿ ನಡೆಸುತ್ತಿದ್ದರೆಯೇ ಎಂದು ನಾನು ಇಲ್ಲಿ ಕೇಳುತ್ತೇನೆ. ನೀವು ಹೇಳುತ್ತೀರಿ, ಗೋರಿಬಿದನೂರಿನಲ್ಲಿ ಹೆಂಡ ತಗೆದುಕೊಂಡು ಹೋಗಲಾಗುವುದಿಲ್ಲ, ಸಿರಾ ಮತ್ತು ತುಮಕೂರುಗಳಿಗೆ ತೆಗೆದುಕೊಂಡು ಹೋಗುವುದಕ್ಕೆ ಆಗುವುದಿಲ್ಲ, ಇವೆಲ್ಲಾ ಪಾನನಿರೋಧ ಜಾರಿಯಲ್ಲಿರುವ ಪ್ರದೇಶಗಳು ಎಂದು ಹೇಳುತ್ತಿದ್ದಾರೆ ಅದರೆ ಈ ಬೆಂಗಳೂರಿನಲ್ಲಿ ಒಂದು ದಿನಕ್ಕೆ ಸಾವಿರ ಎರಡು ಸಾವಿರದಷ್ಟು ರೂಪಾಯಿಗಳ ಬೆಲೆಯುಳ್ಳ ಹೆಂಡ ಹಾಗೂ ಸಾರಾಯಿ ಮಾರಾಟವಾಗುತ್ತಿದೆ. ಕಾನೂನೇನೋ ಮಾಡುತ್ತಾರೆ. ಆದರೆ ಇಲ್ಲೇ ಸುಮಾರು ಎರಡು ಮೂರು ಲಾರಿಗಳಷ್ಟು ಹೆಂಡ ದಿನ ಬೆಳಗಾದರೆ ಬರುತ್ತಿರುತ್ತದೆ. ಇದನ್ನು ವ್ಯವಹಾರ ಮಾಡುತ್ತಿರುವವರು ಶ್ರೀಮಂತರಾಗಿರುವುದರಿಂದ ಕಾನೂನು ಪ್ರಕಾರ ಲೈಸನ್ಸು ಪಡೆದುಕೊಂಡು ಈ ರೀತಿ ಹೆಂಡ ಮಾರುವುದು ಸರಿಯೇ ? ತಾವು ಈ ಬಿಲ್ಲಿನಲ್ಲಿರುವ ಸೆಕ್ಷನ್ನುಗಳು ಎಂದರೆ 14, 15 ಹಾಗೂ 16 ಮತ್ತು 17ನೇ ಸೆಕ್ಷನ್ನುಗಳಲ್ಲಿ ಮಾಡಿರುವುದು ಸರಿಯೇ ಎಂದು ನಾನು ಕೇಳುತ್ತೇನೆ. ಹೆಂಡದ ಆಸೆ ಇದ್ದರೆ ಈ ಪಾನ ನಿರೋಧ ನೀತಿಯನ್ನು ರದ್ದು ಮಾಡಿ ಮತ್ತು ಸ್ಕ್ರಾಪು ಮಾಡಬೇಡಿ. ಇಂತಹ ಪ್ರೊಹಿಬಿಷನ್ನನ್ನು ತರುವುದರಿಂದ ಈ ದೇಶಕ್ಕೆ ಒಳ್ಳೆಯದಾಗುವುದಿಲ್ಲ ಎಂದು ನಾನು ಇಲ್ಲಿ ವಿನಯದಿಂದ ಪ್ರಾರ್ಥನೆ ಮಾಡತ್ತೇನೆ.

ಹೆಂಡ, ಭಂಗಿ, ಫಾರಿನ್ ಲಿಕ್ಕರುಗಳು ಹಾಗೂ ಕಂಟ್ರಿ ಲಿಕ್ಕರುಗಳು ಇವುಗಳಿಗೆ ಲೈಸನ್ಸನ್ನು ತೆಗೆದುಕೊಳ್ಳಬೇಕು ಮತ್ತು ಅದರ ಕೆಳಗಡೆ ವ್ಯಾಪಾರ ಮಾಡಬೇಕು ಮತ್ತು ಅದರಿಂದ ಮಾರುವವರಿಗೆ ಸರಿಯಾದ ಲಾಭ ಬರಬೇಕು ಎಂದು ಮಾಡುತ್ತಾ ಲೈಸನ್ಸ್ ತೆಗೆದುಕೊಳ್ಳದೇ ಮಾರಾಟ ಮಾಡುವವರಿಗೆ ಶಿಕ್ಷೆಮಾಡಬೇಕು ಎಂದು ಇದಕ್ಕಾಗಿ ಎಕ್ಸೈಜು ಕಮಿಷನರು ಎನ್ನುವ ಅಧಿಕಾರಿಗಳನ್ನು ಸರಕಾರ ನೇಮಕ ಮಾಡಿದೆ. ಈ ಕಮಿಷನರವರು ಎಂದಾದರೂ ಹೊರಗಡೆ ಹೋಗಿ ಇನ್ಸ್‌ಪೆಕ್ಷನ್ನು ಮಾಡಿಕೊಂಡು ಬಂದಿದ್ದಾರೇನು ? ಎಲ್ಲಿ ಹೆಚ್ಚಾಗಿ ಕಳ್ಳಭಟ್ಟಿ ಸಾರಾಯಿಗಳ ವ್ಯವಹಾರ ನಡೆಯುತ್ತಿದೆ ಎನ್ನುವುದನ್ನೇನಾದರೂ ನೋಡಿದ್ದಾರೇನು ? ಅಲ್ಲದೆ ಈ ಎಕ್ಸೈಜು ಕಮಿಷನರುಗಳ ಆಫೀಸಿನಲ್ಲಿ ಇಂಟಲಿಜೆನ್ಸು ಬ್ಯೂರೋ ಎನ್ನುವ ಒಂದು ಶಾಖೆಯನ್ನು ಬೇರೆ ತೆಗೆದಿದ್ದಾರೆ. ಈ ಇಲಾಖೆಯವರು ಸರಕಾರ ಮಾಡುವ ಕಾನೂನನ್ನು ಸರಿಯಾಗಿ ಜಾರಿಗೆ ಕೊಡಬೇಕೆಂದಿದ್ದರೂ ಇವರೊಬ್ಬರೂ ಇಲ್ಲಿ ಶಾಸನವನ್ನು ಸರಿಯಾಗಿ ಪಾಲಿಸುತ್ತಿಲ್ಲ ಎನ್ನುವುದನ್ನೇನಾದರೂ ತನಿಖೆ ಮಾಡಿ ನೋಡಿದ್ದೀರಾ ? ಇದನ್ನು ತಾವು ಇಲ್ಲಿ ಸ್ವಲ್ಪ ವಿಚಾರ ಮಾಡಿದರೆ ನಿಮಗೆ ಅರ್ಥವಾಗುತ್ತದೆ. ನೀವು ಕಾನೂನನ್ನೇನೋ ಮಾಡುತ್ತೀರಿ. ಆದರೆ ಅದನ್ನು ನೀವು ಇಂಪ್ಲಿಮೆಂಟು ಮಾಡುತ್ತಿಲ್ಲ. ಇಂಪ್ಲಿಮೆಂಟು ಮಾಡುವ ಅಧಿಕಾರಿಗಳು ಎಷ್ಟರಮಟ್ಟಿಗೆ ಅನುಷ್ಠಾನಕ್ಕೆ ತರುತ್ತಿದ್ದಾರೆ. ಮತ್ತು ಇದರೊಳಗೆ ಏನು ಅನ್ಯಾಯಗಳಾಗುತ್ತಿವೆ. ಎನ್ನುವುದನ್ನೇನಾದರೂ ಪರಿಶೀಲನೆ ಮಾಡಿದ್ದಾರೆಯೇ ? ನಾನಾದರೂ ಕೂಡ ತಮಗೆ ಒಂದು ಅರ್ಜಿ ಕೊಟ್ಟು ಎಕ್ಸೈಜು ಶಾಖೆಯಲ್ಲಿ ಏನೇನೋ ಅನ್ಯಾಯಗಳು ಆಗುತ್ತಿವೆ ಎಂದು ಹೇಳಿದ್ದೆ ಮತ್ತು 63ನೇ ಬಡ್ಜೆಟ್ಟು ಅಧಿವೇಶನದಲ್ಲಿ ನಾನು ಭಾಷಣ ಮಾಡುವಾಗಲೂ ಇದರ ಬಗ್ಗೆ ಪ್ರಾರ್ಥನೆ ಮಾಡಿಕೊಂಡು ಇದನ್ನೆಲ್ಲಾ ಕೂಲಂಕಷವಾಗಿ ವಿಮರ್ಶೆ ಮಾಡಬೇಕೆಂದು ಹೇಳಿದ್ದರೂ ಕೂಡ ಇದುವರೆಗೆ ಅದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಂಡರು ಎನ್ನುವುದರ ಮೇಲೆ ನನಗೇನೂ ಇನ್ನು ತಿಳಿದು ಬಂದಿಲ್ಲ.

It relates to the duties and functions of a particular officer. If he fails to discharge his duty what is the punishment ?

MR. SPEAKER.—Which clause of the Bill that the Hon'ble Member is referring to ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅದಕ್ಕೋಸ್ಕರ ಇದನ್ನು ಹೇಳುತ್ತಿದ್ದೇನೆ. ತಾವು ಏನೇನು ಅವತಾರಗಳನ್ನು ಮಾಡಿ ಇಂತಹ ಕೆಲಸಗಳನ್ನು ಮಾಡುತ್ತೀರಿ ಎಂದು......

MR. SPEAKER.—The Hon'ble Member never referred to any office refusing to do his duty.

SRI C. J. MUCKANNAPPA.—Suppose he acts in excess of his authority ?

(SRI C. J. MUCKANNAPPA)

ಇನ್ನು ಕ್ಲಾಜು 49ರಲ್ಲಿ ಹೆನಾಲ್ಕು ಎಂದು ಇದರಲ್ಲೇಕೆ ಹೇಳುತ್ತೀರಿ. ನನ್ನ ಅನುಭವದಿಂದ ಹೇಳುವುದಾದರೆ ಕಾನೂನು ಪ್ರಕಾರ ಈಚಲು ಮರವನ್ನು ಅಪ್ಪಣೆ ಇಲ್ಲದೆ ಕಡಿದರೆ ಅಂತಹವರ ಮೇಲೆ ಕೇಸನ್ನು ಹಾಕುತ್ತಾರೆ. ಇದಕ್ಕಾಗಿ ಎಕ್ಸೈಜು ಕಮಿಷನರು ಹಾಗೂ ಡೆಪ್ಯುಟಿ ಕಮಿಷನರುಗಳೆಂದು ಮಾಡಿದ್ದೀರಿ. ಈ ಕಾನೂನು ಪ್ರಕಾರ ಲೈಸನ್ಸನ್ನು ಕೊಡುವಾಗ ಯಾವ ರೀತಿ ಇರಬೇಕೆಂದು ಪವರನ್ನು ಡೆಪ್ಯುಟಿ ಕಮಿಷನರವರಿಗೆ ಡೆಲಿಗೇಟು ಮಾಡಿದ್ದೀರಿ. ಇದಕ್ಕಾಗಿ ಹಣ ಹೇಗೆ ಕೊಡಬೇಕು ಎನ್ನುವುದಕ್ಕೂ ಇದರಲ್ಲಿ ವಿವರಗಳನ್ನು ಕೊಟ್ಟಿದ್ದಾರೆ. ಅದರಿಂದ ಡೆಪ್ಯುಟಿ ಕಮಿಷನರವರು ನೀವು ಕೊಟ್ಟಂತಹ ಅಧಿಕಾರವನ್ನು ಸರಿಯಾಗಿ ಮಾಡುತ್ತಿದ್ದಾರೆಯೇ ? ನಮ್ಮ ಭಾಗದಲ್ಲಿ 2,000 ಹಸೀ ಈಚಲ ಮರಗಳನ್ನು ಕಡಿದಿದ್ದಾರೆಂದು ನಾನು ಎಕ್ಸೈಜು ಕಮಿಷನರವರಿಗೆ ದೂರು ಕೊಟ್ಟ ಮೇಲೆ ಅವರು ಇಲಾಖೆಯ ಕೆಲವು ಸಿಬ್ಬಂದಿಯವರನ್ನು ಕಳುಹಿಸಿ ಅಲ್ಲಿರುವ ಆರ್ಟಿಕಲುಗಳನ್ನೆಲಾ ಸೀಜು ಮಾಡಿ ಅಲ್ಲಿ ಯಾರು ತಪ್ಪು ಮಾಡಿದ್ದರೋ ಅವರ ವಶದಲ್ಲೇ ಎಲ್ಲವನ್ನೂ ಬಿಟ್ಟು ಬಂದಿದ್ದಾರೆ. ಹೀಗೆ ಯಾರು ತಪ್ಪು ಮಾಡಿದ್ದಾರೋ ಅವರಲ್ಲೇ ಎಲ್ಲ ಮರಗಳನ್ನೂ ಶೇಖರಣೆ ಮಾಡಿದರೆ ಇದರಿಂದ ಸರ್ಕಾರದ ತೀರ್ಮಾನ ಏನು ಮಾಡಿದಂತಾಯಿತು ? ಇದಕ್ಕಾಗಿ ಸಾಕ್ಷಿ ಹೇಳುವವರು ಯಾರು ? ಅವರು ತಮ್ಮ ವಶದಲ್ಲಿಟ್ಟುಕೊಂಡಿದ್ದ ಮರಗಳನ್ನೆಲ್ಲಾ ಅವರ ಫ್ಯಾಕ್ಟರಿಗಾಗಿ ಉಪಯೋಗಿಸಿ ಈಗಾಗಲೇ ಸುಟ್ಟು ಬೂದಿ ಮಾಡಿದ್ದಾಗಿದೆ. ಈಗ ಡೆಪ್ಯುಟೀ ಕಮಿಷನರು ಇಲ್ಲಿರುವ ಅಧಿಕಾರಿಗಳ ಮೇಲೆ ಏನು ಕ್ರಮ ತೆಗೆದುಕೊಂಡ ಹಾಗಾಯಿತು ? ಕಾನೂನಿನಂತೆ ಅಧಿಕಾರವನ್ನು ಕೊಟ್ಟಿದ್ದರೂ ಅಧಿಕಾರಿಗಳು ಅದನ್ನು ಉಪಯೋಗಿಸದೇ ಹೋದರೆ ಅದರಿಂದ ಸರಕಾರಕ್ಕೆ ಗೌರವ ಏನು ಬಂದ ಹಾಗಾಯಿತು ?

4-30 P.M.

ರೆವಿನ್ಯು ಮಂತ್ರಿಗಳು ನನಗೆ ಒಂದು ಪ್ರಶ್ನೆಗೆ ಉತ್ತರ ಹೇಳುವಾಗ, ಇವತ್ತು ಎಕ್ಸೈಸ್ ಲ್ಯಾಂಡಿನಲ್ಲಿ unothorised cultivation ಇದೆ ಅಂತ ಹೇಳಿದರು. ಮಾನ್ಯ ನ್ಯಾಯಾಂಗ ಮಂತ್ರಿಗಳು ಮತ್ತು ರೆವಿನ್ಯು ಮಂತ್ರಿಗಳು ನನ್ನ ಜೊತೆಗೆ ಬರಲಿ, ಎಷ್ಟು ಸಹಸ್ರ ಮರಗಳನ್ನು ಕತ್ತರಿಸಿ ಹಾಕಿದ್ದಾರೆನ್ನುವುದನ್ನು ತೋರಿಸುತ್ತೇನೆ. ಸರಕಾರದ ಹೆದರಿಕೆ ಇಲ್ಲದೆ ಭೂಮಿಯನ್ನು ವ್ಯವಸಾಯ ಮಾಡುತ್ತಿರುವಾಗ, ತಾವು ಈ ಎಕ್ಸೈಸ್ ಆಕ್ಟ್ ಕೆಳಗೆ ನೇಮಕ ಮಾಡಿರುವ ಅಧಿಕಾರಿಗಳು ತೆಗೆದುಕೊಂಡಿರುವ ಉಗ್ರ ಕ್ರಮವೇನು. ಒಟ್ಟು 5 ಸಾವಿರ ಎಕರೆ ಅನ್ ಆಥರೈಸ್ಡ್ ಕಲ್ಟಿವೇಶನ್ ಇರುವುದರಲ್ಲಿ, 1850 ಎಕರೆ ಎಕ್ಸೈಜು ಪ್ಲಾಟು, ಈಚಲಮರ ಇದ್ದಂಥ ಭೂಮಿ ಎಂದು ಉತ್ತರಕೊಟ್ಟಿದ್ದಾರೆ. ಇದನ್ನು ನೋಡಿದ್ದೇನೆ. ಆದ್ದರಿಂದ ಇಂಥ ಕಾನೂನನ್ನು ಏಕೆ ಮಾಡುತ್ತೀರ ಒಬ್ಬ ಎಕ್ಸೈಸ್ ಇನ್ಸ್‌ಪೆಕ್ಟರಿಗೆ, ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರಿಗೆ, ಡೆಪ್ಯುಟಿ ಕಮೀಶನರಿಗೆ ಈ ಆಕ್ಟ್ ಪ್ರಕಾರ ಪವರುಗಳನ್ನು ಕೊಡುವುದು ಏತಕ್ಕೆ, ಅವುಗಳನ್ನು ಎಕ್ಸರ್‌ಸೈಸ್ ಮಾಡಲಿ, ಉದ್ದೇಶವನ್ನು ಇಂಪ್ಲಿಮೆಂಟ್ ಮಾಡಲಿ ಎಂದು when these officers or their subordinates are not capable of implementing them, where in the fun is exchaging laws and placing them on the statute ? ನಾವು ಮಾಡಿರುವುದು ಸರಿಯೇ ತಪ್ಪೇ, ಸರಿಯಾಗಿ ಮಾಡಿಲ್ಲ ಅಂತ ಹೇಳಿದರೆ, let the aggrieved party go to a court ಎಂಬ ಮನೋಭಾವನೆ ಇದ್ದರೆ, ಕಾನೂನನ್ನು ಕಸಕ್ಕಿಂತ ಕಡೆಯಾಗಿ ನೋಡುವುದಾದರೆ, ಇಂಥ ಒಂದು ಇಲಾಖೆ ಏತಕ್ಕೆ: ಈ ಒಂದು ಕಾನೂನು ಏತಕ್ಕೆ ಎಂದು ನೊಂದ ಮನಸ್ಸಿನಿಂದ ಮಾತನಾಡುತ್ತಾ ಇದ್ದೇನೆ, ಇವತ್ತಿನ ದಿವಸ ನಮ್ಮ ತಾಲ್ಲೂಕಿನಲ್ಲಿ ಈಚಲ ಮರ ಕಟ್ಟುವುದಕ್ಕೆ ಕೊಟ್ಟಿದ್ದಾರೆ. 300 ಮರ ಕೊಟ್ಟರೆ 600 ಮರಗಳನ್ನು ಕಟ್ಟುತ್ತಾ ಇದ್ದಾರೆ. ಇವತ್ತು ನಾನು ಇದನ್ನು ತೋರಿಸದೆ ಹೋದರೆ ಇಲ್ಲಿಯಾದರೂ ಸರಿಯೇ, ತಮ್ಮ ಚೇಂಬರಿನಲ್ಲಾದರೂ ಸರಿಯೇ ತಾವು ಕೊಟ್ಟ ಶಿಕ್ಷೆಗೆ ಭಾಗಿಯಾಗುತ್ತೇನೆ. ಈ ಕಾನೂನು ಬೇಡ ಅಂತ ಹೇಳಲಿಲ್ಲ ಆದರೆ ಈ ಇಲಾಖೆಯಲ್ಲಿ ಏನೇನು ಲೋಪದೋಷಗಳಿವೆಯೋ ಅವುಗಳನ್ನು ಸರಿಪಾಡಬೇಕು. ಈ ಲೋಪದೋಶಗಳನ್ನು ಬಹಳ ಉಗ್ರವಾಗಿ ತಾವು ನೋಡಬೇಕು. ಒಂದುಕಡೆ 3 ಸಾವಿರ ಮರ ಕಡಿದಿದ್ದರೆ, ಒಂದೂ ಕಡಿಯಲಿಲ್ಲ ಅಂತ ಬರೆದಿದ್ದಾರೆ. 10-15-20-25 ಅಡಿ ಗಿಡ ಇದೆ. ಅಲ್ಲಿ ಒಂದೂ ಈಚಲಮರ ಇಲ್ಲ, ಬೇಸಾಯಕ್ಕೆ ಕೊಡಬಹುದು ಎಂದು ಬರೆದಿದ್ದಾರೆ. ಎಲ್ಲಿ ದಟ್ಟವಾದ ಮರಗಳು ಇರುತ್ತವೆಯೋ ಅಲ್ಲಿ ವ್ಯವಸಾಯಕ್ಕೆ ಕೊಡುವುದಕ್ಕಾಗುವುದಿಲ್ಲವೆಂದು ಬರೆದಿದ್ದಾರೆ. ಇಷ್ಟು contradictory report ಗಳನ್ನು ಅಧಿಕಾರಿಗಳು ಮಾಡುತ್ತಾರೆ ಇಂಥ ಸುಳ್ಳುವರದಿಯನ್ನು ಬರೆಯತಕ್ಕಂಥ ಅಧಿಕಾರಿಗಳು ತಮ್ಮ ಖಾತೆಯಲ್ಲಿದ್ದಾರೆಂದು ತಮ್ಮ ಗಮನಕ್ಕೆ ತರುವುದಕ್ಕೆ ಹೇಳುತ್ತಾ ಇದ್ದೇನೆ. ಎಲ್ಲಿ ಅವರು ಹೇಳುವುದು ಸತ್ಯಾಂಶಕ್ಕೆ ದೂರವಿದೆ

ಅನ್ನುವುದನ್ನು ತಾವು ಪರೀಕ್ಷೆ ಮಾಡಬೇಕು ತಾವೇ ಪರೀಕ್ಷೆ ಮಾಡಿ ಆಗಾಗ ನೋಡದಿದ್ದರೆ, ಕೆಳ ನೌಕರರುಗಳಿಂದ ಕಾಗದದ ಮೇಲೆ ಬಂದಿರುವುದೆಲ್ಲಾ ಸರಿ ಎಂಬ ಭಾವನೆ ತಮಗೆ ಬಂದು ಬಿಡುತ್ತದೆ. ಈ ಕುರ್ಚಿಮೇಲೆ ಕೂತು ಎಲ್ಲಾ ವಿಷಯವನ್ನು ತಿಳಿದುಕೊಳ್ಳುವುದಕ್ಕಾಗುವುದಿಲ್ಲ, ಹಾಗಂತ ಸರಕಾರವೇ ಎಲ್ಲವನ್ನು ತಾವೇನೋಡಿ ಮಾಡುವುದಕ್ಕೂ ಸಾಧ್ಯವಿಲ್ಲ. Government and their high officres have to believe their subordinates. Every one has to keep some confidence in his subordinates. ಸಬಾರ್ಡಿನೇಟ್ಸ್ ಬರೆದುದನ್ನು ಮೇಲಿನವರು ಒಪ್ಪಿಕೊಳ್ಳಬೇಕಾಗುತ್ತದೆ, ಇಲ್ಲದೆ ಹೋದರೆ ಮನುಷ್ಯ ಮಾತ್ರನಾದವನಿಗೆ ರಾಜ್ಯಭಾರ ನಡೆಸುವುದಕ್ಕೆ ಬಹಳ ಕಷ್ಟವಾಗುತ್ತದೆ. ಅದಕ್ಕೆ ರಿಲೈಯಬಲ್ ಸಬಾರ್ಡಿನೇಟ್ಸ್ ಇರಬೇಕು. ಈಗ ಈ ಖಾತೆಯಲ್ಲಿ ಅತೃಪ್ತಿಯಿಂದ ಕೆಲಸಮಾಡತಕ್ಕ ನೌಕರರು ಇದ್ದಾರೆ ಆದ್ದರಿಂದ ಇವರದ್ದು ಕೆಲಸ money making ; ಇವರದು ಕ್ಯಾಶ್ ಬಿಸಿನೆಸ್. ತಿಂಗಳಿಗೊಮ್ಮೆ ಮಾಮೂಲು ಮಾಡಿಕೊಂಡು ಬಿಟ್ಟಿದ್ದಾರೆ. ಇದು ಏಕೆ ಹೇಳುತ್ತಿದ್ದೇನೆಂದರೆ ಕಾನೂನು ಇಂಪ್ಲಿಮೆಂಟ್ ಮಾಡುವಾಗ ಹಣ ದಿನ ಎಷ್ಟು ಹಸ್ತಕ್ಷೇಪವಿದೆಯೆಂದು ತಿಳಿಸುವುದಕ್ಕೆ ನಮ್ಮ ರಾಜ್ಯದ ಶಾಸನಸಭೆಗೆ ತಾವು ಬರುವುದಕ್ಕೆ ಮುಂಚೆ ಈ ಸಂಸ್ಥಾನದಲ್ಲಿ ಒಬ್ಬ ಎಕ್ಸೈಸ್ ಅಧಿಕಾರಿ ಇದ್ದರು; ಅವರು ಡೆಪ್ಯುಟಿ ಕಮಿಶನರು ಆಗಿದ್ದರು. ಒಂದು ಊರಿನಲ್ಲಿ ಗುಂಡು ಹಾರಿಸಿದರು, ಜನಗಳು ಪ್ರಾಣ ಬಿಟ್ಟರು. ಅವರು ಸಾಯುವಾಗ ಕುಷ್ಟರೋಗದಿಂದ ಸತ್ತರು. ನಾವು ಕಾನೂನನ್ನು ಮಾಡುವುದು ಸತ್ಯವಂತರೂ, ನೀತಿವಂತರೂ ಆಗಿರಬೇಕೆಂದು, ಆದರೆ ನಾವೂ, ನೀವೂ ನೀತಿವಂತರಾಗದೆ ಹೋದರೆ ತಾವು ನಿರೀಕ್ಷಣೆ ಮಾಡಿದ ಕಲ್ಯಾಣರಾಜ್ಯ ಕಟ್ಟುವುದು ಕನಸೇ, ಈ ಅಧಿಕಾರದಲ್ಲಿರುವವರು ಬೇರೆ ವ್ಯವಹಾರ ಹೂಡಿದರೆ, ಕರಪ್ಟ್ ಆಗಿದ್ದರೆ ಏನು ಕಾನೂನುಮಾಡಿದರೂ ಪ್ರಯೋಜನವಾಗುವುದಿಲ್ಲ. ದಟ್ಟವಾಗಿ ಈಚಲಮರ ಬೆಳದಿರತಕ್ಕಂಥ ಜಮೀನನ್ನು ಕಲ್ಟಿವೇಟ್ ಮಾಡುವವರಿಗೆ ಇಬ್ಬರು ಈ ಖಾತೆಯ ಗಾರ್ಡುಗಳು ಒಂದು ಕಡೆ ಕುಮ್ಮಕ್ಕು ಮಾಡುತ್ತಿದ್ದರು ಯಾವ ಭೂಮಿಯಲ್ಲಿ ಅನ್ ಆಥ್ರೈಸ್ಡ್ ಕಲ್ಟಿವೇಶನ್ ನಡೆಯುತ್ತಿತ್ತೋ, ಎಲ್ಲಿ ಫಸಲು ಬೆಳೆದಿದ್ದರೋ ಅಲ್ಲಿಗೆ ಪೋಲೀಸಿನವರನ್ನು ಕರೆದುಕೊಂಡು ತಪ್ಪಿತಸ್ತರನ್ನು ಹಿಡಿಯಲು ಹೋದರೆ ಈ ಗಾರ್ಡುಗಳು ಆ ಊರನ್ನೇ ಬಿಟ್ಟು ಹೊರಟು ಹೋಗಿದ್ದರು. ಇದನ್ನು ನೋಡಿದರೆ ಎಷ್ಟರಮಟ್ಟಿಗೆ ಈ ಖಾತೆಯಲ್ಲಿ ವ್ಯವಹಾರ ನಡೆಯುತ್ತಿದೆ ಎನ್ನುವುದು ಮನದಟ್ಟಾಗುತ್ತದೆ. ನಾನು ಇದನ್ನು ಡಿಸ್ಟ್ರಿಕ್ಟ್ ಎಕ್ಸೈಸ್ ಆಫೀಸರ ನೋಟಿಸಿಗೆ ತಂದಾಗ ಅವರು ''ನನಗೆ ವರ್ಗವಾಗಿಬಿಟ್ಟಿದೆ. ಹೊಸಬರಿಗೆ ಹೇಳಿಕೊಳ್ಳಿ'' ಅಂದರು ಇಷ್ಟರಲ್ಲಿ ವ್ಯವಹಾರ ಮುಗಿದು ಹೋಯಿತು. ಮಂತ್ರಿಗಳಿಗೆ ಹೇಳಬಹುದಾಗಿತ್ತು ಅಂತ ನೀವು ಹೇಳಬಹುದು. ನಮ್ಮ ರಾಜ್ಯದಲ್ಲಿ ನಡೆಯತಕ್ಕ ಪ್ರತಿಯೊಂದು ಸಣ್ಣ ಪುಟ್ಟ ವಿಷಯವನ್ನು ಮಂತ್ರಿಗಳಿಗೆ ತೆಗೆದುಕೊಂಡು ಹೋಗಿ ಹೇಳುವುದಕ್ಕೆ ನಾನಾದರೂ ಇಚ್ಛೆಪಡುವುದಿಲ್ಲ. ಅಧಿಕಾರಿಗಳ ಗಮನವನ್ನು ಅದರ ಕಡೆ ಸೆಳದರೆ ಅವರು ಅವ್ಯವಸ್ಥೆ ಸರಿಮಾಡಬಹುದು ಎಂದು ಸ್ವಲ್ಪ ಭರವಸೆ ಇಟ್ಟುಕೊಂಡಿದ್ದೆ ಅದು ತಪ್ಪು ಭಾವನೆಯಾಗಿದೆ.

ಇವತ್ತು ಬೆಂಗಳೂರು ಪಟ್ಟಣದಲ್ಲಿ ತಮ್ಮ ಖಾತೆ ಎಷ್ಟರಮಟ್ಟಿಗೆ ಕೆಲಸಮಾಡುತ್ತಿದೆ ಎಂದು ತಾವು ಇನ್ನೂ ಸ್ವಲ್ಪ ಒಳಹೊಕ್ಕು ನೋಡಬೇಕು ಈ ಖಾತೆಯಲ್ಲಿ ಎಂಥೆಂಥ ಖದೀಮರು, ಅನುಕೂಲಸ್ತರು ಇದ್ದಾರೆ ನೋಡಿ. ಸಣ್ಣಪುಟ್ಟ ಅಧಿಕಾರಿಗಳು ಎಷ್ಟೆಷ್ಟು ಮನೆಗಳನ್ನು ಕಟ್ಟಿಕೊಂಡಿದ್ದಾರೆನ್ನುವುದನ್ನು ನೋಡಿದ್ದೀರ ? ಅವರಲ್ಲಿರತಕ್ಕ ಬಂಗಾರ, ಹಣ, ಅವರ ಬ್ಯಾಂಕ್ ಲೆಕ್ಕಗಳು, ಅವರ ಮನೆಯವರ ಹೆಸರಿನಲ್ಲಿ ಮಾಡೀರುವ ಜಮೀನು ಮತ್ತು ಇತರ ಆಸ್ತಿಗಳನ್ನು ನೋಡಿದರೆ, ನಾವೂ ನೀವೂ ಇನ್ನು ಶತಮಾನಗಳು ಕಳೆದರೂ ಹೀಗೆಯೇ ಇರುವುದೇ. ಈ ಎಕ್ಸೈಸ್ ಖಾತೆ ಅಂದರೆ ಇದು ಬಂಗಾರ, ಕಾಮಧೇನು ಇಲ್ಲಿ ವಜ್ರ ವೈಡೂರ್ಯಗಳು 9 ನವರತ್ನಗಳೂ ದೊರೆಯುತ್ತವೆ. ಶ್ರೀಮಾನ್ ಹನುಮಂತಯ್ಯನವರು ಮುಖ್ಯಮಂತ್ರಿಗಳಾಗಿದ್ದ ಕಾಲದಲ್ಲಿ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಮುಳಬಾಗಲ್ ತಾಲ್ಲೂಕಿನ ನಂಗಲ್ ಬಾರ್ಡರಿನಲ್ಲಿ ಒಬ್ಬ ಎಕ್ಸೈಸ್ ಕಂಟ್ರಾಕ್ಟರು ಮತ್ತು ಒಬ್ಬ ಎಕ್ಸೈಸ್ ಆಫೀಸರನ್ನು ಮೂರುಲಕ್ಷ ಬೆಲೆ ಬಾಳತಕ್ಕಂಥ ಗಾಂಜದೊಂದಿಗೆ ಪ್ರಯಾಣ ಮಾಡುತ್ತಿದ್ದಾಗ ಹಿಡಿದರು. ಅದನ್ನು ಟೈರ್ ಇಡುವ ಜಾಗದಲ್ಲಿ ಹಾಸಿಗೆ ಒಳಗೆ ಮುಚ್ಚಿಟ್ಟಿದ್ದರು. ಕಂಟ್ರಾಕ್ಟರು ಧಡೂತಿ ಮನುಷ್ಯ, ಆದ್ದರಿಂದ ಹಿಡಿದು ಏನುಮಾಡಿದರು.

44ನೆಯ ಕ್ಲಾಜಿನ ಕೆಳಗೆ ಏನು ಹೇಳಿದ್ದೀರಿ ಎಂದರೆ ಒಬ್ಬನಿಗೆ ಒಂದು ಸಾರಿ ಶಿಕ್ಷೆಯಾಗಿದ್ದು ಮತ್ತೊಮ್ಮೆ ಅವನು ತಪ್ಪುಮಾಡಿದರೆ ಅವನಿಗೆ ದ್ವಿಗುಣವಾದ ಶಿಕ್ಷೆಯನ್ನು ಕೊಡಿ ಎಂದು ಮ್ಯಾಜಿಸ್ಟ್ರೇಟರಿಗೆ ಸೂಚನೆ ಕೊಡುವಂತೆ ಇದರಲ್ಲಿ ಅಳವಡಿಸಿದ್ದೀರಿ. You leave it to the discretion of the court. ನ್ಯಾಯಾಧಿಕಾರಿಗಳು ನೋಡಿಕೊಂಡು ಶಿಕ್ಷೆ ಕೊಡಲಿ, ಸ್ವಾಮಿ, 34, 35, 36 ಮತ್ತು 40ನೆಯ ಕ್ಲಾಜುಗಳ ಕೆಳಗೆ ಬರುವಂಥ ತಪ್ಪುಗಳಿಗೆ, ಅವನು ಮಾಡತಕ್ಕ ಪ್ರತಿಯೊಂದು ತಪ್ಪಿಗೂ ಮ್ಯಾಜಿಸ್ಟ್ರೇಟರು ವಿಧಿಸತಕ್ಕ ಶಿಕ್ಷೆಯ ಎರಡರಷ್ಟು ಶಿಕ್ಷೆಯನ್ನು ಅದೇ

(SRI C. J. MUCKANNAPPA)

ತಪ್ಪನ್ನು ಪುನಃ ಮಾಡಿದರೆ ವಿಧಿಸಬೇಕು ಎಂದು ಹೇಳಿದರೆ ಕುಡಿಯತಕ್ಕ ಚಟ ಇರುವವನು ತಾನು ಕುಡಿದು ಚಟವನ್ನು ತೀರಿಸಿಕೊಳ್ಳಬೇಕು ಎಂದು ಪದೇ ಪದೇ ಕುಡಿದು ತಪ್ಪುಮಾಡುತ್ತಿರುತ್ತಾನೆ. He is tempted to drink. Suppose there is nothing to drink? ಆಗ ಅವನು ಏನು ಮಾಡುತ್ತಾನೆ? ಅದಕ್ಕೋಸ್ಕರವೇ ಹೆಂಡದ ಅಂಗಡಿಗಳಿದ್ದರೆ ಕುಡಿಯುತ್ತಾನೆ. ಈ ಹೆಂಡದ ಕಾನೂನು ಬೇಡ ಎನ್ನುವುದಕ್ಕೆ ಹೇಳುತ್ತಿದ್ದೇನೆ.

Mr. SPEAKER.—The Hon'ble Member may please read clause 44. What happens if he is brought for the third, fourth or fifth time?

Sri C. J. MUCKANNAPPA.—This may be left to the Court. The court will use its discretion. This is a habitual offender. The Magistrate will take note of these things and he will come to the conclusion that this fellow must be awarded a deterrent punishment. Why should we go to the extent of suggesting to the Court, give him twice, give him thrice and so on? Let us leave it to the Court. I request the Committee to go into the principles and make such recommendations as will be acceptable and we hope that it will send another report.

ಸ್ವಾಮಿ, penalty for misconduct of license, penalty for adulteration ಹೀಗೆ ಕೆಲವು ತಪ್ಪಿತಗಳನ್ನು ಮಾಡಿದವರಿಗೆ ಶಿಕ್ಷೆ ವಿಧಿಸಬೇಕು ಎಂದು ಹೇಳಿದ್ದೀರಿ. ಒಂದು ವಿಷಯ ಹೇಳುತ್ತೇನೆ. ಎಷ್ಟು ಜನ ಡಾಕ್ಟರುಗಳು 40 ರೂಪಾಯಿ ಕೊಟ್ಟು ಲೈಸೆನ್ಸ್ ತೆಗೆದುಕೊಂಡಿದ್ದಾರೆಂದು ತಾವು ನೋಡಿದ್ದೀರಾ? ನನ್ನ ಜೊತೆಯಲ್ಲಿ ಈ ಖಾತೆಯ ಸ್ಪೆಷಲ್ C.I.D. ಅಧಿಕಾರಿಗಳನ್ನು ಕಳಿಸಿ, ತೋರಿಸುತ್ತೇನೆ. ಎಷ್ಟೋ ಜನ ಡಾಕ್ಟರುಗಳು ಕಾನೂನು ಪ್ರಕಾರವಾಗಿ ತಮ್ಮ ಅಂಗಡಿಗಳಲ್ಲಿರತಕ್ಕ alcohol ಮಿಶ್ರವಾದ ಔಷಧಿಗೋಸ್ಕರ ಲೈಸೆನ್ಸ್ ತೆಗೆದುಕೊಳ್ಳಬೇಕಾಗಿದ್ದರೂ ತೆಗೆದುಕೊಂಡಿಲ್ಲ.

What is the District Excise Officer, Deputy Commissioner or any other officer doing? He has not taken any steps to check whether such and such doctor has obtained license or not. Even to-day the doctor is a merry goer, because he belongs to your group. So you don't want to touch him. There are six private doctors; out of them 5 have obtained license, but our man who belongs to your section has not obtained license for the last four years.

ಶ್ರೀ ಎಂ. ವಿ. ರಾಮರಾವ್.—ಯಾವ ಊರಿನಲ್ಲಿ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನಮ್ಮ ಊರಿನಲ್ಲಿ ಸ್ವಾಮಿ, ಇಂಥದ್ದನ್ನೆಲ್ಲ ಸರಿಪಡಿಸಬೇಕು ಎಂದು ಬಹಳ ವಿಶ್ವಾಸದಿಂದ ಕೇಳಿಕೊಳ್ಳುತ್ತೇನೆ.

ಕ್ಲಾಜ್ 52ರಲ್ಲಿ Landholders, Officers and others to give information ಎಂದು ಹೇಳಿದ್ದೀರಿ. ಒಬ್ಬನಿಗೆ ಬರವಣಿಗೆ ಬರುವುದಿಲ್ಲ, ತಿಳುವಳಿಕೆ ಇರುವುದಿಲ್ಲ, ಹೊಲ ನಾಲ್ಕೈದು ಮೈಲಿ ದೂರವಿರುತ್ತದೆ. ಅಲ್ಲಿಗೆ ಯಾರಾದರೂ ಹೋಗಿ ಹೆಂಡವನ್ನು ಇಳಿಸಿ ಮಾರಾಟ ಮಾಡುತ್ತಾನೆ. ಅಂಥದ್ದನ್ನು ಬಡ ಜಮೀನ್ದಾರರು ರಿಪೋರ್ಟು ಮಾಡಬೇಕೆಂದರೆ ಬಹಳ ಕಷ್ಟ. ಅವನು ಸಮಾಚಾರ ತಿಳಿಸದೆ ಅದು ತಪ್ಪಾಗುತ್ತದೆ. It will be an offence. ಇದನ್ನು implement ಏನು ತೊಂದರೆಯಾಗುತ್ತದೆನ್ನುವುದನ್ನು ತಿಳಿದುಕೊಳ್ಳಬೇಕು.

ಆ ಮೇಲೆ ಕ್ಲಾಜ್ 54-55 ತೆಗೆದುಕೊಂಡರೆ, ಈ ಜನರನ್ನು ದೇವರೇ ಕಾಪಾಡಬೇಕು. ಇವರ ಕೈಯಲ್ಲಿ ಅಧಿಕಾರ ಕೊಟ್ಟರೆ ಮಂಗನ ಕೈಯಲ್ಲಿ ಏನೋ ಕೊಟ್ಟ ಹಾಗೆ ಆಗುತ್ತದೆ. ಇದರಿಂದ ಏನಾಗುತ್ತದೆಂದು ಸ್ವಲ್ಪ ಯೋಚನೆ ಮಾಡಿ. ಇವರು ನಮ್ಮ ಕಡೆಯವರಿಗೆ ಆಗದವರು, ಇವರಿಗೆ ತೊಂದರೆ ಮಾಡಬೇಕು ಎಂದರೆ ಕಾರಿನಲ್ಲಿ ಹಾಸಿಗೆ, ಚೇರ್ ಮುಂತಾದುವನ್ನು ಇಡುವ ಕಡೆ ಒಂದು ಬಾಟಲ್ ಇಟ್ಟು ಆ ಮನುಷ್ಯನನ್ನು ಅರೆಸ್ಟ್ ಮಾಡಬಹುದು. ಏಕೆಂದರೆ ಆ ಮನುಷ್ಯ ತಪ್ಪು ಮಾಡಿದ್ದಾನೆಂದು ತೋರಿಸಬಹುದು. Power to arrest without warrant to seize

articles liable for confiscation and to make searches ಎಂದರೆ ಇದರಿಂದ ಬಹಳ ಭಯವಾಗುತ್ತದೆ. ಇದನ್ನು ಸೆಲೆಕ್ಟ್ ಕಮಿಟಿಯವರು ಪೂರ್ಣವಾಗಿ ಯೋಚನೆ ಮಾಡುತ್ತಾರೆಂದು ತಿಳಿದುಕೊಂಡಿದ್ದೇನೆ.

ಕ್ಲಾಜ್ 55ರಲ್ಲಿ ಮ್ಯಾಜಿಸ್ಟ್ರೇಟರಿಗೆ ಇನ್ನೊಂದು ಅಧಿಕಾರವನ್ನು ಕೊಟ್ಟಿದ್ದಾರೆ. ಇದರಿಂದ ಏನಾಗಬಹುದು ಎನ್ನುವುದಕ್ಕೆ ಒಂದು ಉದಾಹರಣೆಯನ್ನು ಕೊಡುತ್ತೇನೆ. ಪಾವಗಡದಲ್ಲಿ ಒಬ್ಬ ಶೆಟ್ಟರು, ಅವರ ಮಗ ಪೋಲೀಸರ ಕಡೆ ಸೇರಿಕೊಂಡಿದ್ದ. ಪೋಲೀಸಿನವರೂ ಎಕ್ಸೈಜ್ ಇಲಾಖೆಯವರೂ ಸೇರಿಕೊಂಡು ಒಂದು ಸಂಚು ಹೂಡಿದರು. ಶೆಟ್ಟರು ರಾತ್ರಿ ಊಟ ಮಾಡಿ ತಲೆದಿಂಬಿನ ಕೆಳಗೆ ಕಬ್ಬಿಣದ ಪೆಟ್ಟಿಗೆಯ ಬೀಗದ ಕೈಯನ್ನಿಟ್ಟು ನಿದ್ದೆ ಹೋದರು. ಪೋಲೀಸಿನವರು ಬೀಗವನ್ನು ತೆಗೆಸಿ 15 ತೊಲ ಗಾಂಜ ಪೆಟ್ಟಿಗೆಯಲ್ಲಿಡಿಸಿ ಬೀಗ ಹಾಕಿದರು. ಪುನಃ ದಿಂಬಿನ ಕೆಳಗೇ ಬೀಗದ ಕೈಯನ್ನು ಇಟ್ಟರು. ಬೆಳಿಗ್ಗೆ 9 ಗಂಟೆಗೆ ತಹಸೀಲ್ದಾರರೂ, ಪೋಲೀಸಿನವರೂ ಎಕ್ಸೈಜ್ ಅಧಿಕಾರಿಗಳೂ ಎಲ್ಲ ಒಟ್ಟಿಗೆ ಬಂದು ನಿಮ್ಮ ಮನೆಯಲ್ಲಿ ಗಾಂಜ ಇರುವುದಾಗಿ ವರ್ತಮಾನ ಗೊತ್ತಾಗಿದೆ, ಅದಕ್ಕೋಸ್ಕರವಾಗಿ ನಿಮ್ಮ ಮನೆಯನ್ನು ಶೋಧನೆಮಾಡುತ್ತೇವೆಂದು ಹೇಳಿದರು. ಇದನ್ನು ಹೇಗೆ ಮಾಡಿದರು ಎಂದರೆ ಮ್ಯಾಜಿಸ್ಟ್ರೇಟರಿಂದ ವಾರಂಟ್ ತೆಗೆದುಕೊಂಡು ಹೋಗಿದ್ದರು. ಒಳಗೆ ಹೋಗಿ ನೋಡಲಾಗಿ ಪೆಟ್ಟಿಗೆಯಲ್ಲಿ 15 ತೊಲ ಗಾಂಜ ಇತ್ತು ಸರಿ, ಅವರ ಅರೆಸ್ಟ್ ಆಯಿತು.

ಈ ಅಧಿಕಾರ ಅವರಿಗೆ ಕೊಡುವುದರಿಂದ ಎಷ್ಟು ಅನಾಹುತಗಳು ಆಗುತ್ತವೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕು ಮತ್ತು ಇದನ್ನು ಸೂಕ್ತವಾಗಿ ಪರ್ಯಾಲೋಚನೆ ಮಾಡಬೇಕು. ಈ ಆಕ್ಟು ಬಹಳ ದಿನ ಇರುವುದಿಲ್ಲ ತಮ್ಮ ಕಾಲದಲ್ಲೇ ಇದನ್ನು ರಿಪೀಲ್ ಮಾಡಿಸುತ್ತೇವೆ ಆದ್ದರಿಂದ ಇದನ್ನು ಕೂಲಂಕಷವಾಗಿ ಪರಿಶೀಲನೆ ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಕಂಟ್ರ್ಯಾಕ್ಟರುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಬಿಟ್ಟು ಕೊಟ್ಟಿದ್ದೀರಿ—ರೆಕವರಿ ಆಫ್ ಗವರ್ನಮೆಂಟ್ ಡ್ಯೂಸ್, ಗುಲ್ಬರ್ಗ, ರಾಯಚೂರು ಮತ್ತು ಹಳೇ ಮೈಸೂರು ಸಂಸ್ಥಾನದಲ್ಲಿ ತಮಗೆ ಬೇಕಾದವರು ಎಂದು ಯಾರು ಯಾರು ಇದ್ದರೋ ಅವರಿಗೆಲ್ಲಾ ಸಹಾಯ ಮಾಡಿದ್ದೀರಿ. ಲಕ್ಷಾಂತರ ರೂಪಾಯಿಗಳನ್ನು ಚಳುವಳಿಯಾಗಿ ಕೊಟ್ಟಿದ್ದೀರಿ. ಒಂದು ಸಾರಿ ಮಸೀದಿಗೆ ಸೇರಿದ ಜಮೀನುಗಳನ್ನು ಆಧಾರ ಮಾಡಿಸಿಕೊಂಡು ಹಣ ಕೊಟ್ಟಿದ್ದೀರಿ ಇದು ಸರಿಯಲ್ಲ ಎಂದರೆ ಕೊಂಕಣ ಸುತ್ತಿ ಮೈಲಾರಕ್ಕೆ ಬಂದ ಹಾಗೆ ಉತ್ತರ ಹೇಳುತ್ತೀರಿ. ಒಬ್ಬ ಟಾಡಿ ಕಂಟ್ರ್ಯಾಕ್ಟರಿಗೆ ಆ ವ್ಯವಹಾರವನ್ನು ಕೊಡುವಾಗ ಅವನಿಂದ ತಾವು ಸೆಕ್ಯೂರಿಟಿ ತೆಗೆದುಕೊಳ್ಳುತ್ತೀರಿ, ಹಣ ಡಿಪಾಸಿಟ್ ಮಾಡಿಸಿ ಕೊಳ್ಳುತ್ತೀರಿ ಇಷ್ಟೆಲ್ಲಾ ಮಾಡಿದರೂ ಅವರಮೇಲೆ ಡ್ಯೂಸ್ ಹೇಗೆ ಬರುತ್ತದೆ ಎಂಬುದು ಅರ್ಥವಾಗುವುದಿಲ್ಲ.

ಶ್ರೀ ಎಂ. ವಿ. ರಾಮರಾವ್.—ಮಾನ್ಯ ಸದಸ್ಯರು ರೆಫರ್ ಮಾಡುತ್ತಾ ಇರುವುದು ಹಿಂದೆ ಬೇರೆ ರಾಜ್ಯದಲ್ಲಿ ಇದ್ದಾಗ ನಡೆದ ವ್ಯವಹಾರಗಳಿಗೆ ಸೇರಿದ್ದು.

ಶ್ರೀ ಸಿ. ಜೆ ಮುಕ್ಕಣ್ಣಪ್ಪ.—ಅದನ್ನೇ ಹೇಳುತ್ತಾ ಇದ್ದೇನೆ, ಮಸೀದಿಗಳು, ಚರ್ಚ್‌ಗಳು, ದೇವಸ್ಥಾನ ಮುಂತಾದವುಗಳನ್ನು ಸೆಕ್ಯೂರಿಟಿಯಾಗಿ ಇಟ್ಟುಕೊಂಡು ಲಕ್ಷಾಂತರ ರೂಪಾಯಿಗಳನ್ನು ಹೈದರಾಬಾದ್‌ನಲ್ಲಿ ಕೊಟ್ಟಿದ್ದಾರೆ. ಏಕೆ ಅದನ್ನು ಕೊಟ್ಟರಿ, ಅದಕ್ಕೆ ಕಾರಣವೇನು, ರೈಟ್ ಆಫ್ ಮಾಡುವುದಕ್ಕೆ ಅವರೆಲ್ಲಾ ಪಾಪರ್ ಆದರೇ ಅಥವಾ ಇನ್ನೇನಾದರೂ ಕಾರಣವಿದೆಯೇ ?

ಶ್ರೀ ಎಂ. ವಿ. ರಾಮರಾವ್.—ರೈಟ್ ಆಫ್ ಮಾಡಿಲ್ಲ, ಹಿಂದೆ ಹೈದರಾಬಾದ್ ಗವರ್ನಮೆಂಟಿನವರೇ ಅವರಿಗೆ ರೆಮಿಷನ್ ಕೊಟ್ಟಿದ್ದರು ಆ ಆರ್ಡರ್ ಏನಿತ್ತೋ, ಅದನ್ನು ನಾವು ಜಾರಿಗೆ ಕೊಟ್ಟಿದ್ದೇವೆ ಅಷ್ಟೆ. ಆಗಿನ ಕಾಲದಲ್ಲಿ ಅವರವರಿಗೆ ಏನು ಕಾಂಟ್ರ್ಯಾಕ್ಟ್ ಆಗಿತ್ತೋ ಅದನ್ನು ಈಗ ಹೇಳುವುದು ಹೇಗೆ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಅವರ ಲೈಯಬಲಿಟೀಸ್‌ಗೂ ನೀವೂ ಜವಾಬ್ದಾರರಲ್ಲವೇ ?

ಶ್ರೀ ಎಂ. ವಿ. ರಾಮರಾವ್.—ಹೌದು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಹಾಗಿದ್ದಮೇಲೆ ಆ ಹಣ ವಸೂಲು ಮಾಡದೇ ಹೇಗೆ ಬಿಟ್ಟಿರಿ ? 1962ರಲ್ಲಿ ನಡೆದ ಚುನಾವಣೆಯಲ್ಲಿ ನಿಮ್ಮ ಪಕ್ಷದವರೇ ನಿಮ್ಮ ಮೇಲೆ ಆಪಾದನೆ ಮಾಡಿದರು ಎಕ್ಸೈಜ್ ಕಂಟ್ರ್ಯಾಕ್ಟರುಗಳಿಗೆ ಲಕ್ಷಾಂತರ ರೂಪಾಯಿಗಳನ್ನು ಬಿಟ್ಟಿಯಾಗಿ ಚುನಾವಣೆಯ ಖರ್ಚಿಗೆ ಕೊಟ್ಟಿರಿ ಎಂದು ಅದನ್ನು ತಮಗೆ ಜ್ಞಾಪಿಸುತ್ತಾ ಇದ್ದೇನೆ—ಒಂದು ವೇಳೆ ಆ ರೀತಿ ಇಲ್ಲದೇ ಹೋದರೆ ಬಿಟ್ಟುಬಿಡಿ, ಸುಡುಗಾಡಿಗೆ ಹೋದ ಹಣ ಮತ್ತೆ ವಾಪಸು ಬರುವುದಿಲ್ಲ.

ಇದರಲ್ಲಿ ಕೆಲವು ಪ್ರೊವಿಜನ್‌ಗಳು ಬಹಳ ಕಠಿಣವಾಗಿವೆ, ಬಹಳ ಉಗ್ರವಾಗಿವೆ ಮತ್ತು ಅಧಿಕಾರಿಗಳು ದಿಟ್ಟತನದಿಂದ ಕೆಲಸ ಮಾಡದಿದ್ದರೆ ಕರ್ತವ್ಯ ಲೋಪ ಮಾಡಿದರೆ ಅವರಿಗೆ ಏನು

(ಶ್ರೀ ಸಿ. .ಜೆ. ಮುಕ್ಕಣ್ಣಪ್ಪ)

ಮಾಡುತ್ತೀರಿ ಎಂಬ ವಿಷಯವನ್ನೂ ಕೂಡ ಈ ಬಿಲ್‌ನಲ್ಲಿ ಪರಿಪಕ್ವವಾಗಿ ಅಳವಡಿಸಿಲ್ಲ, ಇದನ್ನೆಲ್ಲಾ ಸೆಲೆಕ್ಟ್ ಕಮಿಟಿಯವರು ಕೂಲಂಕಷವಾಗಿ ವಿಮರ್ಶೆ ಮಾಡಿ ಎಲ್ಲರೂ ಒಪ್ಪಿಕೊಳ್ಳುವ ರೀತಿಯಲ್ಲಿ ಒಂದು ಕಾನೂನನ್ನು ಮಾಡಿ ತರುತ್ತೀರಿ ಎಂದು ತಿಳಿದುಕೊಂಡು ಅಧ್ಯಕ್ಷರು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

Sri SANJEEVANATH AIKALA (Suratkal).—I want to Speak, Sir.

Mr. SPEAKER.—I think there has been enough Debate. But, there is no question of repeating what has already been said. The Hon'ble member Sri Aikala may be brief.

Sri SANJEEVANATH AIKALA.—Mr. Speaker Sir, I am going to question the very propriety of the introduction of this Bill. There is a loud thinking going on in the country, not only in Mysore State but else where too that when prohibition is a failure-an utter failure—I do not know why the Hon'ble Minister should hasten to bring this Bill. Sir, it has been proved on all hands that prohibition is a total failure. Even the Government of Andhra Pradesh, finding that it is a total failure, have introduced it in another form calling it 'sweet toddy'.

Mr. SPEAKER.—If Prohibition is going to be scrapped, there is greater reason to levy the duties. What is happening is known to everybody. He should not mix up things. If there is no prohibition, should there be no such Bill?

Sri SANJEEVANATH AIKALA.—This may be necessary at a certain stage and not now. When we have carried on for seven years with the existing Act, what is the necessity for bringing a uniform law now? The Government could have waited for some more time. The Chief Minister the Finance Minister and also other Ministers have given expression that the prohibition policy has to be reconsidered. When that is the concensus of opinion, I do not see the necessity to bring this legislation. Regarding the different clauses, many Hon'ble Members have correctly and amply expressed. I only wish to point out one instance that happened in our district. Certain district officer siezed a toddy shop which had licence to sell neera. Inside the shop there was arrack as well as toddy. The entire room was locked and sealed. On the following morning, the Deputy Commissioner along with the Excise Officer went to the shop and got the room opened. To their utter surprise they found only water in the jars instead of arrack and toddy. So, the owner filed a defamation suit against the Deputy Commissioner that he was unnecessarily harassed. Consequently the matter went up and the officer was transferred.

Mr. SPEAKER.—What happened to the suit?

Sri SANJIVANATH AIKALA.—The suit was dissmissed it was proved later that the previous night the owner went inside the room by removing tiles and replaced the toddy with water.

I see no particular need to bring this piece of legislation now. I therefore request the Hon'ble Minister to withdraw this bill and if

necessary to bring it at a later stage when we have a better appraisal o prohibition policy.

5-00 P.M.

† Sri M. V. RAMA RAO.—I must first of all convey my thanks to the Hon'ble Members who have participated in this debate, and have given the Government the advantage of knowing their views in regard to excise adminstration in the State and particularly with reference to the way in which the officers of the Excise department have conducted themselves in particular contexts in dry districts and wet districts. Having said that I should proceed to deal some of the main objections which have been raised against the provisions of the present Bill.

First of all, it was said that the excise law is no longer necessary and that the policy of prohibition, if taken to its logical conclusion, should lead to the total repeal of the excise Act. I have no hesitation in saying that when the entire State goes dry, it would not be necessary to retain the Excise Act on the statute book. At the same time, so long as prohibition has not been enforced in one, two or three districts, the necessity for the Excise Act still remains and in so far as the necessity remains, provision has to be made for it. As I said at the time of commending this bill for the consideration of the House, at present we have no one, but three different enactments in force relating to this subject, the Hyderabad Abkari Act, the Madras Abkari Act and the Mysore Excise Act. It is with a view to have a single legislative enactment applicable to areas which are still wet in respect of the levy of excise duties, in respect of the manner of licensing and the manner of issuing authorisation and permits for the manufacture, possession. sale, transport and other matters connected with liquor, that this bill has been brought forward. The argument that was advanced by the Hon'ble Member who spoke last that this bill has been brought forward for as long as six or seven years and should have waited, for sometime more and that it should be withdrawn and in any case, should not have been brought forward at all because, prohibition, according to him, has been a total failure-that argument, as you, Sir, rightly pointed out, just misses the whole point because, if as he says, prohibition is a total failure and should be scrapped, the greater is the necessity for having a satisfactory excise law on the statute book which could replace the Prohibition Act after prohition is scrapped. As matters stand, the State has the necessity retaining booth the enactments on the statute book. The necessity is to have a Probibition Act in force in particular areas and the Excise Act in force in areas which are not dry and continue to be wet still. These enactments which deal largely with matters pertaining to liquor, manufacture, possession and sale and transport of liquor and other intoxicants, drugs, have, in the different areas, differnt impact upon the way in which this matter is dealt with from the administrative point of view. In the dry districts, this regulation and control is exercised under the

(SRI M. V. RAMA RAO)

Prohibition Act, that is, the law which was enacted two years ago and brought into existence a signle uniform legislative enactment replacing the different enactments which were in force prior to that date. Similarly, having brought into force an uniform Prohibition Act, and having still on our hands the liability of 3 districts which are still wet and have to become dry, we have the necessity for having uniform excise act in place of the 3 different enactments now in force.

Having said that I shall deal with the other objections that were raised to some of the main provisions in this Bill. Exception was taken against the penal provisions which provide for punishment of contravention of the law and for commission of certain other offences, as referred to in the different provisions. I do not see what apprehension there could at all be in the minds of any of the Hon'ble Members because as far as I have gathered from the substance of their speeches, everybody is anxious not only that the laws should be satisfactorily made but they should also be successfully enforced and implemented and in so far as that object is agreed upon by all sections of this House, I must say that investing powers to punish the offenders by the appropriate authorities such as the courts and other officers, must agreed to. There is no escape from it.

Then the other matter that was referred to was that the punishment to offenders commiting the offence for a second third or subsequent time, should be left to the discretion of the courts and various other suggestions of that kind were made. These suggestions can be examined in the Select Committee, to which this bill would have to go after I make the motion for reference to the Joint Select Committee of this Bill. The main point with which we are concerned when dealing with excise law is whether having regard to the fact that liquor is being manufactured and is being transported and is being sold and is being consumed, we should not have a law regulating and controlling all these transactions in liquor and to the extent to which that necessity is there, the justification of this bill is self-evident. Having said that I commend this motion for consideration of this Bill for acceptance of this House.

MR. SPEAKER.—The question is:

"That the Mysore Excise Bill, 1962, be taken into consideration."

The motion was adopted.

Motion to refer to a Joint Select Committee—

SRI M. V. RAMARAO.—I beg to move:

"That the Mysore Excise Bill, 1962, be referred to a Joint Select Committee consisting of a total number of 20 members, 15 members from the Legislative Assembly and 5 Members, from the Legislative Council and that the concurrence of the

Legislative Council, be obtained therefor and that the following members of this House shall be members of the Joint Select Committee, namely :—

Sriyuths:

1 H. D. Deve Gowda
2 Gangadhar Namoshi
3 T. S. Sivanna
4 K. Lakkappa
5 Vidhayadhar Guruji
6 S. Rudrappa
7 M. R. Pattanshetty
8 K. M. Devayya
9 Kadidal Manjappa
10 M. N. Naghnoor
11 A. P. Appanna
12 A. G. Bandi Gowda
13 T. G. Satyanarayana
14 M. Madhwa Raj
15 Smt. G. C. Bhageeratamma."

Mr. SPEAKER.—The question is :

"That the Mysore Excise Bill, 1962, be referred to a Joint Select Committee Consisting of a total number of 20 members, 15 members from the Legislative Assembly and 5 members from the Legislative Council and that the concurrence of the Legislative Council be obtained therefor and the following Members of this House shall be Members of the Joint Select Committee, namely :—

Sriyuts—

1 H. D. Deve Gowda,
2 Gangadhar Namoshi,
3 T. S. Sivanna,
4 K. Lakkappa,
5 Vidyadhar Guruji,
6 S. Rudrappa,
7 M. R. Pattan Setty
8 K. M. Devayya,
9 Kadidal Manjappa,
10 M. N. Naghnoor,
11 A. P. Appanna,
12 A. G. Bandi Gowda,
13 T. G. Satyanarayana,
14 M. Madhvaraj,
15 Smt. G. C. Bhageeratamma."

The motion was adopted.

Mr. SPEAKER.—Under sub-rule (2) of Rule 240 of the Rules of Procedure and Conduct of Business in the Mysore Legislative Assembly, I nominate the Hon'ble Minister in charge of the Department, namely, the Minister of Law as a Member of the Joint Select Committee.

OFFICIAL RESOLUTION *re*: APPROVAL OF THE DRAFT RULES, *viz.* COTTON TRANSPORT (MYSORE) RULES, 1963.

Sri G. NARAYANA GOWDA (Minister for Agriculture).—Sir, I move :

> "That the following draft rules called the Cotton Transport (Mysore) Rules, 1963, which it is proposed to make in exercise of the powers conferred by Section 7 of the Cotton Transpart Act, 1923 (Central Act 3 of 1923), be approved."

Mr. SPEAKER.—Resolution moved :

> "That the following draft rules called the Cotton Transport (Mysore) Rules, 1963, which it is proposed to make in exercise of the powers conferred by Section 7 of the Cotton Transport Act, 1923 (Central Act 3 of 1923), be approved."

Sri H. R. KESHAVA MURTHY.—I want a clarification from the Chair, Sir. Now there is no Central Act after the Independence. This Act refers to the pre-Independence Act.

Mr. SPEAKER.—Let me see : I have not been able to go fast. I always go a little slow. Does the member concede that the Act is in force ?

Sri H. R. KESHAVA MURTHY.—I have caught your point, Sir. I only request the chair to kindly help me when the Act he is bringing is not in force and when it relates to pre-Independence period, how can we draft rules ?

Mr. SPEAKER.—Does the Hon'ble Member think that all those Acts are wiped out because of Independence ? To the extent they are repugnant to the provisions of the Constitution, they shall be deemed to be abrogated. Otherwise, they are all in force.

† ಶ್ರೀ ಜಿ. ನಾರಾಯಣಗೌಡ.—ಸ್ವಾಮೀ, 1923ನೇ ಇಸವಿಯಲ್ಲಿ ಆಗಿದ್ದ ಕಾಟನ್ ಕಾನೂನಿನ ಏಳನೇ ಸೆಕ್ಷನ್ನಿನ ಪ್ರಕಾರ ಈ ರಾಜ್ಯ ಸರಕಾರಕ್ಕೆ ಇಂತಹ ರೂಲ್ಸುಗಳನ್ನು ಮಾಡುವುದಕ್ಕೆ ಅಧಿಕಾರವನ್ನು ಕೊಡಲಾಗಿದೆ. ಈ ಕಾನೂನು ಪ್ರಕಾರವಾಗಿ ನಮ್ಮಲ್ಲಿರುವ ಹತ್ತಿಯ ಕ್ವಾಲಿಟಿ ಮತ್ತು ರೆಪ್ಯೂಟೇಷನ್ನು ಇವುಗಳನ್ನು ಸರಿಯಾಗಿಟ್ಟುಕೊಳ್ಳುವುದಕ್ಕೋಸ್ಕರ ಈ ಕಾನೂನನ್ನು ಮಾಡಿಸಿರುವುದು ಇದರಲ್ಲಿರುವ ಮೂರನೇ ಸೆಕ್ಷನ್ನಿನ ಪ್ರಕಾರ ಪ್ರೊಟೆಕ್ಟೆಡ್ದು ಏರಿಯಾ ಎಂದು ಯಾವುದಾದರೂ ಏರಿಯಾವನ್ನು ನೋಟಿಫೈ ಮಾಡುವುದಕ್ಕಾಗಿ ರಾಜ್ಯ ಸರಕಾರಗಳಿಗೆ ಇದರಲ್ಲಿ ಒಂದು ಅಧಿಕಾರ ಕೊಟ್ಟಿದ್ದಾರೆ. ಇದರ ಪ್ರಕಾರ ಪ್ರೊಟೆಕ್ಟೆಡ್ದು ಏರಿಯಾದೊಳಗೆ ಬೇರೆ ಹತ್ತಿಯನ್ನು ತೆಗೆದುಕೊಂಡು ಹೋಗಬೇಕಾದರೆ, ಅದಕ್ಕೋಸ್ಕರ ಲೈಸೆನ್ಸು ಪಡೆದು ಹೋಗಬೇಕು. ಉದಾಹರಣೆಯಾಗಿ ಪ್ರೊಟೆಕ್ಟೆಡ್ ಏರಿಯಾಗೋಸ್ಕರ ಹಾಸಿಗೆ ಮಾಡುವುದಕ್ಕೆ ಬೇರೆ ಹತ್ತಿ, Long staple and short staple ಇತ್ಯಾದಿಗಳನ್ನು ಕೊಳ್ಳಬೇಕಾದರೆ ನಿರ್ಬಂಧವಿದೆ ಮತ್ತು ಇದಕ್ಕೆ ಲೈಸನ್ಸು ಬೇಕಾಗುತ್ತದೆ. ಲೆಸನ್ಸು ಕೊಡುವಾಗ ಯಾವ ಯಾವ ಷರತ್ತುಗಳಿರಬೇಕು, ಯಾರು ಕೊಡಬೇಕು, ಹೇಗೆ